24 January 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 81 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ಜೀವನದಲ್ಲಿ ಕಲಿಕೆ ನಿರಂತರ,
ಏಕೆಂದರೆ ಬದುಕು ಬೋಧಿಸುವುದನ್ನು
ಯಾವುತ್ತೂ ನಿಲ್ಲಿಸುವುದಿಲ್ಲ!
-ಸ್ನೇಹಾ ಆನಂದ್



ರಾಜ್ಯಪಾಲರ ನಡೆಗೆ ವಿರೋಧ: ಮೈಸೂರಲ್ಲಿ ಕಾಂಗ್ರೆಸ್ ಪ್ರತಿಭಟನೆ — ಪುಟ ಸಂ. 2



ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಉಸ್ತುವಾರಿ ಸಚಿವ ಗರಂ — ಪುಟ ಸಂ. 3



ಎಚ್‌ಡಿಕೆ ರಾಜ್ಯ ರಾಜಕರಣಕ್ಕೆ ಚರ್ಚೆಗೆ ಮುಂದಿನ ದಿನಗಳಲ್ಲಿ ಉತ್ತರ — ಪುಟ ಸಂ. 4



ಶಿವಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ ಶ್ರೀ ಮಾರಮ್ಮ ದೇವಿ ದೇವಾಲಯ ಉದ್ಘಾಟನೆ ಸಮಾರಂಭದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು.

# ರಾಜ್ಯ ರಾಜಕಾರಣಕ್ಕೆ ಎಚ್‌ಡಿಕೆ?

## ರಾಜ್ಯವೇ ನನ್ನ ಪರಿಮಿತಿ | ಕೇಂದ್ರ ಸಚಿವ ಕುಮಾರಸ್ವಾಮಿ ಮುನ್ಸೂಚನೆ

**ಮಂಡ್ಯ:** ರಾಜ್ಯದ ಜನರು ನನ್ನ ಸ್ಪರ್ಧೆಯನ್ನು ಎಲ್ಲಿ ಅಪೇಕ್ಷೆ ಮಾಡುತ್ತಾರೆ ಅಲ್ಲಿಂದ ಸ್ಪರ್ಧೆ ಮಾಡುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಮೇಲುಕೋಟೆ ಸಮೀಪದ ಶಿವಳ್ಳಿ ಗ್ರಾಮದಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ರಾಜ್ಯ ರಾಜಕಾರಣಕ್ಕೆ ವಾಪಸ್ ಬರುತ್ತೀರಾ ಎನ್ನುವ ಪ್ರಶ್ನೆಗೆ ಅವರು ಪ್ರತಿಕ್ರಿಯೆ ನೀಡಿದ ಅವರು, ಕರ್ನಾಟಕ ರಾಜ್ಯವೇ ನನ್ನ ಪರಿಮಿತಿ ಎಂದರು. ಈ ಮೂಲಕ ರಾಜ್ಯ ರಾಜಕಾರಣಕ್ಕೆ ಮರಳುವ ಸ್ಪಷ್ಟ ಸೂಚನೆಯನ್ನು ಅವರು ನೀಡಿದರು.

ಮಂಡ್ಯದಿಂದ ಲೋಕಸಭೆ ಚುನಾವಣೆಗೆ ನಿಲ್ಲುವ ಉದ್ದೇಶ ಇರಲಿಲ್ಲ. ಸಿ.ಎಸ್.ಪುಟ್ಟರಾಜು ಅವರನ್ನು ನಿಲ್ಲಿಸಬೇಕು ಎಂದುಕೊಂಡಿದ್ದೆ. ಅನಿವಾರ್ಯವಾಗಿ ನಾನು ಎಲೆಕ್ಷನ್‌ಗೆ ನಿಲ್ಲಬೇಕಾಯಿತು. ಸಂಸದನಾಗ್ತೀನಿ, ಕೇಂದ್ರ ಮಂತ್ರಿ ಆಗ್ತೀನಿ ಎಂದು ನನಗೆ ಗೊತ್ತಿರಲಿಲ್ಲ. ನಮ್ಮ ಪುಟ 2ಕ್ಕೆ



### ಚರ್ಚಿಸಿ ಮೈತ್ರಿ ತೀರ್ಮಾನ

**ರಾಜ್ಯದ ಸ್ಥಳೀಯ ಚುನಾವಣೆಯಲ್ಲಿ ಮೈತ್ರಿ ಇಲ್ಲ ಎಂಬ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಹೇಳಿಕೆ ಬಗ್ಗೆ ಕೇಳಲಾದ ಪ್ರಶ್ನೆಗೆ, ಕಾಂಗ್ರೆಸ್ ಕೆಟ್ಟ ಆಡಳಿತವನ್ನು ಕಿತ್ತೊಗೆಯಲು ಜೆಡಿಎಸ್–ಬಿಜೆಪಿ ಒಟ್ಟಾಗಿ ಹೋರಾಟ ನಡೆಸುತ್ತವೆ. ಈ ಹಿನ್ನೆಲೆಯಲ್ಲಿ ಜನರ ನಿರೀಕ್ಷೆಗೆ ತಕ್ಕಂತೆ ನಾವು ಮೈತ್ರಿ ಬಗ್ಗೆ ಅಂತಿಮ ತೀರ್ಮಾನ ಮಾಡುತ್ತೇವೆ ಎಂದು ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.**



## ರಾಜ್ಯಪಾಲರ ವಿರುದ್ಧ ಟೀಕೆ: ಕಾಂಗ್ರೆಸ್ ರಾಜಕೀಯ ನಾಟಕ: ಕುಮಾರಸ್ವಾಮಿ

**ಮಂಡ್ಯ:** ರಾಜ್ಯಪಾಲರ ವಿರುದ್ಧ ಗೋ ಬ್ಯಾಕ್ ಗವರ್ನರ್ ಪ್ರತಿಭಟನೆಗೆ ಮುಂದಾಗಿರುವ ರಾಜ್ಯ ಕಾಂಗ್ರೆಸ್ ನಿಂದ ಏನೂ ಸಾಧಿಸಲು ಸಾಧ್ಯವಿಲ್ಲ. ಇಂತಹ ಸಂಘರ್ಷಗಳಿಂದ ರಾಜ್ಯದ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆಯೇ? ಕೇವಲ ಇದು ರಾಜಕೀಯ ನಾಟಕ ಎಂದು ಕೇಂದ್ರಸಚಿವ ಎಚ್.ಡಿ.ಕುಮಾರಸ್ವಾಮಿ ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

ಮೇಲುಕೋಟೆಯಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ಈ ಹಿಂದೆ ಕಾಂಗ್ರೆಸ್ ರಾಜ್ಯಪಾಲರ ವಿಷಯದಲ್ಲಿ ಹೇಗೆ ನಡೆದುಕೊಂಡಿತ್ತು ಎಂಬುದನ್ನು ನೆನಪು ಮಾಡಿಕೊಂಡರೆ ಇವರ ಬಣ್ಣ ಬಯಲಾಗುತ್ತದೆ. ರಾಜ್ಯಪಾಲರು ಭಾಷಣ ಓದದಿರುವ ಅಥವಾ ಮೊಟಕುಗೊಳಿಸಿರುವ ಘಟನೆ ಇದೇ ರಾಜ್ಯದಲ್ಲಿ ಮೊದಲ ಬಾರಿ ನಡೆದದ್ದಲ್ಲ. ಜೆ.ಎಚ್.ಪಟೇಲ್ ಅವರು ಸಿಎಂ ಆಗಿದ್ದಾಗ ಡಿಸಿಎಂ ಆಗಿದ್ದ ಸಿದ್ದರಾಮಯ್ಯ ಅವರು ಅಂದಿನ ಸಂದರ್ಭವನ್ನು ನೆನಪು ಮಾಡಿಕೊಳ್ಳಬೇಕು ಎಂದು ತಿರುಗೇಟು ನೀಡಿದರು. ರಾಜ್ಯ ಸರ್ಕಾರದಲ್ಲಿ ಹಲವು ಅಕ್ರಮಗಳು ನಡೆದಿವೆ. ಕಾನೂನು ಬಾಹಿರ ನಿರ್ಧಾರಗಳ ಬಗ್ಗೆ ರಾಜ್ಯಪಾಲರು ಕ್ರಮ ಕೈಗೊಳ್ಳುವ ಅವಕಾಶ ಇದ್ದರೂ ಬೇರೆ ರಾಜ್ಯಗಳ ರಾಜ್ಯಪಾಲರ ರೀತಿ ಸಂಘರ್ಷ ಮಾಡಲಿಲ್ಲ. ಅದನ್ನು ಈ ಸರ್ಕಾರ ಅರ್ಥ ಮಾಡಿಕೊಂಡಿಲ್ಲ. ಕೇಂದ್ರ ಸರ್ಕಾರದ ಜತೆ ರಾಜ್ಯ ಸರ್ಕಾರ ವಿಶ್ವಾಸದಲ್ಲಿ ಇಲ್ಲ. ಇವರ ತಪ್ಪಿನಿಂದ ಕೆಲ ರಾಷ್ಟ್ರೀಯ ಹೆದ್ದಾರಿ ಯೋಜನೆಗಳು ವಾಪಸ್ ಹೋಗಿವೆ. ಇದಕ್ಕೆ ಹೊಣೆ ಯಾರು? ಎಂದು ಅವರು ಪ್ರಶ್ನಿಸಿದರು.

### ಅಕ್ರಮ ಮರೆಮಾಚಲು ಕೈ ಅಪಪ್ರಚಾರ

**ಕಳೆದ ಎರಡೂ ಮುಕ್ಕಾಲು ವರ್ಷಗಳಲ್ಲಿ ನಡೆಸಿರುವ ಅನ್ಯಾಯ, ಅಕ್ರಮಗಳನ್ನು ಮರೆಮಾಚಲು ವಿಬಿ ಜಿ ರಾಮ್ ಜಿ ಯೋಜನೆಯ ಬಗ್ಗೆ ಕಾಂಗ್ರೆಸ್ ಸರ್ಕಾರ ಅಪಪ್ರಚಾರ ಮಾಡುತ್ತಿದೆ. ಪದೇ ಪದೇ ದಲಿತರ ಹೆಸರು ಬಳಸಿ ತಮ್ಮ ಸ್ಥಾನಮಾನ ಗಟ್ಟಿಗೊಳಿಸುವ ಪ್ರಯತ್ನದಲ್ಲಿದ್ದಾರೆ. ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ, ವರ್ಗದ ಜನರಿಗೆ ಮೀಸಲಿಟ್ಟಿದ್ದ ಹಣವನ್ನು ಗ್ಯಾರಂಟಿಗಳಿಗೆ ಬಳಸಿದ್ದಾರೆ. ಇದು ದಲಿತರ ಉದ್ಧಾರವೇ? ಎಂದು ಕುಮಾರಸ್ವಾಮಿ ಕಿಡಿಕಾರಿದರು.**

# ಕೈಗಾರಿಕೆಗೆ ಜಾಗ: ಸಿಎಂಗೆ ಪತ್ರ

## ಮಂಡ್ಯದಲ್ಲಿ ಕೇಂದ್ರ ಸರ್ಕಾರದಿಂದ ಕೈಗಾರಿಕೆ ಸ್ಥಾಪನೆ ಯತ್ನ

**ಮಂಡ್ಯ:** ಜಿಲ್ಲೆಯಲ್ಲಿ ಕೈಗಾರಿಕೆಗೆ ಪೂರಕ ವಾತಾವರಣ ನಿರ್ಮಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದಿಂದ ಕೈಗಾರಿಕೆ ಸ್ಥಾಪನೆ ಮಾಡುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಪಾಂಡವಪುರ ತಾಲ್ಲೂಕಿನ ಶಿವಳ್ಳಿ ಗ್ರಾಮದಲ್ಲಿ ಶುಕ್ರವಾರ ಮಾರಮ್ಮ ದೇವಿ ದೇವಾಲಯ ಉದ್ಘಾಟನೆ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮಂಡ್ಯದಲ್ಲಿ ಕೇಂದ್ರ ಸರ್ಕಾರಿ ಸ್ವಾಮ್ಯದ ಆಟೋಮೇಟಿವ್ ರೀಸರ್ಚ್ ಅಸೋಸಿಯೆಷನ್ ಆಫ್ ಇಂಡಿಯಾ (ಎ.ಆರ್.ಎ.ಐ) ಸಂಸ್ಥೆ ಸ್ಥಾಪಿಸಲು ಜಾಗ ಕೊಡುವಂತೆ ಮುಖ್ಯಮಂತ್ರಿಗೆ ಪತ್ರ ಬರೆದಿದ್ದೇನೆ ಎಂದು ಮಾಹಿತಿ ನೀಡಿದರು.

ಮಂಡ್ಯ ಜಿಲ್ಲೆಗೆ ಏನು ಮಾಡಬೇಕು ಎಂಬುದು ಖಂಡಿತ ನನಗೆ ಗೊತ್ತಿದೆ. ಈ ಬಗ್ಗೆ ಬೇರೆ ಯಾರ ಸರ್ಟಿಫಿಕೇಟ್ ಬೇಕಿಲ್ಲ. ಈ ಬಗ್ಗೆ ನಾನೇ ಸಿಎಂಗೆ ಪತ್ರ ಬರೆದಿದ್ದೇನೆ. ಇದರಲ್ಲಿ ಅನವಶ್ಯಕ ರಾಜಕೀಯ ಅಗತ್ಯ ಇಲ್ಲ. ಜಿಲ್ಲೆಯ ಅಭಿವೃದ್ಧಿ ಎಲ್ಲರ ಜವಾಬ್ದಾರಿ. ಜಿಲ್ಲಾಧಿಕಾರಿ ಜಾಗ ಇಲ್ಲ ಎಂದು ಹೇಳಿದ್ದರು. ಶಾಸಕರಿಗೆ ಜಾಗ ಕೊಡುವ ಅವಕಾಶ ಇದೆಯೇ? ಇದೇ ವಿಚಾರ ಇಟ್ಟುಕೊಂಡು ಕಾಂಗ್ರೆಸ್ಸಿಗರು ರಾಜಕೀಯ ಮಾಡುತ್ತಿದ್ದಾರೆ ಎಂದು ಎಚ್‌ಡಿಕೆ ಬೇಸರ ವ್ಯಕ್ತಪಡಿಸಿದರು.

ಮಂಡ್ಯಕ್ಕೆ ಕೈಗಾರಿಕೆ ತರಲು ಎಷ್ಟು ಶ್ರಮ ಹಾಕುತ್ತಿದ್ದೇನೆ ಅನ್ನುವುದು ನನಗೆ ಮಾತ್ರ ಗೊತ್ತು. ರಾಜಕೀಯವಾಗಿ ಟೀಕೆ ಸಾಮಾನ್ಯ. ಜಿಲ್ಲೆಗೆ ಒಳ್ಳೆದಾಗಬೇಕು ಎಂದರೆ ಜೆಡಿಎಸ್ ಒದ್ದೋಡಿಸಬೇಕು ಎಂದಿದ್ದಾರೆ. ಮುಂದಿನ ದಿನಗಳಲ್ಲಿ ಯಾರು ಯಾರನ್ನು ಒದ್ದೋಡಿಸುತ್ತಾರೆ ಅನ್ನುವುದು ಗೊತ್ತಾಗುತ್ತದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

## ರಾಜ್ಯದಲ್ಲಿ ಬ್ರೋಕರ್ ಸರ್ಕಾರ

**ರಾಜ್ಯ ಕಾಂಗ್ರೆಸ್ ಸರ್ಕಾರ ರೈತರ ಪರ ಇಲ್ಲ. ದಲ್ಲಾಳಿಗಳಿಗೆ ಲಾಭ ಮಾಡಿಕೊಡುವ ಬ್ರೋಕರ್ ಸರ್ಕಾರ. ರೈತರು ಹೆಚ್ಚು ಬೆಳೆ ಬೆಳೆದಾಗ ಸರ್ಕಾರ ಖರೀದಿ ಕೇಂದ್ರ ತೆರೆಯಲ್ಲ. ಅಂಥ ಸಂದರ್ಭದಲ್ಲಿ ಬೆಲೆ ಕುಸಿತವಾಗುತ್ತದೆ. ಖಾಸಗಿಯವರು ಬಂದು ಎಲ್ಲ ಬೆಳೆಯನ್ನು ಅಗ್ಗದ ಬೆಲೆಗೆ ಖರೀದಿಸಿದ ಮೇಲೆ ಖರೀದಿ ಕೇಂದ್ರಗಳನ್ನು ತೆರೆಯುತ್ತದೆ ಎಂದು ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.ರೇರ್ ಅರ್ಥ್ ಮ್ಯಾಗ್ನೆಟಿಕ್ ಕಾರ್ಖಾನೆ ಸ್ಥಾಪಿಸಲು ಕರ್ನಾಟಕದವರೇ ಪ್ರಸ್ತಾವ ಸಲ್ಲಿಸಿದ್ದರು. ಅವರು ನನ್ನಲ್ಲಿಗೆ ಬಂದಿದ್ದರು. ಮಂಡ್ಯದಲ್ಲೇ ಕೈಗಾರಿಕೆ ಸ್ಥಾಪಿಸುವಂತೆ ಕೇಳಿದರೆ ಕರ್ನಾಟಕ ಸರ್ಕಾರ ಬೆಂಬಲ ಕೊಡಲ್ಲ ಬೇಡ ಎಂದು ದೂರುತ್ತಾರೆ. ವಿಶಾಖಪಟ್ಟಣದಲ್ಲಿ ಜಾಗ ಕೊಡಿಸಿ ಎಂದು ಕೇಳಿದರು. ರಾಜ್ಯದಲ್ಲಿ ಇಂಥ ಕೆಟ್ಟ ಪರಿಸ್ಥಿತಿ ಸೃಷ್ಟಿ ಮಾಡಿದ್ದು ಯಾರು? ಸರ್ಕಾರ ಅಲ್ಲವೇ? ಇದು ದರಿದ್ರ ಸರ್ಕಾರ. ಇವರಿಗೆ ಅಭಿವೃದ್ಧಿ ಬೇಕಿಲ್ಲ. ಈ ಸರ್ಕಾರದ ಯಾವುದೇ ಸಚಿವರು ಅಭಿವೃದ್ಧಿ ವಿಚಾರವಾಗಿ ನನ್ನೊಂದಿಗೆ ಚರ್ಚಿಸಿಲ್ಲ. ಕೈಗಾರಿಕೆ ಅಷ್ಟೇ ಅಲ್ಲ, ಬೇರೆ ಯಾವ ಅಭಿವೃದ್ಧಿ ಕೆಲಸಕ್ಕೆ ಕೂಡ ಯಾರು ನಮ್ಮನ್ನು ಭೇಟಿ ಮಾಡಿ ಚರ್ಚೆ ನಡೆಸಿಲ್ಲ ಎಂದು ಅವರು ಕಿಡಿಕಾರಿದರು.**

## 2,500 ಕೋಟಿ ಅಬಕಾರಿ ಹಗರಣ: ತಿಮ್ಮಾಪುರ ರಾಜೀನಾಮೆಗೆ ಒತ್ತಾಯ

**ಬೆಂಗಳೂರು:** ರಾಜ್ಯದ ಅಬಕಾರಿ ಇಲಾಖೆಯಲ್ಲಿ 2,500 ಕೋಟಿ ಹಗರಣ ನಡೆದಿರುವ ಹಿನ್ನೆಲೆಯಲ್ಲಿ ಅಬಕಾರಿ ಸಚಿವ ಆರ್.ಬಿ ತಿಮ್ಮಾಪುರ ರಾಜೀನಾಮೆ ನೀಡಬೇಕು ಎಂದು ವಿರೋಧ ಪಕ್ಷ ಬಿಜೆಪಿ ಶುಕ್ರವಾರ ವಿಧಾನಸಭೆಯಲ್ಲಿ ಆಗ್ರಹಿಸಿದೆ.



ವಿಧಾನಸಭೆಯಲ್ಲಿ ಶುಕ್ರವಾರ ವಿಷಯ ಪ್ರಸ್ತಾಪಿಸಿದ ವಿಪಕ್ಷ ನಾಯಕ ಆರ್.ಅಶೋಕ್, ಮದ್ಯ ಪರವಾನಗಿ ಮೂಲಕ ಸಂಗ್ರಹಿಸಲಾದ ಲಂಚವನ್ನು ಅಸ್ಸಾಂ ಮತ್ತು ಕೇರಳ ಸೇರಿದಂತೆ ಚುನಾವಣೆ ನಡೆಯುವ ರಾಜ್ಯಗಳಲ್ಲಿ ಚುನಾವಣಾ ವೆಚ್ಚಕ್ಕೆ ಬಳಸಲಾಗುತ್ತಿದೆ. ನಿಗದಿತ ನಿಯಮಗಳನ್ನು ಉಲ್ಲಂಘಿಸಿ ಮದ್ಯ ಪರವಾನಗಿಗಳನ್ನು ಹರಾಜು ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಅಬಕಾರಿ ಹಗರಣದ ಕುರಿತು ಚರ್ಚೆಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸ್ಪೀಕರ್, ಈ ವಿಷಯವನ್ನು ನಂತರ ಬೇರೆ ನಿಯಮದಡಿಯಲ್ಲಿ ಚರ್ಚಿಸಬಹುದು ಎಂದು ಹೇಳಿದರು.

ಕಾಂಗ್ರೆಸ್ ಶಾಸಕ ಪೊನ್ನಣ್ಣ ಅವರಿಗೆ ರಾಜ್ಯಪಾಲರ ಭಾಷಣದ ಪುಟ 2ಕ್ಕೆ

# ಉಭಯ ಸದನದಲ್ಲಿ ಗದ್ದಲ, ಕೋಲಾಹಲ

## ಅಧಿವೇಶದಲ್ಲಿ ರಾಜ್ಯಪಾಲರಿಗೆ ಅವಮಾನ | ಕ್ರಮಕ್ಕೆ ವಿಪಕ್ಷಗಳ ಆಗ್ರಹ

**ಬೆಂಗಳೂರು:** ರಾಜ್ಯಪಾಲರು ಜಂಟಿ ಅಧಿವೇಶದಲ್ಲಿ ಮಾಡಿದ 2 ನಿಮಿಷದ ಭಾಷಣ ವಿಧಾನಸಭೆಯಲ್ಲಿ ಶುಕ್ರವಾರ ಗದ್ದಲ, ಕೋಲಾಹಲಕ್ಕೆ ಕಾರಣವಾಯಿತು. ಆಡಳಿತ ಮತ್ತು ವಿಪಕ್ಷಗಳ ನಡುವೆ ವಾಕ್ಸಮರ, ಟೀಕೆ ನಿಂದನೆಗೂ ವೇದಿಕೆ ಆಯಿತು.



ವಿಪಕ್ಷ ನಾಯಕ ಆರ್.ಅಶೋಕ್ ಮಾತಾಡಿ, ಅಧಿವೇಶನದಲ್ಲಿ ರಾಜ್ಯಪಾಲರಿಗೆ ಕಾಂಗ್ರೆಸ್ ಸದಸ್ಯರು ಅಗೌರವ ತೋರಿದ್ದಾರೆ. ಅವರ ವಿರುದ್ಧ ಶಿಸ್ತುಕ್ರಮ ಆಗಬೇಕು. ನಮ್ಮ 18 ಶಾಸಕರು ಸ್ಪೀಕರ್ ಪೀಠಕ್ಕೆ ಅಗೌರವ ಮಾಡಿದ್ದಾರೆ ಎಂದು ಅಮಾನತು ಮಾಡಲಾಗಿತ್ತು. ಈಗ ರಾಜ್ಯಪಾಲರಿಗೆ ಅಗೌರವ ತೋರಿದವರ ವಿರುದ್ಧ ಸ್ಪೀಕರ್ ರೂಲಿಂಗ್ ಕೊಡಬೇಕು ಎಂದು ಆಗ್ರಹಿಸಿದರು.

ರಾಜ್ಯಪಾಲರು ವಿವೇಚನೆಯಿಂದಲೇ ಭಾಷಣ ಮಾಡಿದ್ದಾರೆ. ಆದರೆ ಎಚ್.ಕೆ.ಪಾಟೀಲ್ ಅವರು ರಾಜ್ಯಪಾಲರಿಗೆ ಓಡಿ ಹೋದರು ಅಂದಿದ್ದು ಸರಿಯಲ್ಲ. ಪುಟ 2ಕ್ಕೆ

### ಹರಿಪ್ರಸಾದ್ ವಿರುದ್ಧ ಕ್ರಮಕ್ಕೆ ಬಿಜೆಪಿ ಆಗ್ರಹ

**ಬೆಂಗಳೂರು:** ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಅವಮಾನಿಸಿರುವ ಕಾಂಗ್ರೆಸ್ ಸದಸ್ಯ ಬಿ ಕೆ ಹರಿಪ್ರಸಾದ್ ಅವರನ್ನು ಸದನದಿಂದ ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿ ಪ್ರತಿಪಕ್ಷ ಬಿಜೆಪಿ ಸದಸ್ಯರು ಶುಕ್ರವಾರ ವಿಧಾನ ಪರಿಷತ್ ನಲ್ಲಿ ಗದ್ದಲ ಉಂಟುಮಾಡಿದ್ದರಿಂದ ಕಲಾಪವನ್ನು ಕೆಲಕಾಲ ಮುಂದೂಡಲಾಯಿತು.



ರಾಜ್ಯಪಾಲರೊಂದಿಗೆ ಅಶಿಸ್ತಿನ ವರ್ತನೆ ತೋರಿದ ಹರಿಪ್ರಸಾದ್ ಅವರನ್ನು ಸದನದಿಂದ ವಜಾಗೊಳಿಸುವಂತೆ ಬಿಜೆಪಿ ಶಾಸಕರು ಒತ್ತಾಯಿಸಿದರು. ಪುಟ 2ಕ್ಕೆ

## ಪೌರಾಯುಕ್ತೆಗೆ ಧಮ್ಕಿ: ರಾಜೀವ್ ಗೌಡಗೆ ಕಾಂಗ್ರೆಸ್ ಗೇಟ್ ಪಾಸ್

**ಬೆಂಗಳೂರು:** ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಸಿದ್ದ ಪ್ರಕರಣ ಸಂಬಂಧ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರನ್ನು ಕೆಪಿಸಿಸಿಯಿಂದ ಅಮಾನತು ಮಾಡಲಾಗಿದೆ.

ಕೆಪಿಸಿಸಿ ಶಿಸ್ತುಪಾಲನಾ ಸಮಿತಿ ಅಮಾನತು ಆದೇಶ ಹೊರಡಿಸಿದೆ. ಪೌರಾಯುಕ್ತೆಗೆ ಬೆದರಿಸಿದ ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಾಗುತ್ತಿದ್ದಂತೆ ತನ್ನ ಮೊಬೈಲ್ ಸ್ವಿಚ್‌ಆಫ್ ಮಾಡಿಕೊಂಡು ರಾಜೀವ್ ಗೌಡ ಪರಾರಿ ಆಗಿದ್ದಾನೆ.

ಸಚಿವ ಜಮೀರ್ ಅಹ್ಮದ್ ಪುತ್ರ ಝೈದ್ ಖಾನ್ ನಟನೆಯ ಕಲ್ಟ್ ಸಿನಿಮಾ ಫ್ಲೆಕ್ಸ್ ತೆರವುಗೊಳಿಸಿದ್ದಕ್ಕೆ ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆಗೆ ಧಮ್ಕಿ ಹಾಕಿದ್ದ ಪ್ರಕರಣ ಸಂಬಂಧ ರಾಜೀವ್ ಗೌಡಗೆ ಪುಟ 2ಕ್ಕೆ

## ಪ್ರಜ್ವಲ್ ಅಪರಾಧ ಸಾಬೀತು: ಪೊಲೀಸರಿಗೆ 35 ಲಕ್ಷ ಬಹುಮಾನ

**ಬೆಂಗಳೂರು:** ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ದಾಖಲಿಸಿದ್ದ ಅತ್ಯಾಚಾರ ಅಪರಾಧ ಪ್ರಕರಣ ಸಾಬೀತುಪಡಿಸಿದ ತನಿಖಾ ತಂಡದ ಪೊಲೀಸರಿಗೆ ರಾಜ್ಯ ಸರ್ಕಾರ 35 ಲಕ್ಷ ರೂ. ನಗದು ಬಹುಮಾನ ಘೋಷಿಸಿದೆ.



ತನಿಖಾ ತಂಡದ 30 ಅಧಿಕಾರಿ, ಸಿಬ್ಬಂದಿಗೆ ನಗದು ಬಹುಮಾನ ಘೋಷಣೆ ಮಾಡಲಾಗಿದೆ. ಎಸ್‌ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್, ಡಿಐಜಿ ಸೀಮಾ ಲಾಟ್ಕರ್, ಎಸ್‌ಪಿ ಸುಮನ್ ಡಿ ಪನ್ನೇಕರ್, ಎಸ್‌ಪಿ, ಸಿಎ ಸೈಮನ್, ಎಸಿಪಿ ಸತ್ಯನಾರಾಯಣ ಸಿಂಗ್, ಇನ್ಸ್‌ಪೆಕ್ಟರ್‌ಗಳಾದ ರಾವ್ ಗಣೇಶ್ ಜನಾರ್ದನ್, ಶೋಭಾ ಜಿ, ಸುಮಾರಾಣಿ, ಹೇಮಂತ್ ಕುಮಾರ್ ಸೇರಿದಂತೆ 30 ಮಂದಿ ಅಧಿಕಾರಿಗಳು, ಸಿಬ್ಬಂದಿಗೆ 35 ಲಕ್ಷ ರೂ. ನಗದು ಬಹುಮಾನ ಘೋಷಿಸಲಾಗಿದೆ. ಪೊಲೀಸ್ ಇಲಾಖೆಯಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ ಅಧಿಕಾರಿ, ಸಿಬ್ಬಂದಿಗೆ ಸರ್ಕಾರದಿಂದ ವಿವಿಧ ದರ್ಜೆ ಅಧಿಕಾರಿ, ಸಿಬ್ಬಂದಿಗೆ ನಗದು ಬಹುಮಾನ ಮಂಜೂರು ಮಾಡಲಾಗಿದೆ. ಒಟ್ಟಾರೆ 35 ಲಕ್ಷ ರೂ. ಬಹುಮಾನವನ್ನು ಪೊಲೀಸ್ ಇಲಾಖೆ ಘೋಷಿಸಿದೆ.

## ಚಿನ್ನ, ಬೆಳ್ಳಿಗೆ ದಾಖಲೆ ಬೆಲೆ




**ನವದೆಹಲಿ:** ಚಿನ್ನ ಮತ್ತು ಬೆಳ್ಳಿ ಬೆಲೆ ಶುಕ್ರವಾರ ದಾಖಲೆಯ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ. ಗುರುವಾರ ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿದ್ದ ಚಿನ್ನ ಮತ್ತು ಬೆಳ್ಳಿ ಬೆಲೆ ಮತ್ತೆ ಐತಿಹಾಸಿಕ ದಾಖಲೆ ಬರೆದಿದೆ. 24 ಕ್ಯಾರೆಟ್ ಚಿನ್ನದ ಬೆಲೆ 10 ಗ್ರಾಂಗೆ 5,400 ರೂ. ಏರಿಕೆ ಆಗಿ 1,59,710 ರೂ.ಗೆ ತಲುಪಿದೆ. 22 ಕ್ಯಾರೆಟ್ ಚಿನ್ನದ ಬೆಲೆ 10 ಗ್ರಾಂಗೆ 1,46,400 ರೂ.ಗೆ ತಲುಪಿದೆ. ಬೆಳ್ಳಿ ಕೂಡ ಕೆಜಿಗೆ 15,000 ರೂ. ಏರಿಕೆಯಾಗಿ 3,40,000 ರೂ.ಗೆ ತಲುಪಿ ಹೊಸ ದಾಖಲೆ ಮಾಡಿದೆ. ಪುಟ 2ಕ್ಕೆ

## ಫೆ.1ರಿಂದ ಉತ್ತನಹಳ್ಳಿ ತ್ರಿಪುರಸುಂದರಿ ದೇವಿ ಜಾತ್ರೆ

**ಮೈಸೂರು:** ನಗರದ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರಸುಂದರಿ ದೇವಿ ದೇವಸ್ಥಾನದಲ್ಲಿ ಫೆ.1ರಿಂದ 3ರವರೆಗೆ ಜಾತ್ರಾ ಮಹೋತ್ಸವ ನಡೆಯಲಿದೆ. ಫೆ.1ರಂದು ಏಕಾದಶವಾರ, ರುದ್ರಾಭಿಷೇಕ, ಸುವರ್ಣಾಲಂಕಾರ ಸಹಸ್ರ ನಾಮಾರ್ಚನೆ ನಿವೇದನೆ, ಮಹಾಮಂಗಳಾರತಿ ರಾಜೋಪಚಾರ, ರಾಷ್ಟ್ರಾಶೀರ್ವಾದ, ತೀರ್ಥಪ್ರಸಾದ ವಿನಿಯೋಗ, ಮಹಾಮಂಗಳಾರತಿ ಜರುಗಲಿದೆ. ರಾತ್ರಿ 8.30ಕ್ಕೆ ಅಮ್ಮನವರ ಕನ್ಯಾಕನ್ನಡಿ ಉತ್ಸವ ಪುಣ್ಯಾಹ ಮಂಟಪೋತ್ಸವ ಜರುಗಲಿದೆ. ಮಧ್ಯಾಹ್ನ 12.30ಕ್ಕೆ ಪ್ರಸಾದ ವಿನಿಯೋಗ ನಡೆಯಲಿದೆ.

ಫೆ.2ರಂದು ಪ್ರಥಮಾ ಅಶ್ಲೇಷ ನಕ್ಷತ್ರ ಅಂಗವಾಗಿ ಏಕಾದಶವಾರ, ರುದ್ರಾಭಿಷೇಕ, ಸಹಸ್ರ ನಾಮಾರ್ಚನೆ ವಿಶೇಷ ಪೂಜೆಗಳು, ಕದಲಿ ಅಲಂಕಾರ ನೆರವೇರಲಿದೆ. ಫೆ.3ರಂದು ದ್ವಿತೀಯಾ ಮಖ ನಕ್ಷತ್ರ ಪ್ರಯುಕ್ತ ಪುಟ 2ಕ್ಕೆ

## ಶಿಕ್ಷಕರು ಬೈದಿದಕ್ಕೆ ವಿದ್ಯಾರ್ಥಿ ಆತ್ಮಹತ್ಯೆ

**ಯಾದಗಿರಿ:** ಶಿಕ್ಷಕರು ಬೈದಿದಕ್ಕೆ ಮನನೊಂದು ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಜಿಲ್ಲೆಯ ವಡಗೇರಾ ಪಟ್ಟಣದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ ಪವನ್ (15) ಮೃತ ಬಾಲಕ. ಶಾಲೆಯ ಮುಖ್ಯ ಶಿಕ್ಷಕ ಸೇರಿ 6 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಈತ 9ನೇ ತರಗತಿಯಲ್ಲಿ ಓದುತ್ತಿದ್ದ ಎನ್ನಲಾಗಿದೆ.



ಶಿಕ್ಷಕರು ಬೈದಿದ್ದಕ್ಕೆ ಮನನೊಂದು ಶಾಲೆ ಆವರಣದ ಹಿಂಭಾಗದಲ್ಲಿರುವ ಗಿಡಕ್ಕೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದ. ಬಳಿಕ ಮಗನ ಸಾವಿನ ಬಗ್ಗೆ ಪೋಷಕರು ಅನುಮಾನ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಪವನ್ ತಂದೆ ಮಲ್ಲಪ್ಪ ವಡಗೇರಾ ಪೊಲೀಸ್ ಠಾಣೆಯಲ್ಲಿ ದೂರು

# ಬೈಕ್ ಟ್ಯಾಕ್ಸಿಗೆ ‘ಹೈ ಗ್ರೀನ್ ಸಿಗ್ನಲ್’

## ಹೈಕೋರ್ಟ್ ಏಕಸದಸ್ಯ ಪೀಠದ ಆದೇಶ ರದ್ದುಪಡಿಸಿದ ವಿಭಾಗೀಯ ಪೀಠ

**ಬೆಂಗಳೂರು:** ರಾಜ್ಯದಲ್ಲಿ ಬೈಕ್‌ಗಳನ್ನು ಟ್ಯಾಕ್ಸಿಗಳು ರಸ್ತೆಗಿಳಿಯಲು ಹೈಕೋರ್ಟ್ ಗ್ರೀನ್ ಸಿಗ್ನಲ್ ತೋರಿದೆ. ಈ ಮೂಲಕ ಬೈಕ್ ಟ್ಯಾಕ್ಸಿಗಳಿಗೆ ನಿಷೇಧ ಹೇರಿದ್ದ ರಾಜ್ಯ ಸರ್ಕಾರಕ್ಕೆ ಮುಖಭಂಗವಾಗಿದೆ.

ರಾಜ್ಯ ಸರ್ಕಾರ ಬೈಕ್ ಟ್ಯಾಕ್ಸಿ ನಿಷೇಧಿಸಿದ್ದನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಎತ್ತಿಹಿಡಿದಿತ್ತು. ಆದರೆ ವಿಭಾಗೀಯ ಪೀಠ ಈ ಆದೇಶವನ್ನು ರದ್ದುಗೊಳಿಸಿ, ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಿದೆ.

ಒಲಾ, ಊಬರ್ ಮತ್ತಿತರ ಅಗ್ರಿಗೇಟರ್ ಗಳು ಸಲ್ಲಿಸಿದ ಮೇಲ್ಮನವಿಗಳನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಪೀಠ ಶುಕ್ರವಾರ ಮಾನ್ಯ ಮಾಡಿದೆ. ಇದೇ ವೇಳೆ ಸಾರಿಗೆ ವಾಹನಗಳಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಬೈಕ್ ಟ್ಯಾಕ್ಸಿಗಳಿಗೆ ಅನುಮತಿಯನ್ನು ನಿರಾಕರಿಸಲಾಗುವುದಿಲ್ಲ ಎಂದು ಹೇಳಿದೆ. ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಸಿ.ಎಂ ಜೋಶಿ ಅವರ ವಿಭಾಗೀಯ ಪೀಠ ಈ ಆದೇಶವನ್ನು ನೀಡಿದೆ.




ಬೈಕ್ ಮಾಲೀಕರು ಅಥವಾ ಅಗ್ರಿಗೇಟರ್ ಗಳು ಸಾರಿಗೆ ವಾಹನಗಳನ್ನಾಗಿ ಬಳಸಲು ಅನುಮತಿ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಬೇಕು. ಅರ್ಹ ಮನವಿಗಳನ್ನು ಸರ್ಕಾರ ಪುರಸ್ಕರಿಸಿ ಅನುಮತಿ ನೀಡಬೇಕು. ಮೋಟಾರ್ ವಾಹನ ಕಾಯ್ದೆಯ ಸೆಕ್ಷನ್ 74(2)ರ ಪ್ರಕಾರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಅಗತ್ಯ ಷರತ್ತುಗಳನ್ನು ವಿಧಿಸಬಹುದು ಎಂದು ಪೀಠ ಆದೇಶ ನೀಡಿದೆ. ಇದರಿಂದ ಬೈಕ್ ಟ್ಯಾಕ್ಸಿ ಚಾಲಕರು ಪುಟ 2ಕ್ಕೆ

### ಆದೇಶ ಪ್ರತಿ ಸಿಕ್ಕಿಲ್ಲ: ಸಚಿವ

**ಬೆಂಗಳೂರು: ರಾಜ್ಯದಲ್ಲಿ ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಿ ಹೈಕೋರ್ಟ್ ವಿಭಾಗೀಯ ಪೀಠ ಅನುಮತಿ ನೀಡಿರುವ ಬಗ್ಗೆ ಮಾಹಿತಿ ಸಿಕ್ಕಿಲ್ಲ. ಇನ್ನೂ ಹೈಕೋರ್ಟ್ ತೀರ್ಪಿನ ಪ್ರತಿ ಸಿಕ್ಕಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ವಿಧಾನಸೌಧದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇನ್ನೂ ಕೋರ್ಟ್ ಆದೇಶದ ಪ್ರತಿ ಸಿಕ್ಕಿಲ್ಲ. ಆದೇಶದ ಪ್ರತಿ ಬಂದ ನಂತರ ಅದನ್ನು ಕೂಲಂಕಷವಾಗಿ ಪರಿಶೀಲಿಸುತ್ತೇನೆ. ಈ ಬಗ್ಗೆ ಇಲಾಖೆಯ ಕಮಿಷನರ್ ಅವರೊಂದಿಗೆ ಚರ್ಚಿಸಿ, ಮುಂದಿನ ಕಾನೂನು ಹೋರಾಟ ಅಥವಾ ತೀರ್ಮಾನದ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.**

# ಡ್ರೋನ್ ಕಣ್ಗಾವಲಿಗೆ ಖಂಡ್ರೆ ಸೂಚನೆ

## * ಮಲೆ ಮಹದೇಶ್ವರ ಬೆಟ್ಟದ ಹಾದಿಯಲ್ಲಿ ಚಿರತೆ ದಾಳಿ ಹಿನ್ನೆಲೆ



**ಬೆಂಗಳೂರು:** ಮಲೆ ಮಹದೇಶ್ವರ ಬೆಟ್ಟದಲ್ಲಿ ಚಿರತೆ ದಾಳಿಯಿಂದ ಯುವಕ ಮೃತಪಟ್ಟ ಹಿನ್ನೆಲೆಯಲ್ಲಿ ಭಕ್ತರು ಕಾಲುದಾರಿಯಲ್ಲಿ ಮೆಟ್ಟಿಲೇರಿ ಬರುವ ಮಾರ್ಗದಲ್ಲಿ ಡ್ರೋನ್ ಕ್ಯಾಮರಾ ಅಳವಡಿಸಿ ಸತತ ನಿಗಾ ಇಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಮಲೆ ಮಹದೇಶ್ವರ ಬೆಟ್ಟದ ಕಾಲುದಾರಿ, ಮೆಟ್ಟಿಲು ಇರುವ ಪ್ರದೇಶದಲ್ಲಿ ಅರಣ್ಯ ಸಿಬ್ಬಂದಿ, ಹೋಂಗಾರ್ಡ್ಸ್ ಮತ್ತು ಸ್ಥಳೀಯ ಸಿಬ್ಬಂದಿ ತಂಡ ರಚಿಸಿ ಭಕ್ತರಿಗೆ ನೆರವಾಗುವ ಅಗತ್ಯವಿದೆ. ಇದಕ್ಕೆ ತಗಲುವ ವೆಚ್ಚವನ್ನು ಭರಿಸುವಂತೆ ಮಲೆ ಮಹದೇಶ್ವರಸ್ವಾಮಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಮತ್ತು ಜಿಲ್ಲಾಡಳಿತಕ್ಕೆ ಪತ್ರ ಬರೆಯುವಂತೆಯೂ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಿಂದ ಭಕ್ತರು ಕಾವೇರಿ ನದಿ ದಾಟಿ, ಹನೂರು ತಾಲೂಕಿನ ಬಸವನಕಣಕ್ಕೆ ಬಂದು ಅಲ್ಲಿಂದ ಕಾಡಿನಲ್ಲಿಯೇ ನಡೆದುಕೊಂಡು ಶಾಗ್ಯ, ಡಿಎಂ ಸಮುದ್ರ, ಎಲ್ಲೆಮಾಳ, ಮಲ್ಲಯ್ಯನಪುರ, ಕೌದಳ್ಳಿ, ವಡಕೆಹಳ್ಳ, ಕೋಣನಕೆರೆ, ತಾಳುಬೆಟ್ಟ ಮಾರ್ಗವಾಗಿ ಬೆಟ್ಟಕ್ಕೆ ಬರುತ್ತಾರೆ. ವನ್ಯಜೀವಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದು, ಪಾದಯಾತ್ರೆ ಅಪಾಯಕಾರಿಯಾಗಿದೆ. ಹೀಗಾಗಿ ಭಕ್ತರ ಭಾವನೆಗೆ ಧಕ್ಕೆಯಾಗದಂತೆ ಮನವೊಲಿಸಲು ಪುಟ 2ಕ್ಕೆ

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
**ಆಕುಕ ಇಂಜಿನಿಯರಿಂಗ್ ವಿಭಾಗ,**
ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(Ph. No: 0821-2979772 E-mail:khsdrp.divmys@gmail.com)
ಸಂ.: ಆಕುಕ/ಇಂ.ವಿ./ಕಾ.ಅ/ಮೈ/ಸಇ–1/ಟೆಂಡರ್–27/2025–26 ದಿ: 21.01.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರುರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಸಿವಿಲ್ ಗುತ್ತಿಗೆದಾರರಿಂದ, ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ–ಲಕೋಟೆ ಟೆಂಡರ್ ದಾಸ್ತಾವೇಜು ಪದ್ದತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (Karnataka Public Procurement portal) ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರಗಳು ಈ ಕೆಳಕಂಡಂತಿವೆ.

**ಲೆಕ್ಕಶೀರ್ಷಿಕೆ:–ಠೇವಣಿ ವಂತಿಗೆ**

**ಕ್ರ.ಸಂ.** 1 **ಕಾಮಗಾರಿಯ ವಿವರ:** Re-strengthening of Road Surface allround MMC&RI Office Building and Filling of Pot-Holes in the premises of MMC&RI, Mysuru. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 32.00 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 64,000.00 **ಕಾಲಾವಧಿ (ಮಳೆಗಾಲ ಸೇರಿದಂತೆ):** 3 ತಿಂಗಳು. **ಗುತ್ತಿಗೆದಾರರ ಅರ್ಹತೆ:** ಮೂರನೇ ದರ್ಜೆ & ಮೇಲ್ಪಟ್ಟು.

**ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1)** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 30.01.2026 ರಂದು 16.00 ಗಂಟೆಯವರೆಗೆ. **2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 31.01.2026 ರಂದು 16.10 ಗಂಟೆಗೆ.

**ಸೂಚನೆ: 1)** ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (www.eproc.karnataka.gov.in.) ಮಾತ್ರ ಪ್ರಕಟಿಸಲಾಗುವುದು.

**ಸಹಿ/– ಕಾರ್ಯಪಾಲಕ ಅಭಿಯಂತರರು,**
**ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.**
DIPR/DDMYS/1552/KSMCA/879/2025-26



**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ**
ರಾಮನಗರ ಉಪ ವಿಭಾಗ, ಬೆಂಗಳೂರು ದಕ್ಷಿಣ ಜಿಲ್ಲೆ

ಸಂ: ಸಅಸಂ/ರಾಉವಿ/ಸಿ.ಆರ್–05/2025–26 ದಿನಾಂಕ: 21.01.2026

**ಇ–ಟೆಂಡರ್ ಪ್ರಕಟಣೆ**
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ಮತ್ತು ನೋಂದಾಯಿತ ಅರ್ಹ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ 2025–26ನೇ ಸಾಲಿನ ಲೆಕ್ಕಶೀರ್ಷಿಕೆ: 2406-04-103-1-06-Other-140-MW (CAMPA)ರಡಿಯಲ್ಲಿ Excavation of Elephant Proof Trenches ಕಾಮಗಾರಿಯನ್ನು ಚನ್ನಪಟ್ಟಣ ವಲಯದ Thenginakallu SF BV Halli beat -Mallumgere Research Planation to Tagachagere 3.35ಕಿ.ಮೀ ಕಾಮಗಾರಿಯನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಅನ್ನು ಸಲ್ಲಿಸಲು ಕೊನೆಯ **ದಿನಾಂಕ: 05.02.2026 ಸಂಜೆ 4:00 ಗಂಟೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 06.02.2026 ರಂದು ಸಂಜೆ 4:30 ಗಂಟೆ.** ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 09.02.2026 ರಂದು ಸಂಜೆ 5.00 ಗಂಟೆ.** ಒಂದು ವೇಳೆ **ದಿನಾಂಕ: 05.02.2026** ರಂದು ಇ–ಟೆಂಡರ್‌ನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಎರಡನೇ ಬಾರಿ ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ಮರು ಸಲ್ಲಿಸಲು ಕೊನೆಯ **ದಿನಾಂಕ: 16.02.026 ರಂದು ಸಂಜೆ 4.00 ಗಂಟೆಯವರೆಗೆ** ಭಾಗವಹಿಸಬಹುದಾಗಿದೆ. **(ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ).** ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು **ದಿನಾಂಕ: 17.02.2026ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು.** ಹಾಗೂ ಆರ್ಥಿಕ ಬಿಡ್‌ನ್ನು **ದಿನಾಂಕ: 19.02.2026ರ ಸಂಜೆ 05:00 ಗಂಟೆಗೆ** ಟೆಂಡರ್‌ಗಳನ್ನು ತೆರೆಯಲಾಗುವುದು. ಆಸಕ್ತಿಯುಳ್ಳವರು ಕಛೇರಿ ವೇಳೆಯಲ್ಲಿ ಮತ್ತು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮೂಲಕ ಟೆಂಡರ್‌ನ ಅಗತ್ಯ ಮಾಹಿತಿಗಳನ್ನು ಪಡೆದುಕೊಂಡು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಸಹಿ/– **ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ**
ರಾಮನಗರ ಉಪ ವಿಭಾಗ. ರಾಮನಗರ.
DIPR/BSD/592/SA/2025-26


# ಹಾಲು ಕರೆಯುವ ಸ್ಪರ್ಧಾ ರಾಸುಗಳ ಮೆರವಣಿಗೆ



ಮೈಸೂರು: ನಗರ ಗೋಪಾಲಕರ ಸಂಘ ಮತ್ತು ಪಶು ಸಂಗೋಪನ ಇಲಾಖೆ ಜಂಟಿ ಆಶ್ರಯದಲ್ಲಿ ದಿ. ತೂಗುದೀಪ ಶ್ರೀನಿವಾಸ್ ಹಾಗೂ ಗೋಪಾಲಕರ ಸಂಘ ನೆನಪಿಗಾಗಿ ಆಯೋಜಿಸಿದ್ದ 20ನೇ ವರ್ಷದ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಯ ರಾಸುಗಳ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಬಿಜೆಪಿ ಮುಖಂಡ ಕವೀಶ್‌ಗೌಡ ಚಾಲನೆ ನೀಡಿದರು. ಅರಮನೆ ಮುಂಭಾಗದಿಂದ ದೊಡ್ಡ ಗಡಿಯಾರ ಮಾರ್ಗವಾಗಿ ಗಾಂಧಿ ವೃತ, ಸಂತೆಪೇಟೆ ಮಾರ್ಗವಾಗಿ ಜೀವನ ರಾಯ ಕಟ್ಟೆ ತಲುಪಿತು. ವಕೀಲರಾದ ಅಜಯ ಹೆಗಡೆ, ಕಾಂಗ್ರೆಸ್ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಕಾಂಗ್ರೆಸ್ ಮುಖಂಡ ಪ್ರದೀಪ್‌ಕುಮಾರ್, ದೀಪು ಇನ್ನಿತರರು ಉಪಸ್ಥಿತರಿದ್ದರು.

**ಮೊದಲ ಪುಟದಿಂದ**

## ಬೈಕ್ ಟ್ಯಾಕ್ಸಿಗೆ 'ಹೈ ಗ್ರೀನ್ ಸಿಗ್ನಲ್'

ನಿಟ್ಟುಸಿರು ಬಿಟ್ಟಿದ್ದಾರೆ. ವಿಚಾರಣೆ ವೇಳೆ ವಾದ ಮಂಡಿಸಿದ ಬೈಕ್ ಟ್ಯಾಕ್ಸಿ ವೆಲ್ಫೇರ್ ಅಸೋಸಿಯೇಷನ್, ರಾಜ್ಯ ಸರ್ಕಾರದ ನಡೆಯು ಬೈಕ್ ಟ್ಯಾಕ್ಸಿ ಚಾಲಕರ ಸುಮಾರು 6 ಲಕ್ಷ ಕುಟುಂಬಗಳ ಬದುಕನ್ನು ಸಂಕಷ್ಟಕ್ಕೆ ದೂಡುತ್ತದೆ. ಈ ಕುಟುಂಬಗಳು ಬದುಕು ಸಾಗಿಸಲು ತನ್ನ ದುಡಿಮೆ ಹಣದಿಂದ ಬೈಕ್ ಖರೀದಿಸಿ, ಸಾಲವನ್ನೂ ಪಡೆದಿದ್ದಾರೆ. ಸರ್ಕಾರ ಬೈಕ್ ಟ್ಯಾಕ್ಸಿಗಳನ್ನು ನಿರ್ಬಂಧಿಸುವ ಬದಲು, ಯಾವುದೇ ಕಾನೂನು– ಕ್ರಮದ ಸಮಸ್ಯೆಗಳು ಉಂಟಾದರೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಬೈಕ್ ಟ್ಯಾಕ್ಸಿಗಳಿಗೆ ನೋಂದಣಿ ನೀಡದಿರುವುದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ವಾದಿಸಿದರು. ಕರ್ನಾಟಕದಲ್ಲಿ ಬೈಕ್ ಟ್ಯಾಕ್ಸಿ ಹಾವಳಿ ಹೆಚ್ಚಾಗಿದೆ ಎಂದು ಕೆಲವು ಸಂಸ್ಥೆಗಳು ದೂರು ನೀಡಿದ್ದವು. ಆಟೋ, ಕ್ಯಾಬ್ ಸೇವೆಗಳು ದುಬಾರಿಯಾಗುತ್ತಿದ್ದಂತೆ ಬೈಕ್ ಟ್ಯಾಕ್ಸಿ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ನಗರಗಳ ಪ್ರಯಾಣಿರಿಗೆ ವರವಾಗಿತ್ತು. ಆದರೆ, ರಾಜ್ಯ ಸರ್ಕಾರ ಬೈಕ್ ಟ್ಯಾಕ್ಸಿ ನಿಷೇಧಿಸಿ ಆದೇಶ ನೀಡಿತ್ತು. ಈ ಆದೇಶವನ್ನು ಪ್ರಶ್ನಿಸಿ ಬೈಕ್ ಟ್ಯಾಕ್ಸಿ ಅಗ್ರೇಟರ್ ಕಂಪನಿಗಳು ಹೈಕೋರ್ಟ್ ಮೆಟ್ಟಿಲೇರಿತ್ತು. ವಿಚಾರಣೆ ನಡೆಸಿದ ಏಕಸದಸ್ಯ ಪೀಠ ರಾಜ್ಯ ಸರ್ಕಾರದ ಆದೇಶ ಎತ್ತಿ ಹಿಡಿದಿತ್ತು. ಹೀಗಾಗಿ ಅಗ್ರಿಗೇಟರ್ ಕಂಪನಿಗಳು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಈ ಕುರಿತು ವಿಚಾನೆ ನಡೆಸಿದ ಹೈಕೋರ್ಟ್ ವಿಭಾಗೀಯ ಪೀಠ ಮಹತ್ವದ ಆದೇಶ ನೀಡಿದೆ.

## ಡ್ರೋನ್ ಕಣ್ಗಾವಲಿಗೆ ಖಂಡ್ರೆ ಸೂಚನೆ

ಸಚಿವರು ಸೂಚಿಸಿದರು. ರಾತ್ರಿ ವೇಳೆ ಕಾಡಿನ ಅಂಚಿನಲ್ಲಿ, ಕಾಡಿನೊಳಗಿರುವ ವಸತಿ ಪ್ರದೇಶದಲ್ಲಿ ಮಲಗುವುದೂ ಅಪಾಯಕಾರಿಯಾಗಿದೆ. ಕಳೆದ ಬುಧವಾರ ಮಂಡ್ಯ ಜಿಲ್ಲೆಯ ಚೀರನಹಳ್ಳಿ ಗ್ರಾಮದ ಪ್ರವೀಣ್ ಎಂಬ ಯುವಕ ಚಿರತೆ ದಾಳಿಯಿಂದ ಮೃತಪಟ್ಟಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ರಥ ಸಪ್ತಮಿ ನಂತರ ಬಿಸಿಲು ಹೆಚ್ಚಾಗಿ ಕಾಡ್ಗಿಚ್ಚಿನ ಅಪಾಯವೂ ಹೆಚ್ಚುವ ಕಾರಣ ಎಲ್ಲ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಅರಣ್ಯಾಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದ್ದಾರೆ. ವಿಡಿಯೋ ಕಾನ್ಫರೆನ್ಸ್ ಮೂಲಕ ಎಲ್ಲ ಅರಣ್ಯ ಮತ್ತು ವನ್ಯಜೀವಿ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕಾಡಿನ ಬೆಂಕಿಗೆ ಅರಣ್ಯ ಸಂಪತ್ತು ನಾಶವಾಗದ ರೀತಿಯಲ್ಲಿ ಕಟ್ಟೆಚ್ಚರ ವಹಿಸಬೇಕು, ಡ್ರೋನ್ ಸೌಲಭ್ಯ ಇರುವ ಕಡೆ ಕ್ಯಾಮರಾ ಮೂಲಕ ನಿಗಾ ಇಡಬೇಕು, ಗಸ್ತು ಹೆಚ್ಚಿಸಿ, ಸೂಕ್ಷ್ಮ ಪ್ರದೇಶಗಳಲ್ಲಿ ಸಿಬ್ಬಂದಿ ಎಚ್ಚರದಿಂದ ಇರಬೇಕು ಎಂದರು.

## ತಿಮ್ಮಾಪುರ ರಾಜೀನಾಮೆಗೆ ಒತ್ತಾಯ

ಮೇಲಿನ ವಂದನಾ ನಿರ್ಣಯ ಮಂಡಿಸಲು ಅವಕಾಶ ನೀಡುತ್ತಿದ್ದಂತೆ, ಆಡಳಿತ ಪಕ್ಷದ ಶಾಸಕ ಪ್ರದೀಪ್ ಈಶ್ವರ್ ಅವರು ಇದನ್ನು ಅನುಮೋದಿಸಿದರು. ಬಿಜೆಪಿ ಶಾಸಕರು, ಅಬಕಾರಿ ಸಚಿವರ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಘೋಷಣೆಗಳ ನಡುವೆ, ಸ್ಪೀಕರ್ ಸದನವನ್ನು ಮುಂದೂಡಿದರು.

## ಫೆ.1ರಿಂದ ದೇವಿ ಜಾತ್ರೆ

ಏಕಾದಶವಾರ ರುದ್ರಾಭಿಷೇಕ, ಪಂಚೋಪಚಾರ ಪೂಜೆ ಮಹಾಮಂಗಳಾರತಿ ನಡೆಯಲಿದೆ. ನಿತ್ಯ ಬೆಳಿಗ್ಗೆ ದೇವಿಗೆ ವಿಶೇಷ ಅಭಿಷೇಕ, ಹೂವಿನ ಅಲಂಕಾರ ನೆರವೇರಲಿದೆ.

## ಚಿನ್ನ, ಬೆಳ್ಳಿಗೆ ದಾಖಲೆ ಬೆಲೆ

ರಾಜಕೀಯ ಅನಿಶ್ಚಿತತೆ ಮತ್ತು ಡಾಲರ್ ದುರ್ಬಲಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಚಿನ್ನ, ಬೆಳ್ಳಿ ದರಗಳಲ್ಲಿ ಏರಿಕೆ ಆಗುತ್ತಿದೆ. ಹೂಡಿಕೆದಾರರು ಸುರಕ್ಷಿತ ಸ್ವರ್ಗದ ಸ್ವತ್ತುಗಳತ್ತ ಮುಖ ಮಾಡಲು ಕಾರಣವಾಗಿದೆ.

# ರಾಜ್ಯಪಾಲರ ನಡೆಗೆ ವಿರೋಧ

## ಮೈಸೂರಲ್ಲಿ ಕಾಂಗ್ರೆಸ್ ಪ್ರತಿಭಟನೆ



ಮೈಸೂರು: ರಾಜ್ಯಪಾಲರು ಸರ್ಕಾರ ಸಿದ್ದಪಡಿಸಿದ್ದ ಭಾಷಣವನ್ನು ಓದದೆ ಅವರೆ ತಯಾರು ಮಾಡಿದ ಒಂದು ಸಾಲಿನ ಭಾಷಣ ಓದಿ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡಿರುವುದನ್ನು ಖಂಡಿಸಿ ಕಾಂಗ್ರೆಸ್ ಪಕ್ಷದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ರಾಮಸ್ವಾಮಿ ವೃತ್ತದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಜಮಾಯಿಸಿದ ಕಾಂಗ್ರೆಸ್ ಪಕ್ಷದ ನೂರಾರು ಕಾರ್ಯಕರ್ತರು ಸಂವಿಧಾನಕ್ಕೆ ಅಪಚಾರ ಮಾಡಿದ ರಾಜ್ಯಪಾಲರಿಗೆ ಧಿಕ್ಕಾರ, 7 ಕೋಟಿ ಜನತೆಯ ಭಾವನೆಗೆ ಅವಮಾನ ಮಾಡಿದ ರಾಜ್ಯಪಾಲರಿಗೆ ಧಿಕ್ಕಾರ, ಬಿಜೆಪಿಯ ಕೈಗೊಂಬೆ ರಾಜ್ಯಪಾಲರಿಗೆ ಧಿಕ್ಕಾರ, ಜನಪರ ವಿಷಯ ಪ್ರಸ್ತಾಪಿಸದೇ ಕಾಲ್ಕಿತ್ತ ರಾಜ್ಯಪಾಲರಿಗೆ ಧಿಕ್ಕಾರ, ರಾಜ್ಯಪಾಲ ಹಠಾವೋ ಕರ್ನಾಟಕ ಬಚಾವೋ, ಬೇಡವೇ ಬೇಡ ಬಿಜೆಪಿ ಕೈಗೊಂಬೆ ರಾಜ್ಯಪಾಲ ಬೇಡ ಎಂಬ ಪ್ಲೇ ಕಾರ್ಡ್ ಪ್ರದರ್ಶಿಸಿ, ವಿವಿಧ ಘೋಷಣೆಗಳನ್ನು ಕೂಗಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾಜಿ ಶಾಸಕ ಸೋಮಶೇಖರ್ ಮಾತನಾಡಿ, ರಾಜ್ಯಪಾಲರ ಹುದ್ದೆ ಒಂದು ಸಾಂವಿಧಾನಿಕ ಹುದ್ದೆ. ರಾಜ್ಯಪಾಲರು ಪ್ರತಿ ಭಾಷಣದ ಸಂದರ್ಭದಲ್ಲಿ ನನ್ನ ಸರ್ಕಾರ ನನ್ನ ಸರ್ಕಾರದ ಸಾಧನೆ ಎಂದು ಭಾಷಣ ಮಾಡುವುದು ಸಂಪ್ರದಾಯ. ಸಚಿವ ಸಂಪುಟ, ಸಚಿವರು, ಪರಿಷತ್‌ನಲ್ಲಿ ತೀರ್ಮಾನವಾದ ವಿಷಯ ಎಂದರೆ ಅದು ಏಳು ಕೋಟಿ ಜನರ ಭಾವನೆ ಇದ್ದಂತೆ. ಸರ್ಕಾರ ನಿಗದಿ ಮಾಡಿದ್ದ ಜಂಟಿ ಅಧಿವೇಶನದಲ್ಲಿ ಸರ್ಕಾರದ ಅಭಿವೃದ್ಧಿ ವಿಷಯವನ್ನು ಪ್ರಸ್ತಾಪಿಸಬೇಕಾದ ರಾಜ್ಯಪಾಲರು ಬಿಜೆಪಿಯವರ ಕೈಗೊಂಬೆಯಂತೆ ವರ್ತಿಸಿರುವುದು ನಾಡಿನ ಜನತೆಗೆ ಎಸಗಿರುವ ಮಹಾ ದ್ರೋಹ. ಇದರ ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ ಚಿಂತಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗುವುದು ನಿಶ್ಚಿತ ಎಂದರು.

ಇದು ಕೇವಲ ಕರ್ನಾಟಕ ಮಾತ್ರವಲ್ಲ. ಬಿಜೆಪಿಯೇತರ ಸರ್ಕಾರಗಳು ಇರುವೆಡೆಯಲ್ಲ ರಾಜ್ಯಪಾಲರುಗಳು ಬಿಜೆಪಿಯವರ ಸೂಚನೆಯಂತೆ ವರ್ತಿಸಿ ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲು ಮಾಡುವ ನಿರಂತರ ಪ್ರಯತ್ನ ಮಾಡುತ್ತಿದ್ದಾರೆ. ಸಂವಿಧಾನಕ್ಕೆ ಗೌರವ ಕೊಡದಂತಹ ರಾಜ್ಯಪಾಲರನ್ನು ಕೂಡಲೇ ರಾಷ್ಟ್ರಪತಿಗಳು ವಾಪಸ್ಸು ಕರೆಸಿಕೊಳ್ಳಬೇಕು. ಆ ಮೂಲಕ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯವನ್ನು ಎತ್ತಿ ಹಿಡಿಯಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರರಾದ ಎಂ. ಲಕ್ಷ್ಮಣ್, ಹೆಚ್.ಎ. ವೆಂಕಟೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇ ಖರ್, ಜೋಗಿ ಮಹೇಶ್, ಪಾಲಿಕೆ ಮಾಜಿ ಸದಸ್ಯರಾದ ಎಂ.ಶಿವಣ್ಣ, ಎಂ.ಸುನೀಲ್, ಶೋಭಾ ಸುನೀಲ್, ಆರ್.ಹೆಚ್.ಕುಮಾರ್, ವೀಣಾ, ಕಾಂಗ್ರೆಸ್ ಮುಖಂಡ ಶೇಖರ್, ಅಶೋಕಪುರಂ ವಾಸು, ಅರುಣ್ ಬುದ್ಧ, ಭಾಸ್ಕರ್, ಪಟಾಕಿ ಮಂಜು ನಾಥ್ , ಶಂಕರ್, ಭಾಸ್ಕರ್ ಎಲ್.ಗೌಡ, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹ್ಮದ್ ಫಾರೂಖ್, ವಿಜಯ್ ಕುಮಾರ್ ಇನ್ನಿತರರು ಹಾಜರಿದ್ದರು.

**ಮೊದಲ ಪುಟದಿಂದ**

## ಕ್ರಮಕ್ಕೆ ಬಿಜೆಪಿ ಆಗ್ರಹ

ನಾವು ಗೂಂಡಾಗಿರಿಯನ್ನು ಸಹಿಸುವುದಿಲ್ಲ. ರಾಜ್ಯಪಾಲರನ್ನು ಅವಮಾನಿಸಿರುವ ಹರಿಪ್ರಸಾದ್ ಅವರನ್ನು ಅಮಾನತು ಮಾಡಿ ಎಂದು ಬಿಜೆಪಿ ಎಂಎಲ್ಸಿಗಳು ಒಕ್ಕೊರಲಿನಿಂದ ಘೋಷಣೆ ಕೂಗಿದರು. ಬಿಜೆಪಿ ಆರೋಪಕ್ಕೆ ಉತ್ತರಿಸಿದ ಹರಿಪ್ರಸಾದ್, ರಾಜ್ಯಪಾಲರ ಭಾಷಣದ ಪ್ರಕ್ರಿಯೆ ಬಗ್ಗೆ ನಿಯಮಾವಳಿ ಓದುತ್ತಿದ್ದಂತೆ ಬಿಜೆಪಿ ಸದಸ್ಯರು ಆಕ್ಷೇಪಿಸಿದರು. ಪೋಕ್ಸೋ ಪ್ರಕರಣದ ನಾಯಕರಿಗೆ ಹಾರ ಹಾಕುವ ಪಕ್ಷದವರು ಇವರು, ಇವರಿಂದ ಪಾಠ ಕಲಿಯಬೇಕೆ ಎಂದು ಹರಿಪ್ರಸಾದ್ ಪ್ರಶ್ನಿಸಿದರು. ಇದು ಆಡಳಿತ ವಿಪಕ್ಷಗಳ ನಡುವೆ ಭಾರಿ ಗದ್ದಲ, ಕೋಲಾಹಲ ಸೃಷ್ಟಿಯಾಯಿತು. ಹರಿಪ್ರಸಾದ್ ಎತ್ತಿದ್ದ ಪಾಯಿಂಟ್ ಆಫ್ ಆರ್ಡರ್ ಅನ್ನು ಸಭಾಪತಿ ಹೊರಟ್ಟಿ ಅವರು ತಿರಸ್ಕರಿಸಿ, ಸದನವನ್ನು 10 ನಿಮಿಷಗಳ ಕಾಲ ಮುಂದೂಡಿದರು.

## ವಿದ್ಯಾರ್ಥಿ ಆತ್ಮಹತ್ಯೆ

ದಾಖಲಿಸಿದ್ದರು. ದೂರಿನನ್ವಯ ಮುಖ್ಯಶಿಕ್ಷಕ ಅಯ್ಯಪ್ಪ ಸೇರಿ 6 ಜನ ಶಿಕ್ಷಕರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

## ರಾಜ್ಯ ರಾಜಕಾರಣಕ್ಕೆ ಎಚ್‌ಡಿಕೆ?

ಪಕ್ಷದಿಂದ ಬೇರೆ ಪಕ್ಷಕ್ಕೆ ಹೋದವರು ಜೆಡಿಎಸ್ ಕಥೆ ಮುಗಿಯಿತು ಎಂದರು. ಆದರೆ, ನಮ್ಮ ಪಕ್ಷ ಯಾವ ರೀತಿ ಯಲ್ಲಿ ಗಟ್ಟಿಯಾಗುತ್ತಿದೆ ಎನ್ನುವುದು ಅವರಿಗೆ ಗೊತ್ತಿಲ್ಲ ಎಂದು ತಿರುಗೇಟು ನೀಡಿದರು.

## ಗದ್ದಲ, ಕೋಲಾಹಲ

ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾತಾನಾಡಿ, ರಾಜ್ಯಪಾಲರು ಭಾಷಣ ಓದದೇ ತಿರಸ್ಕರಿಸಿದರು. ಆಮೂಲಕ ಸಂವಿಧಾನದ 176.1ನೇ ವಿಧಿ ಉಲ್ಲಂಘಿಸಿದ್ದಾರೆ. ರಾಷ್ಟ್ರಗೀತೆಗೂ ಮುನ್ನವೇ ಸದನದಿಂದ ಓಡಿ ಹೋದರು. ರಾಷ್ಟ್ರಗೀತೆಗೂ ಅಪಮಾನ ಮಾಡಿದರು ಎಂದು ವಾದಿಸಿದರು. ನಾನೂ ರಾಜ್ಯಪಾಲರಿಗೆ ಅಡ್ಡಿ ಮಾಡಿದೆ ಅನ್ನೋ ಅಶೋಕ್ ಆರೋಪ ಸರಿಯಲ್ಲ ಎಂದು ಟೀಕಿಸಿದರು. ಶಾಸಕ ಸುರೇಶ್ ಕುಮಾರ್ ಮಾತಾಡುವಾಗ ಮಧ್ಯೆ ಎದ್ದು ಆಕ್ಷೇಪಿಸಿದ ಸಚಿವ ಬೈರತಿ ಸುರೇಶ್‌ಗೆ ಏಳು ತಿಂಗಳಿಗೆ ಹುಟ್ಟಿದವರು ಅಂದಿದ್ದು ಸದನದಲ್ಲಿ ಆಡಳಿತ– ವಿಪಕ್ಷ ನಡುವೆ ಕಿಚ್ಚು ಹಚ್ಚಿತ್ತು. ಕೊನೆಗೆ ಸಿಎಂ ಮಧ್ಯಪ್ರವೇಶ ಮಾಡಬೇಕಾಯ್ತು. ಆ ಪದವನ್ನು ಕಡತದಿಂದ ತೆಗೆಸಲಾಯಿತು. ಕೊನೆಗೆ ಮಾತಾಡಿದ ಸ್ಪೀಕರ್ ಖಾದರ್, ರಾಜ್ಯಪಾಲರ ನಡೆ ನಂತರದ ಘಟನೆಗಳ ಬಗ್ಗೆ ಮುಂದಿನ ವಾರ ರೂಲಿಂಗ್ ಕೊಡುವುದಾಗಿ ತಿಳಿಸಿದರು.

## ಕಾಂಗ್ರೆಸ್ ಗೇಟ್ ಪಾಸ್

ಕೆಪಿಸಿಸಿ ನೋಟಿಸ್ ಜಾರಿ ಮಾಡಿತ್ತು. ಘಟನೆಯ ಬಗ್ಗೆ ಕಾರಣ ಕೇಳಿ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ನೋಟಿಸ್ ನೀಡಿದ್ದರು. 7 ದಿನಗಳ ಒಳಗೆ ನೋಟಿಸ್‌ಗೆ ಉತ್ತರ ನೀಡುವಂತೆ ಸೂಚಿಸಲಾಗಿತ್ತು. ನೋಟಿಸ್ ಗೆ ಉತ್ತರ ನೀಡದ ಹಿನ್ನೆಲೆಯಲ್ಲಿ ಕೆಪಿಸಿಸಿಯಿಂದ ರಾಜೀವ್ ಗೌಡ ಅಮಾನತು ಮಾಡಿ ಆದೇಶ ಹೊರಡಿಸಲಾಗಿದೆ.

# ಸಫಾರಿ ಆರಂಭಿಸುವಂತೆ ಮನವಿ



ಎಚ್.ಡಿ.ಕೋಟೆ: ಸಫಾರಿ ಬಂದ್ ಮಾಡಿರುವುದರಿಂದ ಹೋಟಲ್ ಉದ್ಯಮ ಕುಂಠಿತವಾಗಿ ಪ್ರವಾಸೋದ್ಯಮ ನೆಲಕಚ್ಚಿರುವುದರಿಂದ ರೆಸಾರ್ಟ್ ಕಾರ್ಮಿಕರು, ಚಾಲಕರು ಸೇರಿದಂತೆ ಸಾವಿರಾರು ಉದ್ಯೋಗಿಗಳು ನಿರುದ್ಯೋಗಿಗಳಾಗಿದ್ದು, ಬದುಕು ನಡೆಸಲು ದುಸ್ತರವಾಗಿದೆ. ಆದ್ದರಿಂದ, ಸಫಾರಿ ಆರಂಭಿಸುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ಸೇರಿದಂತೆ ರೆಸಾರ್ಟ್ ಕಾರ್ಮಿಕರು ತಹಸೀಲ್ದಾರ್ ಗೆ ಮನವಿ ಸಲ್ಲಿಸಿದರು.

ಆಟೋ ಚಾಲಕರು, ರೆಸಾರ್ಟ್ ಕಾರ್ಮಿಕರು, ದಲಿತ ಸಂಘಟನೆಗಳು ಸೇರಿ ಪಟ್ಟಣದ ಡಾ.ಬಿ. ಆರ್. ಅಂಬೇಡ್ಕರ್ ಭವನದಿಂದ ರೆಸಾರ್ಟ್ ತೆರೆಯುವಂತೆ ಘೋಷಣೆ ಕೂಗಿ ತಾಲೂಕು ಕಚೇರಿವರೆಗೂ ಮೆರವಣಿಗೆ ಸಾಗಿ ಸರ್ಕಾರ ತೆಗೆದುಕೊಂಡ ಅವೈಜ್ಞಾನಿಕ ನಿರ್ಧಾರದಿಂದ ಕಾರ್ಮಿಕರ ಬದುಕು ಬೀದಿಗೆ ಬಂದಿದೆ ಎಂದು ಪ್ರತಿಭಟನೆ ನಡೆಸಿ ಬೇಸರ ವ್ಯಕ್ತಪಟಿಸಿದರು.

ದಸಂಸ ಸಂಚಾಲಕ ಚಾ. ಶಿವಕುಮಾರ್ ಮಾತನಾಡಿ, ಕಳೆದ ನ.7ರಿಂದ ಸಫಾರಿಯನ್ನು ಮುಚ್ಚಿರುವುದರಿಂದ ಅದನ್ನೆ ನಂಬಿ ಬದುಕುತ್ತಿರುವ ಕೂಲಿ ಕಾರ್ಮಿಕರು ಇಂದು ಅತಂತ್ರ ಸ್ಥಿತಿಯಲ್ಲಿದ್ದಾರೆ. ಇದು ಬಡವರ ಹೊಟ್ಟೆ ಮೇಲೆ ಹೊಡೆಯುವ ಪ್ರಯತ್ನವಾಗಿದೆ. ಅದ್ದರಿಂದ ಈ ಕೂಡಲೇ ಸಫಾರಿ ಕೇಂದ್ರ ತೆರೆಯಬೇಕು ಎಂದು ಆಗ್ರಹಿಸಿದರು.

### ಸಫಾರಿ ಬಂದ್ ಅವೈಜ್ಞಾನಿಕ ಕ್ರಮ

ರೆಸಾರ್ಟ್ ಮಾಲೀಕ ಕಾಡುಮನೆ ಪ್ರಸನ್ನ ಮಾತನಾಡಿ, ಸುಮಾರು 20 ವರ್ಷಗಳಿಂದ ಅರಣ್ಯ ಮತ್ತು ಸಫಾರಿಯ ಮೂಲಕ 2.500 ಕಾರ್ಮಿಕರು ಬದುಕು ಕಟ್ಟಿಕೊಂಡಿದ್ದಾರೆ. ದಮ್ಮನಕಟ್ಟೆ ಮತ್ತು ಬಂಡಿಪುರ ಸಫಾರಿ ಕೇಂದ್ರವನ್ನು ಮಾತ್ರ ಮುಚ್ಚಿ ಉಳಿದೆಲ್ಲ ಕೇಂದ್ರಗಳು ಎಂದಿನಂತೆ ನಡೆಯುತ್ತಿವೆ ಇದರ ಹುನ್ನಾರ ಏನು..? ಮತ್ತೆ ಸಫಾರಿಯಿಂದ ಹುಲಿಗಳು ನಾಡಿನ ಕಡೆ ಬಂದು ಮನುಷ್ಯರ ಮೇಲೆ ದಾಳಿ ಮಾಡುತ್ತಿವೆ ಎಂಬುದು ಸತ್ಯಕ್ಕೆ ದೂರವಾದ ಮಾತು. ಅದು ಅವೈಜ್ಞಾನಿಕವೂ ಹೌದು. ಸರ್ಕಾರ ಆತುರದ ನಿರ್ಧಾರ ತೆಗೆದುಕೊಂಡು ಈ ಭಾಗದ ಜನರಿಗೆ ಅನ್ಯಾಯ ಮಾಡಿದೆ. ಯಾವ ಪ್ರದೇಶದಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತದೆಯೋ ಅಲ್ಲಿ ಅಭಿವೃದ್ಧಿ ಕಾಣಲು ಸಾಧ್ಯ. ಈ ಸಫಾರಿ ಬಂದ್ ನಿಂದಾಗಿ ರೆಸಾರ್ಟ್ ಗಳಿಗೆ ಪ್ರವಾಸಿಗರು ಕಡಿಮೆಯಾಗಿದ್ದು ಸ್ಥಳೀಯವಾಗಿ ಮಾರಾಟ ಮಾಡುತ್ತಿದ್ದ ರೈತರಿಗೆ ಮಾಂಸ, ಮೀನು, ತರಕಾರಿ, ಆಹಾರ ಪದಾರ್ಥಗಳ ಖರೀದಿಗಾರರ ಸಂಖ್ಯೆ ಕಡಿಮೆ ಆಗಿದೆ, ಆಟೋ, ಕಾರು, ವಾಹನ ಮಾಲೀಕರು ಮತ್ತು ಚಾಲಕರ ಜೀವನ ನಿರ್ವಹಣೆಯೂ ಕಷ್ಟವಾಗಿದೆ ಹಾಗಾಗಿ ನಮ್ಮ ಕೋಟೆ ತಾಲೋಕು ಅಭಿವೃದ್ಧಿ ಹೊಂದಬೇಕಾದರೆ ಪ್ರವಾಸಿಗರು ಬರಬೇಕು ಪ್ರವಾಸಿ ತಾಣ ಹೆಚ್ಚಾಗಬೇಕು ಮತ್ತು ಸಫಾರಿ ಕೇಂದ್ರ ತೆರೆಯಬೇಕು ಎಂದು ರೆಸಾರ್ಟ್ ಮಾಲೀಕ ಕಾಡು ಮನೆ ಪ್ರಸನ್ನ ಒತ್ತಾಯಿಸಿದರು.

ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಹೈರಿಗೆ ಶಿವರಾಜ್ ಮಾತನಾಡಿ, ಬದುಕು ಕಟ್ಟಿಕೊಳ್ಳಲು ಸಫಾರಿ ನಂಬಿರುವ ಕಾರ್ಮಿಕರು ಬೀದಿ ಪಾಲಾಗುವುದರೊಂದಿಗೆ, ಸರ್ಕಾರದ ಬೊಕ್ಕಸಕ್ಕೂ ನಷ್ಟವಾಗಿದೆ. ವನಸಿರಿ ನಾಡಿನ ಸೌಂದರ್ಯ ಸವಿಯಲು ಬರುವ ಪ್ರವಾಸಿಗರ ಸಂಖ್ಯೆ ಕ್ಷೀಣವಾಗಿದೆ. ಸಕ್ರಮವಾಗಿ ನಿರ್ಮಿಸಿರುವ ರೆಸಾರ್ಟ್ ಗಳಿಗೂ ಅನ್ಯಾಯವಾಗಿದೆ. ಕೂಲಿ ಕಾರ್ಮಿಕರ ಬದುಕು ನಿರ್ವಹಣೆಗೆ ಸಫಾರಿ ತೆರೆಯಬೇಕು.

ಉದ್ಯೋಗವಿಲ್ಲದೆ ಕಾರ್ಮಿಕರ ಬದುಕು ಬೀದಿಗೆ ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬಳಿಕ ರೈತ ಮುಖಂಡ ಬೀರಂಬಳ್ಳಿ ಪ್ರಭಾಕರ್ ಮಾತನಾಡಿ, ಸಫಾರಿ ಬೇಡ ಎಂದು ಹೋರಾಟ ಮಾಡುತ್ತಿರುವವರಲ್ಲಿ ಎಷ್ಟು ಜನ ಸ್ಥಳಿಯರು ಇದ್ದಾರೆ, ರೈತ ಸಂಘಟನೆ ಹೋರಾಟ ಮಾಡಲಿಕ್ಕೆ ಸಾಕಷ್ಟು ಸಮಸ್ಯೆಗಳಿವೆ, ಸರ್ಕಾರಿ ಕಛೇರಿಗಳಲ್ಲಿ ಸಮರ್ಪಕವಾಗಿ ನೌಕರರಿಲ್ಲ, ಕೃಷಿ ಇಲಾಖೆಯಲ್ಲಿ ಬಿತ್ತನೆ ಬೀಜ ಸರಿಯಾಗಿ ನೀಡುತ್ತಿಲ್ಲ, ರೈತರಿಗೆ ಸಾಗುವಳಿ ನೀಡುತ್ತಿಲ್ಲ, ಸರ್ಕಾರಿ ಶಾಲೆಗಳಲ್ಲಿ ಸರಿಯಾದ ಶಿಕ್ಷಕರಿಲ್ಲದೆ ಶಾಲೆಗಳನ್ನು ಮುಚ್ಚುವ ಹಂತಕ್ಕೆ ಹೋಗಿವೆ ಇಂತಹ ವಿಚಾರಗಳನ್ನು ಎತ್ತಿಕೊಂಡು ಹೋರಾಟ ಮಾಡದೇ ಸಫಾರಿ ಕೇಂದ್ರವನ್ನು ಟಾರ್ಗೆಟ್ ಮಾಡಿರುವ ಉದ್ದೇಶವಾದರೂ ಏನು ಮತ್ತೆ ಸಫಾರಿ ಬೇಡ ಅನ್ನುವ ಹೋರಾಟಕ್ಕೆ ಸ್ಥಳೀಯರು ಎಷ್ಟರಮಟ್ಟಿಗೆ ಸಹಕಾರ ನೀಡುತ್ತಿದ್ದಾರೆ ಎಂಬುದನ್ನು ಮನಗಾಣಬೇಕು, ಅದ್ದರಿಂದ ಸರ್ಕಾರ ಯಾವುದೇ ಹೆದರಿಕೆ ಬೆದರಿಕೆಗೆ ಜಗ್ಗದೆ ಸಫಾರಿ ಕೇಂದ್ರ ತೆರೆಯಿರಿ ಎಂದರು.

ಸಣ್ಣ ಕುಮಾರ್, ಪುಟ್ಟಮಾದು, ಆಟೋ ಕುಮಾರ್ ಸಣ್ಣಸ್ವಾಮಿ ಅನುಷಾ ಸದಾಶಿವ ಕೋಟೆ ಕೃಷ್ಣ ಮಟಕೆರೆ, ಜೀವಿಕ ಬಸವರಾಜ್, ಬೀರಂಬಳ್ಳಿ ಪ್ರಭಾಕರ್, ಗುಂಡತ್ತೂರು ಪಿ. ಮಾದೇಗೌಡ, ಚಾಮರಾ, ಮಂಜು ಮಗ್ಗೆ, ನಾಗೇಶ್ ಸೇರಿದಂತೆ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ರೈತ ಸಂಘದ ಮುಖಂಡರು, ಆಟೋ ಚಾಲಕರ ಸಂಘದವರು ಇದ್ದರು.

## ಹುಲಿಗೆ ತಡೆಗೋಡೆ ನಿರ್ಮಿಸಿ: ಸಫಾರಿಗೆ ಅನುವು ಮಾಡಿಕೊಡಿ

**ರೈತರ ಮೇಲೆ ಹುಲಿ ದಾಳಿ ಮಾಡಿರುವುದು ನೋವಿನ ಸಂಗತಿ, ಆದರೆ ಅಂತರಸಂತೆ ಯಿಂದ ಭಾವಲಿವರೆಗೆ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ ಬಂಡಿಪುರದ 40 ಕಿಲೋಮೀಟರ್ ಒಳಗಡೆ ಹುಲಿ ದಾಳಿ ನಡೆದಿದೆ. ಸರ್ಕಾರ ನಮಗೆ ಬೆಳಿಗ್ಗೆ 7 ರಿಂದ 9, ಸಂಜೆ 4 ರಿಂದ 6 ಗಂಟೆಗಳ ಕಾಲ ಮಾತ್ರ ಸಫಾರಿಗೆ ಅವಕಾಶ ಕೊಟ್ಟಿದೆ, 2500 ಕಾರ್ಮಿಕರು ರೆಸಾರ್ಟ್ ನಲ್ಲಿ ಕೆಲಸ ಮಾಡುತ್ತಿದ್ದು ಸುಮಾರು 15 ಸಾವಿರದಷ್ಟು ಜನರು ಕಾರ್ಮಿಕರನ್ನು ಅವಲಂಬಿಸಿ ದ್ದಾರೆ. 20 ವರ್ಷದ ಹಿಂದೆ ಹುಲಿಗಳ ಸಂಖ್ಯೆ 60 ಇತ್ತು ಪ್ರಸಕ್ತ ದಿನಗಳಲ್ಲಿ 120 ರಿಂದ 140 ಆಗಿದೆ ಇದರಿಂದ ಹುಲಿಗಳ ಸಂತ ತಿಯು ಜಾಸ್ತಿಯಾಗಿದೆ. ಸಫಾರಿಯಿಂದಲೇ ರೈತರ ಮೇಲೆ ಹುಲಿ ದಾಳಿ ಆಗುತ್ತಿದೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ ಹುಲಿಗಳಿಗೆ ತಡೆಗೋಡೆ ನಿರ್ಮಿಸಿ ಸಫಾರಿಗೆ ಅವಕಾಶ ಮಾಡಿಕೊಡಬೇಕು ಇದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ ಸಫಾರಿ ತೆರೆಯುವಂತೆ ಮಾಡಬೇಕು ಎಂದು ಕೂಲಿ ಕಾರ್ಮಿಕ ಚಾಮರಾಜು ಹೇಳಿದರು.**

> **ತಾಲೂಕಿನಲ್ಲಿ ಇರುವ ರೆಸಾರ್ಟ್ ಮತ್ತು ಸಫಾರಿಯಿಂದ ಸ್ಥಳೀಯ ಯುವಕರಿಗೆ ಉದ್ಯೋಗ ಸಿಕ್ಕಿ ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದರು. ಸರ್ಕಾರ ಏಕಾಏಕಿ ಸಫಾರಿ ಬಂದ್ ಮಾಡಿರುವುದರಿಂದ ಯುವಕರು ಬೀದಿಗೆ ಬಂದು ನಿರುದ್ಯೋಗ ಅನುಭವಿಸುತ್ತಿದ್ದು ಕುಟುಂಬಗಳು ಅತಂತ್ರವಾಗಿದೆ ಹೀಗಾಗಿ ಸರ್ಕಾರ ಶೀಘ್ರವೇ ಸಫಾರಿ ಕೇಂದ್ರವನ್ನು ತೆರೆಯಬೇಕು.**
> **–ಗ್ಯಾಸ್ ಪ್ರಕಾಶ್**

> **ಎಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನಿಂದ ಸುಮಾರು 2.000 ಸಾವಿರಕ್ಕೂ ಹೆಚ್ಚು ಕುಟುಂಬಗಳು ರೆಸಾರ್ಟ್ ಹಾಗೂ ಸಫಾರಿಯನ್ನು ನಂಬಿ ಬದುಕುತ್ತಿವೆ ಸಫಾರಿ ಬಂದ್ ಆದಾಗಿನಿಂದ ನಮ್ಮಗಳ ಸ್ಥಿತಿ ಗಂಭೀರವಾಗಿ ನಮ್ಮ ಕುಟುಂಬ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸ, ಸಾಲ ಸೋಲ, ವ್ಯಾಪರ ವೈವಾಟು ತುಂಬಾ ಕೆಟ್ಟದಾಗಿದೆ ಅದ್ದರಿಂದ ಕಾರ್ಮಿಕರ ಹಿತದೃಷ್ಟಿಯಿಂದ ಸಫಾರಿ ತೆರೆಯಬೇಕು.**
> **–ಹೊಸಮಾಳ ಸ್ವಾಮಿ** ರೈತ.

# ಗ್ರಾಪಂ ಸದಸ್ಯರನ್ನೇ ಮುಂದುವರೆಸುವಂತೆ ಆಗ್ರಹ



ಮೈಸೂರು: ಗ್ರಾಮ ಪಂಚಾಯಿತಿಗಳಲ್ಲಿ ಹಾಲಿ ಇರುವ ಆಡಳಿತ ಮಂಡಳಿಯನ್ನೇ ಮುಂದುವರೆಸಿ ಆಡಳಿತಾಧಿಕಾರಿ ನೇಮಕ ಹಿಂಪಡೆಯುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದಿಂದ ಜಿಲ್ಲಾ ಪಂಚಾಯತ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಗ್ರಾಮ ಪಂಚಾಯಿತಿಗಳು ತಳ ಹಂತದ ಗ್ರಾಮಗಳ ಆಡಳಿತ ಕೇಂದ್ರವಾಗಿವೆ. ಸಂವಿಧಾನದ ಆಶಯ ಜಾರಿಗೊಳಿಸುವಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಹಿಂದುಳಿದ ವರ್ಗ, ಶೋಷಿತ ಸಮುದಾಯಗಳು ಹಾಗೂ ಮಹಿಳೆಯರು ರಾಜಕೀಯ ಅಧಿಕಾರ ಬಳಸುವ ಅವಕಾಶ ನೀಡಿದೆ. ಈಗಾಗಲೇ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳಲ್ಲಿ ಸಕಾಲಕ್ಕೆ ಚುನಾವಣೆ ನಡೆಯದೆ 5,000ಕ್ಕೂ ಹೆಚ್ಚು ಗ್ರಾಮೀಣ ನಾಯಕತ್ವದ ಅವಕಾಶವನ್ನು ಕಸಿದು ಅಧಿಕಾರಶಾಯಿಗಳ ಮುಖಾಂತರ ಆಡಳಿತ ನಡೆಸಲಾಗುತ್ತಿದೆ ಎಂದು ಹೇಳಿದರು. ಕೋವಿಡ್ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು ಎರಡು ವರ್ಷಗಳ ಕಾಲ ನಿರಂತರವಾಗಿ ಜೀವ ಭಯವಿದ್ದರೂ ಜನರ ಕಷ್ಟಗ ಳಿಗೆ ಸ್ಪಂದಿಸಿದ ಇತಿಹಾಸ ಇರುವುದರಿಂದ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ 1 ಲಕ್ಷಕ್ಕೂ ಹೆಚ್ಚು ಗ್ರಾಮೀಣ ನಾಯಕತ್ವದ ಪ್ರತಿಭೆಗಳನ್ನು ಉಳಿಸುವ ಅತ್ಯಮೂಲ್ಯ ಜವಾಬ್ದಾರಿ ರಾಜ್ಯ ವಿಧಾನ ಸಭೆಯ ಮೇಲಿದೆ. ಕ್ಷೇತ್ರವಿಂಗಡಣೆ ಹೊಸ ಹೊಸ ಆಲೋಚನೆಗಳು ಚುನಾವಣೆಯನ್ನು ಮುಂದಕ್ಕೆ ಹಾಕುವ ಅನಿವಾರ್ಯತೆಯನ್ನು ಸರ್ಕಾರದಲ್ಲಿ ತಂದೊಡ್ಡಬಹುದು. ಹಾಗಾಗಿ ಆಡಳಿತಾಧಿಕಾರಿ ನೇಮಕ ಮಾಡುವ ಪ್ರಸ್ತಾವ ಕೈ ಬಿಟ್ಟು, ಗ್ರಾಮ ಪಂಚಾಯಿತಿ ಸದಸ್ಯರ ಆಡಳಿತಾ ವಧಿ ಮುಗಿದ ನಂತರ ರಾಜ್ಯ ಚುನಾವಣಾ ಆಯೋಗ ಗ್ರಾಮ ಪಂಚಾಯಿತಿ ಚುನಾವಣೆಯ ಅಧಿಸೂಚನೆ ಹೊರಡಿಸುವವರೆಗೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿ ಸದಸ್ಯರ ಆಡಳಿತ ಮಂಡಳಿಯನ್ನು ಯಥಾವತ್ ಮುಂದುವರಿಸಬೇಕೆಂದರು. ಜೆ.ಹೆಚ್. ಪಟೇಲ್ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಗ್ರಾಮ ಪಂಚಾಯಿತಿ ಆಡಳಿತಾವಧಿ ಮುಕ್ತಾಯವಾಗಿದ್ದರೂ 15 ತಿಂಗಳುಗಳ ಕಾಲ ಹಾಲಿ ಸಮಿತಿಯನ್ನೇ ಮುಂದುವರಿಸಿದ ಉದಾಹರಣೆ ಇದೆ. ಹೀಗಾಗಿ ಈ ಅಂಶವನ್ನು ಪರಿಗಣಿಸಿ ನಮ್ಮ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಎನ್.ಯದುನಾಡು ನಾಗರಾಜು, ಪ್ರಧಾನ ಕಾರ್ಯದರ್ಶಿ ಎಡತೊರೆ ಮಹೇಶ್, ರಾಜು ಹುಣಸೂರು, ನಿಶಾಂತ್, ನಂದಕುಮಾರ್, ರಾಮೇಗೌಡ, ರವಿಚಂದ್ರ, ನಟರಾಜು, ಚಂದ್ರಶೇಖರ್, ದ್ರಾಕ್ಷಾಯಿಣಿ, ಬೃಂದಾ ಕೃಷ್ಣೇಗೌಡ, ಸೌಮ್ಯ ಸೇರಿ ಅನೇಕರು ಹಾಜರಿದ್ದರು.

# ಸರ್ಕಾರಿ ಶಾಲೆ, ಆಸ್ಪತ್ರೆಗಾಗಿ ಹೋರಾಟ

ಮೈಸೂರು: ರಾಜ್ಯ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಹೆಸರಿನಲ್ಲಿ ಸರ್ಕಾರಿ ಶಾಲೆ ಮುಚ್ಚುವ, ಕೆಲ ಆಸ್ಪತ್ರೆಗಳನ್ನು ಮುಚ್ಚುವ ಹುನ್ನಾರ ಜ.25 ರೊಳಗೆ ಕೈಬಿಡದಿದ್ದರೆ ಜ.26 ರಂದು ಗಣರಾಜ್ಯೋತ್ಸವ ನಡೆ ಯುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ರಾಷ್ಟ್ರ ಧ್ವಜದೊಡನೆ ಕಪ್ಪು ಬಾವುಟ ಹಿಡಿದು ಪ್ರತಿಭಟಿಸಲಾಗು ವುದು ಎಂದು ರೈತ ಸಂಘ ಹಾಗೂ ಇನ್ನಿತರ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಈ ಕುರಿತು ನಗರದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಧ್ಯಕ್ಷ ಬನ್ನೂರು ನಾರಾಯಣ್ ಮಾತನಾಡಿ, ರಾಜ್ಯದ ಗ್ರಾಮೀಣ ಭಾಗದ ರೈತರರು, ಕೃಷಿ ಕಾರ್ಮಿಕರು, ಕೂಲಿ ಕಾಮಿಕರ ವಿರೋಧೀ ನೀತಿಯನ್ನು ರಾಜ್ಯ ಸರ್ಕಾರ ಜ. 25 ರೊಳಗೆ ಕೈಬಿಡಬೇಕು. ಇಲ್ಲದಿದ್ದರೆ ಚಾಮುಂಡಿ ವಿಹಾರ ಕ್ರೀಡಾಂಗಣದ ಗಣರಾಜ್ಯೋತ್ಸವ ವೇಳೆ ಒಂದು ಕೈಯ್ಯಲ್ಲಿ ರಾಷ್ಟ್ರ ಧ್ವಜ, ಇನ್ನೊಂದು ಕೈಯ್ಯಲ್ಲಿ ಕಪ್ಪು ಬಾವುಟು ಹಿಡಿದು ಆಕ್ರೋಶ ವ್ಯಕ್ತಪಡಿಸಲಾಗುವುದೆಂದರು. ಈ ಹೋರಾಟಕ್ಕೆ ಎಸ್‌ಡಿಎಂಸಿ ಸಂಘ, ಎಐಡಿಎಸ್‌ಓ, ಗಂಧದ



ಗುಡಿ ಫೌಂಡೇಷನ್ ಹಾಗೂ ನಗರದ ಇನ್ನಿತರ ಕನ್ನಡಪರ ಸಂಘಟನೆಗಳು ಬೆಂಬಲ ಸೂಚಿಸಿವೆ ಎಂದರು.

ಎಐಡಿಎಸ್‌ಓ ಸಂಘಟನಾ ಕಾರ್ಯದರ್ಶಿ ನಿತಿನ್ ಮಾತನಾಡಿ, ಮುಂದಿನ ದಿನಗಳಲ್ಲಿ ಏಕರೂಪ ಶಿಕ್ಷಣ ಜಾರಿಗೊಳಿಸಬೇಕು, ಪ್ರತಿ ಗ್ರಾಮದಲ್ಲಿಯೂ ಎಲ್‌ಕೆಜಿಯಿಂದ 5 ನೇ ತರಗತಿವರೆಗೆ ಮೂಲ ಸೌಕರ್ಯ ನೀಡಿ ಗುಣಮಟ್ಟದ ಶಿಕ್ಷಣ ಕೊಡಬೇಕು, ಪ್ರತಿ ಗ್ರಾಪಂನಲ್ಲಿಯೂ ನವೋದಯ ಮಾದರಿಯಲ್ಲಿ 6ನೇ ತರಗತಿಯಿಂದ ಪಿಯುಸಿ ವರೆಗೂ ವಸತಿ ಶಿಕ್ಷಣ ಕೊಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ತೀವ್ರ ಹೋರಾಟ ನಡೆಸಲಾಗುವುದೆಂದರು. ಎನ್.ರೇವಣ್ಣ, ದಾರಿಪುರ ಚಂದ್ರಶೇಖರ್, ಆರ್ಯನ್ ಗಂಧದಗುಡಿ ಇನ್ನಿತರ ಮುಖಂಡರು ಹಾಜರಿದ್ದರು.

# ವ್ಯಕ್ತಿತ್ವ ರೂಪಿಸಲು ಕ್ರೀಡೆ ಸಹಕಾರಿ

ಗುಂಡ್ಲುಪೇಟೆ: ವಿದ್ಯಾರ್ಥಿಗಳಲ್ಲಿ.ಅತ್ಮವಿಶ್ವಾಸ ಆತ್ಮ ಸ್ಥೈರ್ಯ ಶಿಸ್ತು ಸಂಯಮದ ಜತೆಗೆ ವ್ಯಕ್ತಿತ್ವವನ್ನು ರೂಪಿಸಲು ಕ್ರೀಡೆ ಸಹಕಾರಿಯಾಗಿದ್ದು ಸೋಲು ಗೆಲುವು ಬಗ್ಗೆ ಯೋಚಿಸದೆ ಕ್ರೀಡೆಯಲ್ಲಿ ಪಾಲ್ಗೊಳ್ಳವುದನ್ನು ರೂಢಿಸಿಕೊಳ್ಳಬೇಕು ಎಂದು ಚಾಮರಾಜನಗರ ಗುಪ್ತಚರ ದಳದ ಡಿ.ವೈ.ಎಸ್.ಪಿ. ಎ.ಮಲ್ಲೇಶ್ ಹೇಳಿದರು

ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣ ದಲ್ಲಿ ಮೈ ಭಾರತ್ ಕೇಂದ್ರ ಚಾಮರಾಜನಗರ ಹಾಗೂ ಗುಂಡ್ಲುಪೇಟೆ ಸ್ಪೋರ್ಟ್ಸ್ ಅಸೋಸಿಯೇಷನ್ (ರಿ) ಸಂಯುಕ್ತ ಆಶ್ರಯದಲ್ಲಿ ಟೌನ್ ಮಟ್ಟದ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗುಂಡ್ಲುಪೇಟೆ ಸ್ಪೋರ್ಟ್ಸ್ ಅಸೋಸಿಯೇಷನ್ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಸ್ಪರ್ಧಿಸಿದ ಪ್ರತಿಯೊಬ್ಬ ವಿದ್ಯಾರ್ಥಿಗೆ ಗೆಲುವು ಸಾಧ್ಯವಿಲ್ಲ. ಸೋಲು ಗೆಲುವು ಹೊರತುಪಡಿಸಿ ಕ್ರೀಡೆಯಲ್ಲಿ ಭಾಗವಹಿಸುವ ಮನೋಭಾವ ಪ್ರತಿಯೊಬ್ಬ ವಿದ್ಯಾರ್ಥಿ ಬೆಳೆಸಿಕೊಳ್ಳಬೇಕು ಎಂದ ಅವರು, ವಿದ್ಯಾರ್ಥಿ ನಿತ್ಯ ಲವಲವಿಕೆಯ ಜತೆಗೆ ಆತ್ಮವಿಶ್ವಾಸ, ಆತ್ಮಸ್ಥೈರ್ಯ, ಶಿಸ್ತು, ಸಂಯಮದಿಂದ ವ್ಯಕ್ತಿತ್ವ ರೂಪಿಸಿಕೊಳ್ಳಲು ಕ್ರೀಡೆ ಸಹಕಾರಿಯಾಗಿದೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್.ಸ್ವಾಮಿ ಮಾತ



ನಾಡಿ, ಮಕ್ಕಳಿಗೆ ಶಿಕ್ಷಣದ ಜೊತೆ ಕ್ರೀಡೆಯು ಅತ್ಯಾವಶ್ಯಕವಾಗಿದ್ದು ದೈಹಿಕ, ಮಾನಸಿಕವಾಗಿ ಸಧೃಡವಾಗಿರಲು ಸಹಕಾರಿಯಾಗುತ್ತದೆ ಎಂದು ಹೇಳಿದರು. ಇದೇ ಸಂಧರ್ಭದಲ್ಲಿ ರಾಷ್ಟ್ರೀಯ ವುಶು ಕ್ರೀಡೆಯಲ್ಲಿ ಚಿನ್ನದ ಪದಕ ವಿಜೇತೆ ಕುಮಾರಿ ಮೋನಿಷಾಳನ್ನು ಸನ್ಮಾನಿಸಲಾಯಿತು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸತೀಶ್, ಶಿಕ್ಷಣ ಸಂಯೋಜಕ ದುಂಡು ಮಹದೇವು,ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್. ಬಸವರಾಜು,ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಚಿಕ್ಕ ಮಲ್ಲಪ್ಪ,ಗುಂಡ್ಲುಪೇಟೆ ಸ್ಪೋರ್ಟ್ಸ್ ಅಸೋಸಿಯೇಷನ್ ಅಧ್ಯಕ್ಷ ಗೋವಿನಾಯಕ್, ಉಪಾಧ್ಯಕ್ಷ ನಾಗರಾಜು( ಕ್ರೇಜಿ),ಸಂಚಾಲಕ ರಮೇಶ್, ಖಜಾಂಚಿ ಅಶೋಕ್, ಜೆ ಎಫ್ ಸಿ ಟೀಮ್‌ನ ಶಶಿಕುಮಾರ್, ಗಿರೀಶ್,ಊಟಿ ಶಿವು, ವೇಣು ಸಲಗಾರ್ ಸೇರಿದಂತೆ ಇನ್ನಿತರರು ಇದ್ದರು.

# ಸಕಾಲದಲ್ಲಿ ನಿರಪೇಕ್ಷಣಾ ಪತ್ರ ನೀಡುವಂತೆ ಒತ್ತಾಯ



ಗುಂಡ್ಲುಪೇಟೆ :ಸಕಾಲದಲ್ಲಿ ನಿರಪೇಕ್ಷಣಾ ಪತ್ರ ನೀಡುವಂತೆ ಒತ್ತಾಯಿಸಿ ರಾಜ್ಯ ರೈತ ಸಂಘ ಮುಂಟೀಪುರ ಗ್ರಾಮ ಘಟಕದ ಪದಾಧಿಕಾರಿಗಳು ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ನವರ ನೇತೃತ್ವದಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನದ ಗುಂಡ್ಲುಪೇಟೆ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ್ ರಿಗೆ ಮನವಿ ಸಲ್ಲಿಸಿದರು.

ರೈತ ಸಂಘಟನೆಯಿಂದ ತಾಲ್ಲೂಕು ಕಛೇರಿ ಮುಂದೆ 37 ದಿನಗಳ ಅಹೋ ರಾತ್ರಿ ಧರಣಿ ನಡೆಸುವಾಗ ಸ್ಥಳಕ್ಕೆ ಬಂದಿದ್ದ ಅರಣ್ಯ ಸಚಿವರು ಹಾಗೂ ಸಿಎಫ್‌ಓ ನಮ್ಮಿಂದ ಮಾಹಿತಿ ಪಡೆದು 15 ದಿನಗಳಲ್ಲಿ ಎನ್ ಓಸಿ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ಬರಗಿ ಸರ್ವೆ ನಂ. 242 ರಲ್ಲಿ ಕಳೆದ 70 ವರ್ಷಗಳ ಹಿಂದಿನಿಂದಲೂ ಸಾಗುವಳಿ ಮಾಡಿಕೊಂಡು ನಮ್ಮಗಳ ಕುಟುಂಬ. ನಿರ್ವಹಿಸಿಕೊಂಡು ಬರುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ನಮಗೆ ಎನ್‌ಒಸಿ ಕೊಡಲು ಅವಕಾಶವಿದೆ. ಅಲ್ಲದೇ 8 ತಿಂಗಳ ಹಿಂದೆ ಕಂದಾಯ ಮತ್ತು ಅರಣ್ಯ ಇಲಾಖೆ ಜಂಟಿ ಸರ್ವೆ ನಡೆಸಿದರೂ ಇಂದಿಗೂ ಎನ್‌ಒಸಿ ನೀಡಿರುವುದಿಲ್ಲ. ನಿರ್ಲಕ್ಷ ಮುಂದುವರೆದರೆ ಜ.28 ಮತ್ತು 29 ರಂದು ಸಾಗುವಳಿ ಮಾಡುತ್ತಿರುವ ಎಲ್ಲಾ ಕುಟುಂಬಗಳ ಸದಸ್ಯರು ಜಾನುವಾರುಗಳ ಸಮೇತ ಅರಣ್ಯ ಇಲಾಖೆ ಕಚೇರಿ ಮುಂದೆ ಅಹೋರಾತ್ರಿ ಧರಣಿ ನಡೆಸುತ್ತೇವೆ.

ಆ ಮೂಲಕ ರೈತ ವಿರೋಧಿ ಅರಣ್ಯ ಇಲಾಖೆಯ ಆಡಳಿತ ವೈಖರಿಯನ್ನು ಜನತಾ ನ್ಯಾಯಾಲಯದ ಮುಂದೆ ತೀರ್ಮಾನಿಸಲು ಉದ್ದೇಶಿಸಲಾಗಿದೆ. ಆದ್ದರಿಂದ ತಕ್ಷಣ ಎನ್‌ಒಸಿ ನೀಡಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಸಂಘಟನೆ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಆಗ್ರಹಿಸಿದರು. ಈ ಸಂದರ್ಭದಲ್ಲಿ ಸಂಘಟನೆ ತಾಲೂಕು ಪ್ರಧಾನ ಕಾರ್ಯದರ್ಶಿ ಮಲ್ಲಯ್ಯನಪುರಶಿವಣ್ಣ, ಗ್ರಾಮ ಘಟಕದ ಗೌರವಾಧ್ಯಕ್ಷ ಜಿ.ಎಸ್.ಸಿದ್ದರಾಜು, ಅಧ್ಯಕ್ಷ ಎಸ್.ಮಹದೇವಸ್ವಾಮಿ, ಮುಖಂಡರಾದ ಪ್ರವೀಣ್ ಮಹದೇವಸ್ವಾಮಿ, ರೂಪೇಶ್, ಕುಮಾರ್, ಬಸವರಾಜು, ಸಂಪತ್ತು, ದೊಡ್ಡಯ್ಯ, ಮಹೇಂದ್ರ, ಶಿವಕುಮಾರ್, ಸಿದ್ದರಾಜು, ರಾಜೇಂದ್ರ, ಮಹದೇವಸ್ವಾಮಿ ಹಾಜರಿದ್ದರು.

## ಶಾಲಾ ವಿದ್ಯಾರ್ಥಿಗಳಿಗೆ ತೆರದ ಮನೆ

ಗುಂಡ್ಲುಪೇಟೆ: ಪಟ್ಟಣ ಪೊಲೀಸ್ ಠಾಣೆ ವತಿಯಿಂದ ರಸ್ತೆ ಸುರಕ್ಷತಾ ಮಾಸಾಚರಣೆ – 2026 ರ ಅಭಿಯಾನದ ಅಂಗವಾಗಿ ಗುಂಡ್ಲುಪೇಟೆ ಠಾಣೆಯಲ್ಲಿ ಶಾಲಾ ವಿದ್ಯಾರ್ಥಿಗಳಿಗೆ "ತೆರದ ಮನೆ" ಕಾರ್ಯಕ್ರಮ ಆಯೋಜಿಸಿ ಠಾಣೆಯ ದೈನಂದಿನ ಕರ್ತವ್ಯಗಳು, ಸೈಬರ್ ಅಪರಾಧಗಳು, ಮಾದಕ ವಸ್ತುಗಳ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳು, ರಸ್ತೆ ಸುರಕ್ಷತೆ ಮತ್ತು ಸಂಚಾರ ನಿಯಮಗಳ ಪಾಲನೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲಾಯಿತು

ಡಿವೈಎಸ್ಪಿ ಸ್ನೇಹರಾಜ್ ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮಕ್ಕೆ ಪಟ್ಟಣ ಪೊಲೀಸ್ ಠಾಣೆ ಮುಂಭಾಗ ಚಾಲನೆ ನೀಡಿದರು ನಂತರ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಂದ ಜಾಗೃತಿ ಜಾಥಾ ನಡೆಸಲಾಯಿತು. ಈ ಸಂದರ್ಭದಲ್ಲಿ ಸರ್ಕಲ್ ಇನ್ಸ್ ಪೆಕ್ಟರ್ ಜಯಕುಮಾರ್, ಬೇಗೂರು ಸರ್ಕಲ್ ಇನ್ಸ್ ಪೆಕ್ಟರ್ ಮೋಹಿತ್ ಸಹದೇವ್, ಸಬ್ ಇನ್ಸ್ ಪೆಕ್ಟರ್ ಗಳಾದ ಮಹೇಶ್, ನರೇಶ್ ಕುಮಾರ್, ಮತ್ತಿತರರಿದ್ದರು.



## ಜ.24ರಿಂದ ರೋಟರಿ ಜಿಲ್ಲಾ ಸಮಾವೇಶ

ಮೈಸೂರು: ರೋಟರಿ ಅಂತಾರಾಷ್ಟ್ರೀಯ ಜಿಲ್ಲೆ 3160 ರ 42ನೇ ಜಿಲ್ಲಾ ಸಮಾವೇಶ ಜ.24 ಮತ್ತು 25ರಂದು ನಗರದ ಸೈಲೆಂಟ್ ಶೋರ್ ರೆಸಾರ್ಟ್ ನಲ್ಲಿ ನಡೆಯಲಿದೆ ಎಂದು ಜಿಲ್ಲಾ ರಾಜ್ಯಪಾಲ ಎಂ.ಕೆ.ರವೀಂದ್ರ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸ್ವಾರ್ಥ ಮೀರಿದ ಸೇವೆ ವಿಷಯ ಆಧರಿತವಾದ ಸಮಾವೇಶ ಇದಾಗಿದೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮುಖ್ಯ ಅತಿಥಿಗಳಾಗಿರುವರು. ತಾವು ಅಧ್ಯಕ್ಷತೆ ವಹಿಸುವುದಾಗಿ ತಿಳಿಸಿದರು. ಗುರುಜೀತ್ ಸಿಂಗ್ ಶೆಖಾವ್, ರೊ. ಶರತ್ ಬಾಬು ಚಿಲುಕುರಿ, ಡಾ.ಸಿ.ಎನ್. ಮಂಜುನಾಥ್, ಡಾ. ರಮೇಶ್ ಅರವಿಂದ್ ಇನ್ನಿತರರು ಸಹಾ ಅತಿಥಿಗಳಾಗಿರುವರು. ಈ ವೇಳೆ ಪ್ರೇರಣಾದಾಯಕ ಭಾಷಣ, ಸಂವಾದ, ಶಿಕ್ಷಣ, ಆರೋಗ್ಯ ಯೋಜನೆ, ಮಹಿಳಾ ಸಬಲೀಕರಣ ಮೊದಲಾದವರು ನಡೆಯಲಿವೆ. ರಾಜ್ಯದ ಒಂಭತ್ತು ಕಂದಾಯ ಜಿಲ್ಲೆಗಳು ಮತ್ತು ಆಂಧ್ರ ಪ್ರದೇಶದ 8 ಕಂದಾಯ ಜಿಲ್ಲೆಗಳಿಂದ ಪ್ರತಿನಿಧಿಗಳು ಆಗಮಿಸಲಿದ್ದಾರೆಂದು ಮಾಹಿತಿ ನೀಡಿದರು. ಆರ್. ಮಂಜುನಾಥ್, ಮಧುಪ್ರಸಾದ್, ವಿಶ್ವನಾಥ್, ಡಾ.ಮಧುಸೂದನ್ ರೆಡ್ಡಿ ಇದ್ದರು.



## ನಾಳೆ ಸಿಎಂ ಜಿಲ್ಲಾ ಪ್ರವಾಸ ಕಾರ್ಯಕ್ರಮ

ಮೈಸೂರು:– ಮುಖ್ಯಮಂತ್ರಿ ಸಿದ್ದರಾಮಯ್ಯ ಜ.25 ರಂದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ಜ.25 ರಂದು ಬೆಳಿಗ್ಗೆ 11:25 ಗಂಟೆಗೆ ವಿಶೇಷ ವಿಮಾನದ ಮೂಲಕ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ನಂತರ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ತೆರಳಲಿದ್ದಾರೆ.

# ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಉಸ್ತುವಾರಿ ಸಚಿವ ಗರಂ

## ಚಿರತೆ ದಾಳಿಗೆ ಬಲಿಯಾದ ಪ್ರವೀಣ್ ಕುಟುಂಬಕ್ಕೆ ಚೆಕ್ ವಿತರಣೆ

ಚಾಮರಾಜನಗರ, ಚಿರತೆ ದಾಳಿಗೆ ಬಲಿಯಾದ ಪ್ರವೀಣ್ ಕುಟುಂಬಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಪರಿಹಾರದ ಚೆಕ್ ವಿತರಿಸಿದರು. ಚಾಮರಾಜನಗರದ ಜಿಲ್ಲಾಡಳಿತ ಭವನದಲ್ಲಿ ಗುರುವಾರ ಸಂಜೆ ಅಧಿಕಾರಿಗಳ ಜೊತೆ ಸಭೆ ನಡೆಸಿದ ಬಳಿಕ ಮೃತ ಪ್ರವೀಣ್ ತಾಯಿ ಸುಶೀಲಮ್ಮಗೆ 5 ಲಕ್ಷ ರೂ. ಚೆಕ್ ವಿತರಣೆ ಮಾಡಿ, ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಇನ್ನುಳಿದ 15 ಲಕ್ಷ ರೂ. ನೀಡಲಾಗುವುದು ಎಂದರು. ಇದೇ ವೇಳೆ, ಸರ್ಕಾರ 20 ಲಕ್ಷ ರೂ. ಹಣವನ್ನು ಪರಿಹಾರದ ರೂಪದಲ್ಲಿ ನೀಡಲಿದೆ. ಆಕಸ್ಮಿಕವಾಗಿ ಆದ ಘಟನೆ ಇದಾಗಿದ್ದು, ಧೈರ್ಯ ತಂದುಕೊಳ್ಳಿ ಎಂದು ಮೃತನ ಕುಟುಂಬಕ್ಕೆ ಸಚಿವರು ಸಾಂತ್ವನ ಹೇಳಿದರು.

ಅರಣ್ಯ ಇಲಾಖೆ ವಿರುದ್ಧ ಸಚಿವ ವೆಂಕಟೇಶ್ ಗರಂ: ಪರಿಹಾರದ ಚೆಕ್ ವಿತರಣೆಗೂ ಮುನ್ನ ನಡೆದ ಸಭೆಯಲ್ಲಿ, ಅರಣ್ಯಾಧಿಕಾರಿಗಳನ್ನು ಸಚಿವರು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡರು. ಚಿರತೆ ಆ ಜಾಗದಲ್ಲಿ ಇರುವುದು ಗೊತ್ತಿದ್ದರೂ ಯಾಕೆ ಹಿಡಿಯಲಿಲ್ಲ? ಅರಣ್ಯಾಧಿಕಾರಿಗಳಾಗಿ ನೀವು ಏನು ಕೆಲಸ ಮಾಡುತ್ತಿದ್ದೀರಾ? ನಿಮ್ಮ ಕಾರ್ಯವೈಖರಿ ನೋಡುತ್ತಿದ್ದರೆ ಬೇಸರ ಮೂಡಲಿದೆ. ಸರಿಯಾಗಿ ಕೆಲಸ ಮಾಡಿ,ಬೇಗ ಚಿರತೆ ಹಿಡಿಯಿರಿ. ವನ್ಯಜೀವಿಗಳು ಕಾಡಿನಿಂದ ಹೊರಬರದಂತೆ ಕ್ರಮ ವಹಿಸಿ, ಅರಣ್ಯ ಸಿಬ್ಬಂದಿ ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಗದರಿದರು.

ಅರಣ್ಯ ಸಿಬ್ಬಂದಿ ಕೂಡಲೇ ಪೆಟ್ರೋಲಿಂಗ್ ವ್ಯವಸ್ಥೆಯನ್ನು ಆರಂಭಿಸಬೇಕು. ಸರ್ಕಾರ ಅರಣ್ಯ ಇಲಾಖೆಗೆ ಎಲ್ಲ ರೀತಿಯ ವ್ಯವಸ್ಥೆಯನ್ನು ಮಾಡಿಕೊಟ್ಟಿದೆ. 3 ಥರ್ಮಲ್ ಡ್ರೋಣ್ ಕ್ಯಾಮರಾ ನೀಡಲು ಸರ್ಕಾರ ತೀರ್ಮಾನಿಸಿದೆ. ಹೀಗಾಗಿ ಅರಣ್ಯ



ಸಿಬ್ಬಂದಿ ಪ್ರಾಣಿಗಳು ಕಾಡಿನಿಂದ ಹೊರ ಬರದಂತೆ ಜವಾಬ್ದಾರಿಯಿಂದ ಕೆಲಸ ಮಾಡಿ ಮಾನವ–ವನ್ಯಜೀವಿ ಸಂಘರ್ಷವವನ್ನು ತಡೆಗಟ್ಟುವ ಕೆಲಸ ಮಾಡುವಂತೆ ಸೂಚಿಸಿದರು.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯಾ ಮಾತನಾಡಿ, ಮುಂದಿನ ದಿನಗಳಲ್ಲಿ ಪೆಟ್ರೋಲಿಂಗ್?ನ್ನು ಕಾರ್ಯರೂಪಕ್ಕೆ ತರಲಾಗುವುದು. ಈ ಮೂಲಕ ಎಲ್ಲಿ ಏನಾಗಿದೆ ಎಂಬುದರ ಬಗ್ಗೆ ಪ್ರತಿದಿನ ಮಾಹಿತಿ ಕಲೆ ಹಾಕುತ್ತೇವೆ. ಚಾಮರಾಜನಗರ ವೃತ್ತಕ್ಕೆ ಪಶು ವೈದ್ಯಾಧಿಕಾರಿಗಳ ಅವಶ್ಯಕತೆ ಇದ್ದು, ಆ ಹುದ್ದೆಯನ್ನು ಕೂಡಲೇ ಸರ್ಕಾರ ತುಂಬಿ ಕೊಡಬೇಕು. ಜೊತೆಗೆ ಚಾಮರಾಜನಗರ ವೃತ್ತದಲ್ಲಿ ಅಗತ್ಯಕ್ಕಿಂತ ಕಡಿಮೆ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಚಾಮರಾಜನಗರ ವೃತ್ತಕ್ಕೆ 1,334 ಸಿಬ್ಬಂದಿಯ ಅವಶ್ಯಕತೆ ಇದೆ. ಆದರೆ ಪ್ರಸ್ತುತ 545 ಸಿಬ್ಬಂದಿ ಮಾತ್ರ ಕೆಲಸ ಮಾಡುತ್ತಿದ್ದಾರೆ. ಆದರೆ ಇನ್ನೂ 789 ಸಿಬ್ಬಂದಿಯ ಕೊರತೆ ಇದೆ. ಸಿಬ್ಬಂದಿಯ ಅವಶ್ಯಕತೆಯನ್ನು ಸರ್ಕಾರ ಪೂರೈಸಿದರೆ ಇನ್ನು ಉತ್ತಮ ಮಟ್ಟದಲ್ಲಿ ಕಾರ್ಯವನ್ನು ಮಾಡಲು ಅನುಕೂಲವಾಗಲಿದೆ ಎಂದು ಸಚಿವರ ಗಮನಕ್ಕೆ ತಂದರು.

ಇದಕ್ಕೆ ಸಚಿವ ವೆಂಕಟೇಶ್ ಪ್ರತಿಕ್ರಿಯಿಸಿ, ಪ್ರಸ್ತುತ ಇರುವ ವ್ಯವಸ್ಥೆಯಲ್ಲಿಯೇ ಜವಾಬ್ದಾರಿಯಿಂದ ಕೆಲಸ ಮಾಡಿ. ಕೂಡಲೇ ಪೆಟ್ರೋಲಿಂಗ್ ಕಾರ್ಯವನ್ನುಆರಂಭಿಸಿ. ಎಲ್ಲೆಲ್ಲಿ ಪ್ರಾಣಿಗಳು ಹೊರ ಬರುತ್ತಿವೆ ಎಂಬುದನ್ನು ಗುರುತು ಮಾಡಿಕೊಂಡು, ಅಲ್ಲಿ ಅವುಗಳನ್ನು ತಡೆಗಟ್ಟಲು ಕ್ರಮವಹಿಸಬೇಕು. ಬ್ಯಾರಿಕೇಡ್ ಡಿಸೈನ್ ಬದಲಾಯಿಸಿಕೊಳ್ಳಿ, ಪ್ರಾಣಿಗಳು ಕಾಡಿನಿಂದ ಹೊರ ಬಾರದಿರುವಂತೆ ಶಾಶ್ವತ ಪರಿಹಾರ ಕಂಡುಕೊಳ್ಳಿ ಎಂದು ಆದೇಶಿಸಿದರು.

ಅಲ್ಲದೆ, ಹರಕೆ ಹೊತ್ತು ಮಲೆಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆಯಲ್ಲಿ ಬರುವ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಅವರು ತಾಳುಬೆಟ್ಟದಿಂದ ಮಹದೇಶ್ವರಬೆಟ್ಟಕ್ಕೆ ಪಾದಯಾತ್ರೆ ಹೋಗಲು ಬೆಳಗ್ಗೆ 7ರಿಂದ ಸಂಜೆ 5 ರವರೆಗೆ ಸಮಯ ನಿಗದಿ ಮಾಡುವಂತೆ ಜಿಲ್ಲಾಡಳಿತ ಹಾಗೂ ಅರಣ್ಯ ಇಲಾಖೆಗೆ ಸಚಿವರು ಸೂಚನೆ ನೀಡಿದರು.

## ಮ.ಬೆಟ್ಟಕ್ಕೆ ರಾತ್ರಿ ಪಾದಯಾತ್ರೆ ನಿಷೇಧ

ಹನೂರು : ಶ್ರೀ ಕ್ಷೇತ್ರ ಮಲೆ ಮಾದೇಶ್ವರ ಬೆಟ್ಟಕ್ಕೆ ಸಂಜೆ 6 ಗಂಟೆಯಿಂದ ಬೆಳಗಿನ ಜಾವ 6 ಗಂಟೆವರೆಗೆ ಪಾದಯಾತ್ರೆಯನ್ನು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ನಿಷೇಧಿಸಿದ್ದು ಭಕ್ತಾದಿಗಳು ಸಹಕರಿಸುವಂತೆ ಶ್ರೀ



ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ ಈ ರಘು ಮನವಿ ಮಾಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ರಾಜ್ಯದ ಪ್ರಸಿದ್ಧ ಧಾರ್ಮಿಕ ಯಾತ್ರಾಸ್ಥಳ ಶ್ರೀ ಕ್ಷೇತ್ರ ಮಹದೇಶ್ವರ ಬೆಟ್ಟಕ್ಕೆ ರಾಜ್ಯದ ವಿವಿಧ ಮೂಲೆ ಮೂಲೆಗಳಿಂದ ಪಾದಯಾತ್ರೆಯ ಮೂಲಕ ಮಹದೇಶ್ವರ ದರ್ಶನ ಪಡೆಯಲು ಆಗಮಿಸುತ್ತಿದ್ದಾರೆ. ಜನವರಿ 21ರ ಬೆಳಗಿನ ಜಾವ ಮಂಡ್ಯ ಮೂಲದ ಪಾದಯಾತ್ರಿಕನ ಮೇಲೆ ಚಿರತೆ ದಾಳಿ ನಡೆಸಿ ಮೃತಪಟ್ಟಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾಧಿಕಾರಿಗಳು ಸಂಜೆ 6:00 ಯಿಂದ ಬೆಳಗಿನ ಜಾವ 6:00 ವರೆಗೆ ಪಾದಯಾತ್ರೆಯ ಮೂಲಕ ತೆರಳುವುದನ್ನು ನಿರ್ಬಂಧ ವಿಧಿಸಿ ಆದೇಶ ಹೊರಡಿಸಿದ್ದಾರೆ. ಈ ಸಂಬಂಧ ಶ್ರೀ ಕ್ಷೇತ್ರ ಮಲೆ ಮಾದೇಶ್ವರ ಬೆಟ್ಟಕ್ಕೆ ಬರುವ ಪಾದಯಾತ್ರಿಕರು ಜಿಲ್ಲಾಡಳಿತ ಹಾಗೂ ಪ್ರಾಧಿಕಾರಕ್ಕೆ ಸಹಕಾರ ನೀಡಬೇಕು. ಪಾದಯಾತ್ರೆಯ ಮೂಲಕ ಶ್ರೀ ಕ್ಷೇತ್ರಕ್ಕೆ ಬರುವಂತಹ ಭಕ್ತಾದಿಗಳು ಗುಂಪು ಗುಂಪಾಗಿ ಆಗಮಿಸಬೇಕು ತಾಳುಬೆಟ್ಟದಿಂದ ಮಲೆ ಮಾದೇಶ್ವರ ಬೆಟ್ಟದ ಅರಣ್ಯ ಪ್ರದೇಶದಲ್ಲಿ ಆನೆಯು ಆಗಾಗ ಕಾಣಿಸಿಕೊಳ್ಳುತ್ತಿದೆ ಕಳೆದ ವರ್ಷವೂ ಸಹ ಪಾದಯಾತ್ರೆಯ ಮೂಲಕ ಆಗಮಿಸುತ್ತಿದ್ದ ಮೇಲೆ ಕಾಡಾನೆ ದಾಳಿ ನಡೆಸಿದ ಪರಿಣಾಮ ಮೃತಪಟ್ಟಿದ್ದಾರೆ. ಈ ಹಿನ್ನೆಲೆ ಭಕ್ತಾದಿಗಳು ಸಹ ಮುಂಜಾಗ್ರತ ಕ್ರಮವಹಿಸಿ ಪಾದಯಾತ್ರೆಯ ಮೂಲಕ ತೆರಳಿ ದೇವರ ದರ್ಶನ ಪಡೆಯುವಂತೆ ಮನವಿ ಮಾಡಿದ್ದಾರೆ.

# ಪಾದಯಾತ್ರಿಕನ ಬಲಿ ಪಡೆದಿದ್ದ ಚಿರತೆ ಸೆರೆ

ಚಾಮರಾಜನಗರ, ಪಾದಯಾತ್ರಿಕನ ಬಲಿ ಪಡೆದಿದ್ದ ಚಿರತೆಯನ್ನು ಅರಿವಳಿಕೆ ಚುಚ್ಚು ಮದ್ದು ನೀಡಿ ಸೆರೆ ಹಿಡಿಯುವಲ್ಲಿ ಗುರುವಾರ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಶ್ರೀ ಕ್ಷೇತ್ರ ಮಲೆಮಹದೇಶ್ವರ ಬೆಟ್ಟಕ್ಕೆ ಮಂಡ್ಯ ತಾಲೂಕಿನ ಚಿರನಹಳ್ಳಿ ಗ್ರಾಮದ ಪ್ರವೀಣ್? ಹಾಗೂ ಸ್ನೇಹಿತರು ಪಾದಯಾತ್ರೆಯ ಮೂಲಕ ಜ.21ರ ಬೆಳಗ್ಗೆ ತಾಳಬೆಟ್ಟದಿಂದ ಹೊರಟಿದ್ದರು. ರಂಗಸ್ವಾಮಿ ಒಡ್ಡಿನ ಸಮೀಪ ಪಾದಯಾತ್ರೆ ತೆರಳುತ್ತಿದ್ದ ಪ್ರವೀಣನ ಮೇಲೆ ಚಿರತೆ ದಾಳಿ ನಡೆಸಿ ಅರಣ್ಯಕ್ಕೆ ಎಳೆದೊಯ್ದು ಕೊಂದಿತ್ತು.

ಘಟನೆ ಬಳಿಕ ರಂಗಸ್ವಾಮಿ ಒಡ್ಡಿನ ಸಮೀಪ ಕಾಣಿಸಿಕೊಳ್ಳುತ್ತಿದ್ದ ಚಿರತೆ ಸೆರೆ ಹಿಡಿಯಲು ಎರಡು ಬೋನುಗಳನ್ನು ಇಡಲಾಗಿತ್ತು, ಬೋನಿನಲ್ಲಿ ಎರಡು ನಾಯಿಗಳನ್ನು ಸಹ ಕಟ್ಟಿ ಹಾಕಲಾಗಿತ್ತು. ಹಾಗೆಯೇ, ಚಿರತೆ ಕಾರ್ಯಪಡೆ, ಕೂಂಬಿಂಗ್, ಡ್ರೋನ್ ತಂಡ ಸ್ಥಳದಲ್ಲಿಯೇ ಇದ್ದು ಕಾರ್ಯಾಚರಣೆ ಕೈಗೊಳ್ಳಲಾಗಿತ್ತು.

ಗುರುವಾರ ರಾತ್ರಿ 9.30ರ ಸುಮಾರಿಗೆ ಮಲೆ




ಮಹದೇಶ್ವರ ವನ್ಯಜೀವಿಧಾಮದ ಡಿಸಿಎಫ್?? ಭಾಸ್ಕರ್? ಹಾಗೂ ತಂಡ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡು ಪಶು ವೈದ್ಯಾಧಿಕಾರಿ ಡಾ. ಆದರ್ಶ್ ಅರಿವಳಿಕೆ ಚುಚ್ಚುಮದ್ದು ನೀಡುವ ಮೂಲಕ ಚಿರತೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಅರಿವಳಿಕೆ ಮೇಲಾಧಿಕಾರಿಗಳ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲ್ಲಿದ್ದಾರೆ ಎಂದು ತಿಳಿದುಬಂದಿದೆ.

# ಬೋಸ್ ಆದರ್ಶ ಮೈಗೂಡಿಸಿಕೊಳ್ಳಿ

ಮೈಸೂರು: ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಜನ್ಮದಿನ ಆಚರಿಸಿದರಷ್ಟೇ ಸಾಲದು; ಅವರ ಆದರ್ಶ ವಿಚಾರಗಳನ್ನು ಜೀವನದಲ್ಲಿ ಆದರ್ಶವಾಗಿ ಮೈಗೂಡಿಸಿಕೊಳ್ಳಬೇಕು ಎಂದು ಮಾಜಿ ಮಹಾಪೌರರಾದ ಸಂದೇಶ ಸ್ವಾಮಿ ಹೇಳಿದರು.

ನಗರದಲ್ಲಿ ನ್ಯೂ ಸಯ್ಯಾಜಿರಾವ್ ರಸ್ತ ಶುಕ್ರವಾರ ಸೈನಿಕ ಅಕಾಡೆಮಿ ಹಾಗೂ ಜೀವದಾರ ರಕ್ತ ನಿಧಿ ಕೇಂದ್ರದ ಸಹಯೋಗದೊಂದಿಗೆ ನಡೆದ ನೇತಾಜಿ ಸುಭಾಷ್ ಚಂದ್ರಬೋಸ್ ಅವರ 129ನೇ ಜನ್ಮದಿನದ ಅಂಗವಾಗಿ ಜೈ ಹಿಂದ್ ಕಾರ್ಯಕ್ರಮದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ನಂತರ 30ಕ್ಕೂ ಹೆಚ್ಚು ಯುವಕರು ಸ್ವಯಂ ಪ್ರೇರಿತ ರಕ್ತದಾನ ಮಾಡಿದರು ಮತದಾನ ಶಿಬಿರವನ್ನು ಚಾಲನೆ ನೀಡಿ ಮಾತನಾಡಿದರು. ವಿದ್ಯಾರ್ಥಿಗಳು ಹೆಚ್ಚು ರಾಷ್ಟ್ರೀಯ ಮನೋಭಾವ ದೇಶಪ್ರೇಮದ ವೈಚಾರಿಕವಾಗಿ ಚಿಂತಿಸಬೇಕು. ನೇತಾಜಿ ಅವರು ಹೇಳಿದಂತೆಯೇ ಪ್ರತಿಯೊಂದು ವಿಭಾಗದಲ್ಲೂ ನಡೆಯುವ ಅನ್ಯಾಯವನ್ನು



ಪ್ರಶ್ನಿಸುವ ಗುಣ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಬೋಸ್ ಅವರ ವಿಚಾರಗಳು ಯುವಜನತೆಗೆ ಪ್ರೇರಣೆಯ ಕಥನಗಳಾಗಿವೆ. ಸ್ವತಂತ್ರ ಹೋರಾಟದಲ್ಲಿ ರಾಜೀರಹಿತ ಹೋರಾಟ ಮಾಡಿದ್ದರು. ತಮ್ಮ ಬಾಲ್ಯದಿಂದಲೂ ಇಡೀ ದೇಶದ ಜನರ ವಿಮುಕ್ತಿಗಾಗಿ, ಶೋಷಣೆಯಿಂದ ಹೋರಾಟ ಮಾಡಿದ್ದರು ಎಂದು ಸ್ಮರಿಸಿದರು.

ಇದೇ ಸಂದರ್ಭದಲ್ಲಿ ಸೈನಿಕ ಅಕಾಡೆಮಿಯ ಸಂಸ್ಥಾಪಕ ಸಿ.ಎಂ.ಶ್ರೀಧರ್, ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಮುತ್ತಣ್ಣ, ಬಿಜೆಪಿ ಮುಖಂಡ ಜೋಗಿ ಮಂಜು, ನಗರಪಾಲಿಕೆ ಮಾಜಿ ಸದಸ್ಯ ಜಗದೀಶ್, ದೂರ ರಾಜಣ್ಣ, ಸದಾಶಿವ್, ಆನಂದ್, ಪ್ರಭು, ಮಮತಾ, ಶಿವು ಇನ್ನಿತರರು ಹಾಜರಿದ್ದರು.

## ಡಿಐಜಿ ವಜಾ, ಕೈ ಮುಖಂಡನ ಬಂಧನಕ್ಕೆ ಬಿಜೆಪಿ ಒತ್ತಾಯ

ಮೈಸೂರು: ಡಿಐಜಿ ರಾಮಚಂದ್ರ ರಾವ್ ವಜಾ ಮಾಡಬೇಕೆಂದು ಹಾಗೂ ಶಿಡ್ಲಘಟ್ಟದ ರಾಜೀವ ಗೌಡರನ್ನು ಕೂಡಲೇ ಬಂಧಿಸಬೇಕೆಂದು ಒತ್ತಾಯಿಸಿ ಮೈಸೂರು ಜಿಲ್ಲಾ ಗ್ರಾಮಾಂತರ ಮಹಿಳಾತಂಡದಿಂದ ಡಿಸಿ ಆಫೀಸಿಗೆ ಹೋಗಿ ಒತ್ತಾಯ ಪತ್ರ ಸಲ್ಲಿಸಿದರು.

ಮೈಸೂರು ಜಿಲ್ಲಾಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ, ಪ್ರಧಾನ ಕಾರ್ಯದರ್ಶಿ ಪರೀಕ್ಷಿತ್ ರಾಜ್ ಅರಸು, ರುದ್ರಮೂರ್ತಿ, ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ನಳಿನಿಗೌಡ, ರಾಜ್ಯ ಉಪಾಧ್ಯಕ್ಷ ಡಾ.ಪ್ರಫುಲ್ಲಾ ಮಲ್ಲಾಡಿ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷೆ ಮಂಗಳ ಸೋಮಶೇಖರ್, ಉಪಾಧ್ಯಕ್ಷೆ ಸುಲೋಚನ, ಲಕ್ಷ್ಮಿ, ವರುಣ ಮಹಿಳಾ ಅಧ್ಯಕ್ಷ ಮಂಜುಳಾ ತಟ್ಟೆಕೆರೆ, ಹುಣಸೂರು ಗ್ರಾಮಾಂತರ ಮಹಿಳಾ ಮೋರ್ಚ ಅಧ್ಯಕ್ಷೆ ನಿವೇದಿತ, ಮುಖಂಡರಾದ ಅರುಣ, ಲಕ್ಷ್ಮಣ ತಟ್ಟೆಕೆರೆ ಇನ್ನಿತರರು ಉಪಸ್ಥಿತರಿದ್ದರು.



## ಸಿದ್ದರಾಮಯ್ಯ ತಮ್ಮ ಶಾಸಕರಿಗೆ ಚಿತಾವಣೆ ಕೊಟ್ಟು ಸುಮ್ಮನೆ ಎಲ್ಲಾ ನೋಡುತ್ತಿದ್ದಾರೆ

# ರಾಜ್ಯಪಾಲರಿಗೆ ಕಾಂಗ್ರೆಸ್ ಅಪಮಾನ: ಮಾಜಿ ಸಂಸದ ಪ್ರತಾಪಸಿಂಹ

ಮೈಸೂರು: ಸಿದ್ದರಾಮಯ್ಯ ತಮ್ಮ ಶಾಸಕರಿಗೆ ಚಿತಾವಣೆ ಕೊಟ್ಟು ಸುಮ್ಮನೆ ಎಲ್ಲಾ ನೋಡುತ್ತಿದ್ದಾರೆ. ಸಂಖ್ಯಾ ಬಲದ ಮದದಲ್ಲಿ ಕಾಂಗ್ರೆಸ್ ಈ ರೀತಿ ವರ್ತಿಸಿದೆ. ಪುಂಡ, ಪೋಕರಿ ತರಹ ಕಾಂಗ್ರೆಸ್ ಶಾಸಕರು ವರ್ತಿಸಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಭಿಕಾರಿ ಸರ್ಕಾರ ನಡೆಸುತ್ತಿದ್ದಾರೆ. ಜೀ ರಾಮ್ ಜೀ ಯೋಜನೆಗೆ ರಾಜ್ಯ ಸರ್ಕಾರ 2 ಸಾವಿರ ಕೋಟಿ ರೂಪಾಯಿ ಕೊಡಬೇಕಿದೆ. ಅದನ್ನು ಕೊಡಲು ಇವರ ಕೈಯಲ್ಲಿ ಆಗುತ್ತಿಲ್ಲ. ಹೀಗಾಗಿ ಗಲಾಟೆ ಮಾಡಿದ್ದಾರೆ. ಸಿದ್ದರಾಮಯ್ಯ ಯಾವತ್ತು ತೊಲಗಿ ಹೋಗುತ್ತಾರೋ? ಕಾಂಗ್ರೆಸ್ ಸರ್ಕಾರ ಯಾವಾಗ ಕೊನೆ ಆಗುತ್ತೋ ಎಂದು ರಾಜ್ಯದ ಜನರು ಕಾಯುತ್ತಿದ್ದಾರೆ. ಸಿದ್ದರಾಮಯ್ಯ ತೊಲಗಿದ ನಂತರ ಕಾಂಗ್ರೆಸ್ ಗೆ ಅದೋಗತಿ ಬರಲಿದೆ ಎಂದು ಹರಿಹಾಯ್ದರು.

ರಾಜ್ಯ ಸರ್ಕಾರ ದ್ವೇಷಪೂರಿತ ಭಾಷಣ ಬರೆದು



ಕೊಟ್ಟಿತ್ತು. ಅದನ್ನು ರಾಜ್ಯಪಾಲರು ಹೇಗೆ ಓದುತ್ತಾರೆ?. ಕೇಂದ್ರ ಸರಕಾರದ ವಿರುದ್ಧ ಖಂಡನಾ ನಿರ್ಣಾಯ ತರದ ಭಾಷಣ ಇತ್ತು. ರಾಜ್ಯಪಾಲರ ಸುತ್ತ ಮಾರ್ಷಲ್ ಗಳು ಇಲ್ಲದೇ ಹೋಗಿದ್ದರೆ ಕಾಂಗ್ರೆಸ್ ಶಾಸಕರು ರಾಜ್ಯಪಾಲರಿಗೆ ಹೊಡೆದು ಬಿಡುತ್ತಿದ್ದರೇನೋ. ಹರಿಪ್ರಸಾದ್ ಮಂತ್ರಿ ಸ್ಥಾನ ಪಡೆಯಲು ದುರ್ನಡತೆ ತೋರಿ, ಗೂಂಡಾ ವರ್ತನೆ ಪ್ರದರ್ಶಿಸಿದ್ದಾರೆ. ದೇಶದಲ್ಲೇ ಇವತ್ತು ಕರ್ನಾಟಕ ತಲೆ ತಗ್ಗಿಸುವ ಸ್ಥಿತಿಯನ್ನು ಕಾಂಗ್ರೆಸ್ ಶಾಸಕರು ತಂದಿದ್ದಾರೆ ಎಂದು ದೂರಿದರು.

ಜಂಟಿ ಅಧಿವೇಶನದ ವೇಳೆ ರಾಜ್ಯ ಸರ್ಕಾರ ಸಿದ್ದಪಡಿಸಿದ ಕೇಂದ್ರ ಸರ್ಕಾರದ ವಿರುದ್ಧದ ದ್ವೇಷ ಭಾಷಣದಲ್ಲಿ 2 ಲೈನನ್ನು ರಾಜ್ಯಪಾಲರು ಓದಿದ್ದಾರೆ. ಬಿ.ಕೆ.ಹರಿಪ್ರಸಾದ್ ಹಾಗೂ ಕಾಂಗ್ರೆಸ್ ಶಾಸಕರು ರಾಜ್ಯಪಾಲರಿಗೆ ಹೊಡೆಯುವ ರೀತಿ ಅಡ್ಡ ಹಾಕಿದ್ದಾರೆ. ವಿಧಾನಸಭೆಯಲ್ಲಿ ಮಾರ್ಷಲ್ ಗಳು ಇಲ್ಲದೆ ಇದ್ದರೆ ರಾಜ್ಯಪಾಲರನ್ನು ಕಾಂಗ್ರೆಸ್ ಶಾಸಕರು ಹೊಡೆದು ಬಿಡುತ್ತಿದ್ದರು. ಕಾಂಗ್ರೆಸ್ ಶಾಸಕರು ಗೂಂಡಾ ವರ್ತನೆಯನ್ನು ತೋರಿದ್ದಾರೆ. ರಾಜ್ಯಪಾಲರಿಗೆ ಕಾಂಗ್ರೆಸ್ ನವರು ಗೂಂಡಾ ವರ್ತನೆ ತೋರುವ ಮೂಲಕ ರಾಜ್ಯವೇ ತಲೆ ತಗ್ಗಿಸುವ ಕೆಲಸ ಮಾಡಿದ್ದಾರೆ. ಕಾನೂನು ಪದವೀಧರರಾಗಿರುವ ಸಿದ್ದರಾಮಯ್ಯ ಅವರು ಇದ್ದನೆಲ್ಲ ನೋಡಿಕೊಂಡು ಸುಮ್ಮನೆ ಕುಳಿತ್ತಿದ್ದೀರಲ್ಲಾ, ನಿಮಗೆ ಏನೂ ಅನಿಸಲಿಲ್ವಾ?. ಈ ಹಿಂದೆ ನೀವು ವಿರೋಧ ಪಕ್ಷದಲ್ಲಿ ಇದ್ದಾಗ ಹಂಸರಾಜ್ ಭಾರದ್ವಾಜ್ ಅವರು ಇದೇ ರೀತಿ ಮಾಡಿರಲಿಲ್ವಾ?. ಅವಾಗ ಬಿಜೆಪಿ ಅವರು ಈ ರೀತಿ ವರ್ತಿಸಿದ್ದರಾ?. ಯಾವ ಉದ್ದೇಶವನ್ನು ಇಟ್ಟುಕೊಂಡು ಈಗ ನೀವು ಜಂಟಿ ಅಧಿವೇಶನ ಮಾಡಿದ್ದೀರಿ?. ಕೇಂದ್ರ ಸರ್ಕಾರವನ್ನು ಬೈಯುವ ರೀತಿಯೇ ಭಾಷಣ ರೆಡಿ ಮಾಡಿದ್ದೀರಿ. ಅದನ್ನು ರಾಜ್ಯಪಾಲರು ಓದಬೇಕಾಗಿತ್ತಾ ? ಎಂದು ಕಟುವಾಗಿ ಟೀಕಿಸಿದರು.

ನರೇಗಾದಲ್ಲಿ ಇದ್ದ ಲೋಪದೋಷ ಸರಿಮಾಡಿ ಜೀ ರಾಮ್ ಜೀ ತಂದಿದ್ದಾರೆ. ಅದರಿಂದ ನಿಮಗೆ ಏನು ಸಮಸ್ಯೆ. ಕೇಂದ್ರ ಶೇ.60, ರಾಜ್ಯ ಶೇ.40ರಷ್ಟು ಹಣ ನೀಡ ಬೇಕಿದೆ. ನಿಮಗೆ ಹಣ ಕೊಡುವುದಕ್ಕೆ ಅಗುವುದಿಲ್ಲ ಎಂದು ಹೇಳಿ. ನೀವು ಭಿಕಾರಿ ಸರ್ಕಾರ ನಡೆಸುತ್ತಿದ್ದೇವೆ ಎಂದು ಒಪ್ಪಿಕೊಳ್ಳಿ ಎಂದು ಹರಿಹಾಯ್ದರು.

## ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷರ ನೇಮಕ



ಗುಂಡ್ಲುಪೇಟೆ: ಭಾರತೀಯ ಜನತಾ ಪಾರ್ಟಿಯ ಚಾಮರಾಜನಗರ ಜಿಲ್ಲಾ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷರನ್ನಾಗಿ ಗುಂಡ್ಲುಪೇಟೆ ತಾಲ್ಲೂಕಿನ ಸವಕನಹಳ್ಳಿ ಪಾಳ್ಯ ಗ್ರಾಮದ ಡಾ.ನವೀನ್ ಮೌರ್ಯ ಅವರನ್ನು ನಿಯುಕ್ತಿಗೊಳಿಸಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ ಎಸ್ ನಿರಂಜನ್ ಕುಮಾರ್ ಆದೇಶ ಪ್ರತಿ ನೀಡಿದರು.

ನಂತರ ಪತ್ರಿಕೆಗೆ ಪ್ರತಿಕ್ರಿಯೆ ನೀಡಿದ ಡಾ ನವೀನ್ ಮೌರ್ಯ ನಾನು ಹಲವು ವರ್ಷಗಳಿಂದ ಭಾರತೀಯ ಜನತಾ ಪಕ್ಷದ ಸಕ್ರಿಯ ಕಾರ್ಯಕರ್ತ ನಾಗಿ ಹಲವು ಮಹತ್ವದ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಪಕ್ಷ ಸಂಘಟನೆಯಲ್ಲಿ ಸಂಪೂರ್ಣ ತೊಡಗಿಸಿಕೊಂಡು ಬಂದಿದ್ದೇನೆ. ನನ್ನ ಈ ಕಾರ್ಯವನ್ನು ಗುರುತಿಸಿ ಈಗ ಚಾಮರಾಜನಗರ ಜಿಲ್ಲೆಯ ಬಿಜೆಪಿ ಎಸ್ಸಿ ಮೋರ್ಚಾದ ಜಿಲ್ಲಾ ಅಧ್ಯಕ್ಷನಾಗಿ ನನ್ನನ್ನು ನೇಮಕ ಮಾಡಿದ್ದಾರೆ ನನ್ನನ್ನು ಆಯ್ಕೆ ಮಾಡಿದಂತಹ ರಾಜ್ಯ ಸಮಿತಿ, ಚಾಮರಾಜನಗರ ಜಿಲ್ಲಾ ಅಧ್ಯಕ್ಷರಿಗೆ, ರಾಜ್ಯ ಎಸ್ಸಿ ಮೋರ್ಚಾ ಅಧ್ಯಕ್ಷರಿಗೆ ಹಾಗೂ ಜಿಲ್ಲೆಯ ಎಲ್ಲಾ ಹಿರಿಯ ಮುಖಂಡರುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನನಗೆ ಜಿಲ್ಲೆಯ ಪೂರ್ಣ ಪರಿಚಯ ಇರುವ ಕಾರಣ, ನಮ್ಮ ವ್ಯಾಪ್ತಿಯಲ್ಲಿ ಬರುವ 8 ಬಿಜೆಪಿ ಮಂಡಲಗಳಲ್ಲಿ ಎಸ್ಸಿ ಮೋರ್ಚಾಗಳಿಗೆ ಶಕ್ತಿ ತುಂಬಿ ಅತ್ಯಂತ ಶ್ರದ್ಧೆಯಿಂದ ಪಕ್ಷವನ್ನು ಬಲ ಪಡಿಸುತ್ತೇನೆ ಎಂದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ರಾದ ಎನ್ ಮಹೇಶ್, ಬಾಲರಾಜ್, ಮಾಜಿ ಜಿ.ಪಂ ಅಧ್ಯಕ್ಷ ರಾಮಚಂದ್ರ, ಚೂಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ, ನೂರೊಂದು ಶೆಟ್ಟಿ, ಮತ್ತಿತರರಿದ್ದರು.

## ಜೈನಹಳ್ಳಿ ಗ್ರಾಮದಲ್ಲಿ ನವಗ್ರಹ ದೇವಸ್ಥಾನ, ನಾಗ ಬನ ಉದ್ಘಾಟನೆ



ಕೆ.ಆರ್.ಪೇಟೆ: ತಾಲ್ಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಜೈನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ನವಗ್ರಹ ದೇವಸ್ಥಾನ ಹಾಗೂ ನಾಗದೇವತೆ ದೇವಾಲಯ ಉದ್ಘಾಟನೆ ಹಾಗೂ ವಿಗ್ರಹ ಪ್ರತಿಷ್ಠಾಪನಾ ಸಮಾರಂಭವು ಶ್ರದ್ಧಾಭಕ್ತಿಯಿಂದ ನಡೆಯಿತು.

ಗ್ರಾಮದ ಪ್ರಮುಖರು ಹಾಗೂ ಭಕ್ತಾದಿಗಳ ಸಹಕಾರದೊಂದಿಗೆ ನಡೆದ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಶಾಸ್ತ್ರೋಕ್ತವಾಗಿ ವಿವಿಧ ಹೋಮ–ಹವನಗಳನ್ನು ನೆರವೇರಿಸುವ ಮೂಲಕ ನವಗ್ರಹ ವಿಗ್ರಹಗಳನ್ನು ಹಾಗೂ ನಾಗರ ಕಲ್ಲುಗಳನ್ನು ಪ್ರತಿಷ್ಠಾಪಿಸಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ನಿವೃತ್ತ ಮುಖ್ಯ ಶಿಕ್ಷಕ ಜೆ.ಎಸ್.ಲಿಂಗರಾಜೇಗೌಡ ಅವರು ಗ್ರಾಮಗಳಲ್ಲಿ ದೇವಾಲಯಗಳ ನಿರ್ಮಾಣದಿಂದ ಆಧ್ಯಾತ್ಮಿಕ ವಾತಾವರಣ ನಿರ್ಮಾಣವಾಗುತ್ತದೆ. ನವಗ್ರಹಗಳ ಆರಾಧನೆಯು ಮನುಷ್ಯನ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ಹಾಗೂ ಆತ್ಮಸ್ಥೈರ್ಯವನ್ನು ನೀಡುತ್ತದೆ. ನಮ್ಮ ಜೈನಹಳ್ಳಿ ಗ್ರಾಮದ ಜನರು ಒಗ್ಗಟ್ಟಾಗಿ ವಿವಿಧ ಗ್ರಾಮಗಳ ಧಾನಿಗಳ ನೆರವು ಪಡೆದು ಇಂತಹ ಪುಣ್ಯದ ಕಾರ್ಯವನ್ನು ಮಾಡಿರುವುದು ಶ್ಲಾಘನೀಯ ಎಂದು ತಿಳಿಸಿದರು. ನಾಗಾರಾಧನೆ ಮತ್ತು ನವಗ್ರಹಗಳ ಪೂಜೆ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗ ಇಂದಿನ ಯುವ ಪೀಳಿಗೆಗೆ ಇಂತಹ ಧಾರ್ಮಿಕ ಸಂಸ್ಕಾರಗಳನ್ನು ಪರಿಚಯಿಸುವುದು ಅಗತ್ಯವಿದೆ. ಈ ದೇವಸ್ಥಾನವು ಕೇವಲ ಪೂಜಾ ಸ್ಥಳವಾಗದೆ, ಗ್ರಾಮದ ಏಕತೆಯ ಸಂಕೇತವಾಗಲಿ ಎಂದು ಆಶಯ ವ್ಯಕ್ತಪಡಿಸಿದರು. ದೇವಾಲಯಗಳ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಹೆಚ್.ಟಿ.ಮಂಜು, ಸಮಾಜ ಸೇವಕ ಆರ್.ಟಿ.ಓ. ಮಲ್ಲಿಕಾರ್ಜುನ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ದಾನಿಗಳಾದ ರೈಲ್ವೆ ಇಲಾಖೆಯ ರಶ್ಮಿಶರತ್, ಬಿ.ಎಸ್.ಎನ್.ಎಲ್. ಎಕ್ಸಿಕ್ಯೂಟೀವ್ ಇಂಜಿನಿಯರ್ ಜಿ.ಎಸ್.ಲೋಕೇಶ್, ರಾಜೀವ್ ಗಾಂಧೀ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪರಶುರಾಮೇಗೌಡ, ಜೈನ್ನಹಳ್ಳಿ ವಿ.ಎಸ್.ಎಸ್.ಎನ್. ನಿರ್ದೇಶಕ ಧರಣೇಶ್, ಮೈಸೂರು ಜ್ಞಾನಬುತ್ತಿ ಸಂಸ್ಥೆಯ ವ್ಯವಸ್ಥಾಪಕ ಸತ್ಯನಾರಾಯಣಗೌಡ, ನಿವೃತ್ತ ಪ್ರಾಂಶುಪಾಲ ಜಿ.ಜೆ.ರಾಜೇಗೌಡ, ಗ್ರಾ.ಪಂ.ಉಪಾಧ್ಯಕ್ಷೆ ನಾಗಮ್ಮ ಜಲೇಂದ್ರ, ಸುದ್ರೇಶ್, ತಾರಾಶ್ರೀ ಮುಕುಂದ, ಎಸ್. ರಾಜೇಗೌಡ, ತಿಮ್ಮಪ್ಪಗೌಡ, ಗೀತಾ ಮಂಜುನಾಥ್, ಜೆ.ಎಸ್. ರಾಮಕೃಷ್ಣೇಗೌಡ, ವಿ.ಆರ್. ನಾರಾಯಣ, ಜೆ.ಎನ್. ಚಂದ್ರೇಗೌಡ, ನೀಲಕಂಠಶಾಸ್ತ್ರಿ, ಜೆ.ಬಿ. ಬೋರೇಗೌಡ, ಜೆ.ಎನ್. ಶೇಷಾದ್ರಿಗೌಡ, ಗೌಡಪ್ಪ, ಬಸವರಾಜು, ಪ್ರಸನ್ನ ಜೆ.ಸಿ.ಕಮಲಮ್ಮ, ಮನು, ಲೋಹೀತ್. ಜೆ.ಎನ್, ಜೆ.ಆರ್.ಅಶೋಕ್, ಆಟೋ ತಿಮ್ಮಪ್ಪಗೌಡ, ಜೆ.ವಿ.ರಾಘವೇಂದ್ರ, ಜೆ.ಎಂ. ಸಚಿನ್, ಲಕ್ಷಮ್ಮ, ಮರಲಿಂಗ ಮುಕುಂದ, ಕೆ.ಎಸ್. ವೀಣಾ, ಜೆ.ಎನ್. ರಮೇಶ್, ಜೆ. ಆರ್. ಚಂದ್ರೇಗೌಡ, ಜೆ.ಎಂ. ಚ0ದನ್ ಸೇರಿದಂತೆ ಅಕ್ಕಪಕ್ಕದ ಗ್ರಾಮಘಲ ಸಾವಿರಾರು ಭಕ್ತಾದಿಗಳು ಹಾಗೂ ಗಣ್ಯರು ಭಾಗವಹಿಸಿದ್ದರು.

ಅಕ್ಕಿಹೆಬ್ಬಾಳು ಹೋಬಳಿಯ ಜೈನ್ನಹಳ್ಳಿ, ಹಳೆಮುದ್ಲಾಪುರ, ಹೊಸ ಮುದ್ಲಾಪುರ, ಸಿಂಗನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಸಾವಿರಾರು ಭಕ್ತಾಧಿಗಳು ಪಾಲ್ಗೊಂಡು ದೇವರ ದರ್ಶನ ಪಡೆದರು. ದೇವರಿಗೆ ಪೂಜೆ ಸಲ್ಲಿಸಿ ಪುನೀತರಾದರು. ಸಂಭ್ರಮದಲ್ಲಿ ಆಗಮಿಸಿದ್ದ ನೂರಾರು ಭಕ್ತಾದಿಗಳಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು.



## ಸಾಮೂಹಿಕ ಸೂರ್ಯ ನಮಸ್ಕಾರ ನಾಳೆ



ಮೈಸೂರು: ಮೈಸೂರು ಜಿಲ್ಲಾ ಯೋಗ ಸ್ಪೋರ್ಟ್ಸ್ ಫೌಂಡೇಷನ್, ಗಣಪತಿ ಸಚ್ಚಿದಾನಂದ ಆಶ್ರಮಗಳ ಮೊದಲಾದವುಗಳ ಸಯುಕ್ತಾಶ್ರಯದಲ್ಲಿ ಜ. 25 ರ ಬೆಳಗ್ಗೆ 5.30ಕ್ಕೆ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ 108 ಸಾಮೂಹಿಕ ಸೂರ್ಯ ನಮಸ್ಕಾರ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಡಾ.ಪಿ.ಎನ್.ಗಣೇಶ್‌ಕುಮಾರ್ ತಿಳಿಸಿದರು.

ರಥಸಪ್ತಮಿ ಹಾಗೂ ವಿವೇಕಾನಂದ ಜಯಂತಿ ಅಂಗವಾಗಿ ಇದನ್ನು ಆಯೋಜಿಸಲಾಗಿದೆ. ಶಾಸಕ ಟಿ.ಎಸ್. ಶ್ರೀವತ್ಸ ಉದ್ಘಾಟಿಸುವರು, ತಾವು ಅಧ್ಯಕ್ಷತೆ ವಹಿಸಲಿದ್ದು, ಸಿದ್ದರಾಜು, ಶ್ರೀವತ್ಸ, ಶ್ರೀಹರಿ, ಶಶಿಕುಮಾರ್, ಉಮೇಶ್ ಗಣಪತಿ ಭಟ್, ಮಂಜುಳಾ ಇನ್ನಿತರರು ಅತಿಥಿಗಳಾಗಿರುವರು. ಇದು ಸಂಪೂರ್ಣ ಉಚಿತ ಕಾರ್ಯಕ್ರಮವಾಗಿದ್ದು, ಆಗಮಿಸುವವರು ತಾವೇ ಮ್ಯಾಟ್ ತರಬೇಕು ಎಂದು ಮನವಿ ಮಾಡಿದರು. ನಿವೃತ್ತ ಡಿಡಿಪಿಐ ಮಂಜುಳಾ, ಶಶಿಕುಮಾರ್, ವಿವೇಕ್, ನಿಶಾಂತ್, ಪ್ರೇಮಕುಮಾರ್ ಇದ್ದರು.

## 26ರಂದು ಅಂತರ ವಿವಿ ಕ್ರಿಕೆಟ್ ಪಂದ್ಯಾವಳಿ



ಮೈಸೂರು: ನಗರದ ಜೆಎಸ್‌ಎಸ್ ಎಸ್ಟೇಟಿಯ ವತಿಯಿಂದ ಶಿಕ್ಷಣ ಸಂಸ್ಥೆ ಜೆಎಸ್‌ಎಸ್ ಟಿಐ ಆವರಣದಲ್ಲಿ ದಕ್ಷಿಣ ವಲಯ ಪುರುಷರ ಅಂತರ ವಿವಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯರಾದ ಡಾ.ಸಿ.ನಟರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಜ. 26 ರಂದು ಸಂಜೆ 4ಕ್ಕೆ ಡಾ.ಸಿ.ಜಿ. ಬೆಟ್ಸೂರ್ ಮಠ್ ಉದ್ಘಾಟನೆ ನೆರವೇರಿಸುವರು, ಸುಜಿತ್ ಸೋಮಸುಂದರ್, ಡಾ. ಮಮ್ತಾರಾಣಿ ಅರ್?ವಾಲ್, ಡಾ.ಬಿ. ಸುರೇಶ್ ಅಧ್ಯಕ್ಷತೆ ವಹಿಸುವರು, ಡಾ.ಎ.ಎನ್. ಸಂತೋಷ್‌ಕುಮಾರ್ ಅಧ್ಯಕ್ಷತೆ ವಹಿಸುವರು. ಜ. 27 ರಂದು ವಿವಿಧ ಕ್ರೀಡಾಂಗಣಗಳಲ್ಲಿ ಏಕಕಾಲಕ್ಕೆ ಪಂದ್ಯಗಳು ಆರಂಭವಾಗಿ ಫೆ. 5 ರಂದು ಜೆಎಸ್‌ಎಸ್ ಎಸ್ಟೇಟಿಯ ಮೈದಾನದಲ್ಲಿ ಅಂತಿಮ ಪಂದ್ಯ ನಡೆಯಲಿದೆ ಎಂದರು. ಇದರಲ್ಲಿ ದಕ್ಷಿಣ ಭಾರತದ 132 ವಿವಿಗಳು ಪಾಲ್ಗೊಂಡು ಅಷ್ಟೇ ಪಂದ್ಯಾವಳಿಗಳು ನಡೆಯಲಿವೆ. ಸಂಪೂರ್ಣವಾಗಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಈ ಪಂದ್ಯಾವಳಿ ಆಯೋಜನೆ ಹೊಣೆ ಹೊತ್ತಿದೆ ಎಂದು ಮಾಹಿತಿ ನೀಡಿದರು. ಸಂಘಟನಾ ಕಾರ್ಯದರ್ಶಿ ಡಾ.ಸಿ.ರೇವಣ್ಣ ಇದ್ದರು.

## ಜ.24ರಿಂದ ರೋಟರಿ ಜಿಲ್ಲಾ ಸಮಾವೇಶ



ಮೈಸೂರು: ರೋಟರಿ ಅಂತಾರಾಷ್ಟ್ರೀಯ ಜಿಲ್ಲೆ 3160 ರ 42ನೇ ಜಿಲ್ಲಾ ಸಮಾವೇಶ ಜ.24 ಮತ್ತು 25ರಂದು ನಗರದ ಸೈಲೆಂಟ್ ಶೋರ್ ರೆಸಾರ್ಟ್ ನಲ್ಲಿ ನಡೆಯಲಿದೆ ಎಂದು ಜಿಲ್ಲಾ ರಾಜ್ಯಪಾಲ ಎಂ.ಕೆ.ರವೀಂದ್ರ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸ್ವಾರ್ಥ ಮೀರಿದ ಸೇವೆ ವಿಷಯ ಆಧರಿತವಾದ ಸಮಾವೇಶ ಇದಾಗಿದೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮುಖ್ಯ ಅತಿಥಿಗಳಾಗಿರುವರು. ತಾವು ಅಧ್ಯಕ್ಷತೆ ವಹಿಸುವುದಾಗಿ ತಿಳಿಸಿದರು. ಗುರುಜೀತ್ ಸಿಂಗ್ ಶೆಖಾವ್, ರೊ. ಶರತ್ ಬಾಬು ಚಿಲುಕುರಿ, ಡಾ.ಸಿ.ಎನ್. ಮಂಜುನಾಥ್, ಡಾ. ರಮೇಶ್ ಅರವಿಂದ್ ಇನ್ನಿತರರು ಸಹಾ ಅತಿಥಿಗಳಾಗಿರುವರು. ಈ ವೇಳೆ ಪ್ರೇರಣಾದಾಯಕ ಭಾಷಣ, ಸಂವಾದ, ಶಿಕ್ಷಣ, ಆರೋಗ್ಯ ಯೋಜನೆ, ಮಹಿಳಾ ಸಬಲೀಕರಣ ಮೊದಲಾದವರು ನಡೆಯಲಿವೆ. ರಾಜ್ಯದ ಒಂಭತ್ತು ಕಂದಾಯ ಜಿಲ್ಲೆಗಳು ಮತ್ತು ಆಂಧ್ರ ಪ್ರದೇಶದ 8 ಕಂದಾಯ ಜಿಲ್ಲೆಗಳಿಂದ ಪ್ರತಿನಿಧಿಗಳು ಆಗಮಿಸಲಿದ್ದಾರೆಂದು ಮಾಹಿತಿ ನೀಡಿದರು. ಆರ್.ಮಂಜುನಾಥ್, ಮಧುಪ್ರಸಾದ್, ವಿಶ್ವನಾಥ್, ಡಾ.ಮಧುಸೂದನ್ ರೆಡ್ಡಿ ಇದ್ದರು.

# ಎಚ್‌ಡಿಕೆ ರಾಜ್ಯ ರಾಜಕರಣಕ್ಕೆ ಚರ್ಚೆಗೆ ಮುಂದಿನ ದಿನಗಳಲ್ಲಿ ಉತ್ತರ – ನಿಖಿಲ್

## ರಾಮನಗರದ ನಗರದೇವತೆ ಶ್ರೀ ಚಾಮುಂಡೇಶ್ವರಿ ದೇವಾಲಯಕ್ಕೆ ಭೇಟಿ

ರಾಮನಗರ: ಕುಮಾರಸ್ವಾಮಿ ಅವರು ರಾಜ್ಯ ರಾಜಕೀಯಕ್ಕೆ ಮರಳುತ್ತಾರೆ ಎಂಬ ವಿಚಾರ ಎಲ್ಲೆಡೆ ಚರ್ಚೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ವಿಚಾರಗಳ ಬಗ್ಗೆ ಗೊತ್ತಾಗಲಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ ಸ್ವಾಮಿ ಹೇಳಿದರು.

ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ನಗರ ದೇವತೆ ಶ್ರೀ ಚಾಮುಂಡೇಶ್ವರಿ ದೇವಾಲಯಕ್ಕೆ ಭೇಟಿ ಕೊಟ್ಟು ಪ್ರಾರ್ಥಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಕುಮಾರಸ್ವಾಮಿ ಅವರು ರಾಜ್ಯದ ಎಲ್ಲಿಗೆ ಬರುತ್ತಾರೆ, ಎಲ್ಲಿಂದ ಸ್ಪರ್ಧಿಸುತ್ತಾರೆ ಎಂಬುನ್ನು ಕಾದು ನೋಡೋಣ ಎಂದರು.

### ರಾಜ್ಯಪಾಲರಿಗೆ ಎಷ್ಟು ಓದಬೇಕು ಎಂಬುದು ಗೊತ್ತಿದೆ.

ಸಧ್ಯ ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ವಿಚಾರದಲ್ಲಿ ಪ್ರತಿಕ್ರಿಯಿಸಿದ ಅವರು ರಾಜ್ಯಪಾಲರಿಗೆ ಎಷ್ಟು ಓದಬೇಕು, ಒಂದು ಪ್ಯಾರಾಗ್ರಾಫ್ ಓದಬೇಕಾ, ಒಂದು ಸೆಂಟೆನ್ಸ್ ಓದಬೇಕಾ, ಒಂದು ಪದದಲ್ಲಿ ಪೂರ್ಣಗೊಳಿಸಬೇಕಾ ಎಂಬುದು ಅವರಿಗೆ ಬಿಟ್ಟ ವಿಚಾರವಾಗಿದೆ ಎಂದು ತಿಳಿಸಿದರು.

### ಹೆಸರು ಬದಲಾವಣೆ ಬಗ್ಗೆ ದ್ವಂದ್ವ ನೀತಿ

ಮನರೇಗಾ ಹೆಸರು ಬದಲಾವಣೆಯಿಂದ ಕೂಲಿ ಕಾರ್ಮಿಕರಿಗೆ ಸಿಗಬೇಕಾದ ಸವಲತ್ತುಗಳು ಸಿಗಲಿವೆ. ಈ ಹಿಂದೆ ಮನರೇಗಾ ಯೋಜನೆಯಲ್ಲಿ ನಡೆಯುತ್ತಿದ್ದ ಅಕ್ರಮಗಳು ನಿಲ್ಲಲಿವೆ. ರಾಜ್ಯ ಸರ್ಕಾರದವರು ಹೆಸರು ಬದಲಾವಣೆಯ ಬಗ್ಗೆ ಅನಾವಶ್ಯಕವಾಗಿ ಚರ್ಚೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.



ರಾಜ್ಯ ಸರ್ಕಾರ ಹೆಸರು ಬದಲಾವಣೆ ವಿಷಯದಲ್ಲಿ ದ್ವಂದ್ವ ನೀತಿ ಅನುಸರಿಸುತ್ತಿದೆ. ರಾಮನಗರ ಜಿಲ್ಲೆಯ ಹೆಸರನ್ನು ಬದಲಾವಣೆ ಮಾಡಿದರು, ಈಚೆಗೆ ತುಮಕೂರಿನ ಜಿಲ್ಲಾ ಕ್ರೀಡಾಂಗಣಕ್ಕೆ ಜಿ. ಪರಮೇಶ್ವರ್ ಅವರ ಹೆಸರನ್ನು ಇಡುವಾಗ ಗಾಂಧೀಜಿ ನೆನಪಾಗಲಿಲ್ಲವೆ ಎಂದು ಪ್ರಶ್ನಿಸಿದರು.

### ಜ.24ರಂದು ಸಮಾವೇಶ

ರಾಜ್ಯ ಸರ್ಕಾರ ಹಾಸನದಲ್ಲಿ ನಮ್ಮ ವಿರುದ್ಧ ಎರಡು ಸಮಾವೇಶಗಳನ್ನು ಮಾಡಿದೆ. ಅವರ ಪ್ರಶ್ನೆಗಳಿಗೆ ಉತ್ತರ ಕೊಡುವ ಸಲುವಾಗಿ ಹಾಗೂ ರಾಜ್ಯ ಸರ್ಕಾರ ಕಳೆದ ಎರಡುವರೆ ವರ್ಷಗಳಲ್ಲಿ ಏನು ಕಡಿದು ಕಟ್ಟೆ ಹಾಕಿದೆ ಎಂಬುದನ್ನು ಹೇಳಲು ಜ.24ರಂದು ಸಮಾವೇಶ ಮಾಡಿ ವೇದಿಕೆಯಲ್ಲಿ ಚರ್ಚಿಸುತ್ತೇವೆ. ಸಮಯ ಬಂದಾಗ ರಾಮನಗರದಲ್ಲೂ ಸಮಾವೇಶ ಮಾಡುತ್ತೇವೆ ಎಂದರು.

### ರಸ್ತೆ ಗುಂಡಿಗಳು ಸರಿಹೋಗಿವೆಯೇ?

ಅನಿತಾ ಕುಮಾರಸ್ವಾಮಿ ಅವರು ಶಾಸಕರಾಗಿದ್ದಾಗ ರಾಮನಗರದ ರಸ್ತೆಗಳೆಲ್ಲಾ ಗುಂಡಿಬಿದ್ದಿವೆ ಎಂದು ಕಾಂಗ್ರೆಸ್ ಆರೋಪಿಸತ್ತು. ಈಗ ರಾಮನಗರದ ರಸ್ತೆಗಳು ಸರಿ ಹೋಗಿವೆಯೇ ಎಂದು ಅವರು ಪ್ರಶ್ನಿಸಿದರು. ಚುನಾವಣೆಯ ವೇಳೆ ಕಾಂಗ್ರೆಸ್‌ನವರು ಅಧಿಕಾರ ಕೇಳಿದ್ದರು, ಜನರು ಅವರಿಗೆ ಕೊಟ್ಟಿದ್ದಾರೆ. ಈಗಲಾದರೂ ಅಭಿವೃದ್ಧಿ ಕೆಲಸಗಳನ್ನು ಮಾಡಲಿ ಎಂದರು. ಶಾಸಕ ಹರೀಶ್ ಗೌಡ, ಮಾಜಿ ಶಾಸಕ ಎ. ಮಂಜುನಾಥ್, ಜೆಡಿಎಸ್ ಮುಖಂಡರಾದ ಸಬ್ಬಕೆರೆ ಶಿವಲಿಂಗಪ್ಪ, ಹೋಟೆಲ್ ಉಮೇಶ್, ಎಸ್.ಆರ್. ರಾಮಕೃಷ್ಣಯ್ಯ, ಜನತಾ ನಾಗೇಶ್, ಅಂಜನಾಪುರ ವಾಸು, ಕೊತ್ತೀಪುರ ಗೋವಿಂದ ರಾಜು, ಕುಂಬಾಪುರ ವೆಂಕಟೇಶ್, ಕೈಲಾಂಚ ಲೋಕೇಶ್ ಹಾಗೂ ಇತರರು ಇದ್ದರು.

### ಜೆಡಿಎಸ್ ಪಕ್ಷ ಗಟ್ಟಿಯಾಗಿದೆ

ಜೆಡಿಎಸ್ ಪಕ್ಷ ಗಟ್ಟಿಯಾಗಿದೆ, ಇನ್ನೂ ಸಂಘಟನೆ ಮಾಡಿ ಗಟ್ಟಿ ಮಾಡುತ್ತೇವೆ. ನನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಿ, ನಾನು ಒಂದು ಕ್ಷೇತ್ರಕ್ಕೆ ಸೀಮಿತನಾದ ಮನುಷ್ಯನಲ್ಲ, ರಾಜ್ಯದಲ್ಲಿ ಸಂಘಟನೆ ಮಾಡಬೇಕಿದ್ದು, ನನ್ನ ಮೇಲೆ ಜವಾಬ್ದಾರಿ ಇದೆ. ರಾಜಕಾರಣ ನಿಂತ ನೀರಲ್ಲ, ಹರಿಯುವ ನೀರಿದ್ದ ಆಗೆ, ಮುಂದಿನ ದಿನಗಳಲ್ಲಿ ಅವಕಾಶ ಸಿಗಲಿವೆ ಎಂದರು. ಮುಂದಿನ ದಿನಗಳಲ್ಲಿ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಚುನಾವಣೆ ಬರಲಿದೆ. ನಮ್ಮ ಕಾರ್ಯಕರ್ತರಿಗೆ ಅಧಿಕಾರ ಕೊಡಿಸಬೇಕು. ಕುಮಾರಸ್ವಾಮಿ ಅವರು ನಾಲ್ಕು ಬಾರಿ ಶಾಸಕರಾಗಿ ಜಿಲ್ಲೆಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿರುವುದು ಜಿಲ್ಲೆಯ ಜನರಿಗೆ ಗೊತ್ತಿದೆ, ಕ್ಷೇತ್ರದ ಜನರಿಗೆ ಗೊತ್ತಿದೆ ಎಂದು ತಿಳಿಸಿದರು.

## ಡಿಸಿಎಂ ಅಹಿಂದ ವಿರೋಧಿಸಿಲ್ಲ

ಮೈಸೂರು: ಡಿಸಿಎಂ ಡಿ.ಕೆ.ಶಿವಕುಮಾರ್ ಮೈಸೂರಿನ ಅಹಿಂದ ಸಮಾವೇಶಕ್ಕೆ ಬಸ್ ನೀಡದಂತೆ ತಡೆದಿದ್ದಾರೆಂಬ ಆರೋಪ ಯಾರು ಸಹ ಮಾಡಬಾರದು. ಅಂತಹ ಯಾವುದೇ ಪ್ರಯತ್ನ ಅವರು ಮಾಡಿಲ್ಲ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ತಿಳಿಸಿದರು.

ಮೈಸೂರಿನಲ್ಲಿ ಈ ಕುರಿತು ಮಾತನಾಡಿದ ಅವರು, ಕೆಲವೊಂದು ಡಿಜಿಟಲ್ ಮಾಧ್ಯಮಗಳಲ್ಲಿ ನಿನ್ನೆ ಹುಬ್ಬಳ್ಳಿಯಲ್ಲಿ ನಡೆದ ಅಹಿಂದ ಸಮಾವೇಶದಲ್ಲಿ ಕೆಲವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೈಸೂರಿನಲ್ಲಿ ನಡೆಯುವ ಅಹಿಂದ ಸಮಾವೇಶ



ತಡೆಯಲು ಬಸ್ ಗಳನ್ನು ಕಳುಹಿಸದಂತೆ ಹೇಳಿದ್ದಾರೆ ಎಂಬುದು ಸುಳ್ಳು. ಅಹಿಂದ ಸಮಾವೇಶಕ್ಕೆ ಡಿಕೆಶಿಯವರು ಆಲ್ ದಿ ಬೆಸ್ಟ್ ಹೇಳಿದ್ದು, ಅವರು ಸರ್ಕಾರದ ಭಾಗವಾಗಿ ಸಮಾವೇಶಕ್ಕೆ ಬೆಂಬಲ ನೀಡಿದ್ದಾರೆ. ಅವರು ಮೈಸೂರಿನ ಸಮಾವೇಶಕ್ಕೆ ವಿರೋಧ ಮಾಡಿದ್ದಾರೆಂಬುದು ಸರಿಯಲ್ಲ ಎಂದರು. ಜ.25ರಂದು ಆಯೋಜಿಸಿದ್ದ ಅಹಿಂದ ಸಮಾವೇಶವನ್ನು ಅಧಿವಶೇನ ನಡೆಯುತ್ತಿರುವುದರಿಂದ ಹಾಗೂ ಈ ಭಾಗದಲ್ಲಿ ಜಾತ್ರೆಗಳು ಹೆಚ್ಚಾಗಿ ನಡೆಯುತ್ತಿರುವ ಕಾರಣಕ್ಕೆ ಮುಂದೂಡಲಾಗಿದೆ ಎಂದು ಸ್ಪಷ್ಟಪಡಿಸಿದರು.

## ಮಾರಮ್ಮ ದೇಗುಲ ಜೀರ್ಣೋದ್ಧಾರ, ಅಂಕ ಪ್ರತಿಸ್ಥಾಪನೆ

ಚಾಮರಾಜನಗರ, ನಗರದ ಸೋಮವಾರಪೇಟೆ – ಕರಿನಂಜನಪುರ ಶ್ರೀ ಸಿದ್ದಯ್ಯನಪುರದ ಮಾರಮ್ಮನ ದೇವಸ್ಥಾನದ ಜೀರ್ಣೋದ್ಧಾರ, ವಿಮಾನಗೋಪುರ ಕಳಶ ಪ್ರತಿಷ್ಠಾಪನೆ ಮತ್ತು ಅಂಕಪ್ರತಿಷ್ಠಾಪನಾ ಕಾರ್ಯಕ್ರಮ ಬಹಳ ಅದ್ದೂರಿಯಾಗಿ ನಡೆಯಿತು.

ಮೊದಲು ಗ್ರಾಮದ ಶನಿಮಹಾತ್ಮ ದೇವಸ್ಥಾನದ ಮುಂಭಾಗದಲ್ಲಿ ಅಂಕಪ್ರತಿಸ್ಥಾಪನಾ ಕಾರ್ಯಕ್ರಮ ನಡೆಯಿತು ನಂತರ ಗ್ರಾಮದ ಹೊರವಲಯದಲ್ಲಿರುವ ಗ್ರಾಮದೇವತೆ ಶ್ರೀಮಾರಮ್ಮನವರ ದೇವಸ್ಥಾನ ಜೀರ್ಣೋದ್ಧಾರ ಕಾರ್ಯಕ್ರಮ ನಡೆಯಿತು.

ವೃಶ್ಚಿಕ ಲಗ್ನ ಬ್ರಾಹ್ಮ ಮುಹೂರ್ತದಲ್ಲಿ ಮಹಾ ಸಂಕಲ್ಪ, ಶ್ರೀ ಅಂಕದೇವತಾ ಪ್ರತಿಷ್ಠಾಪನಾ ಮತ್ತು ವಾಸ್ತುಶಿಲಾಯಂತ್ರದ ಪ್ರಾಣ ಪ್ರತಿಷ್ಠಾಪನಾ ಮತ್ತು ಗ್ರಾಮದೇವತೆ ಶ್ರೀ ಮಾರಮ್ಮನವರ ವಿಗ್ರಹ ಪ್ರತಿಷ್ಠಾಪನೆ ರುದ್ರಾಭಿಷೇಕ, ಅಲಂಕಾರ, ಅಷ್ಟೋತ್ತರ, ಗಣಹೋಮ, ನವಗ್ರಹಹೋಮ, ಮೃತ್ಯುಂಜಯ ಹೋಮ ಕದಳಿಭೇದನ ಕೂಷ್ಮಾಂಡಬಲಿ, ನೇತ್ರೋಮಿಲನ, ಪೂರ್ಣಾಹುತಿ ಮತ್ತು ಮಹಾಮಂಗಳಾರತಿ ನೆರವೇರಿಸಲಾಯಿತು.

ಶ್ರೀ ಕಬ್ಬಳ್ಳಿ ಜಂಗಮ ಮಠದ ಶ್ರೀ ಗುರುಸಿದ್ಧಸ್ವಾಮೀಜಿ, ಶ್ರೀ ಗುರುಸ್ವಾಮಿಗಳು ಮತ್ತು ವೃಂದದವರು ವಿಮಾನಗೋಪುರ ಕಳಸರೋಹಣ ಪ್ರತಿಷ್ಠಾಪನೆ, ಗ್ರಾಮದೇವತೆ ಮಾರಮ್ಮ ದೇವಸ್ಥಾನದ ಪೂಜಾ ಕಾರ್ಯಕ್ರಮ ನಡೆಸಿಕೊಟ್ಟರು. ಕಾರ್ಯಕ್ರಮದ ಅಂಗವಾಗಿ ಗ್ರಾಮವನ್ನು ಹಸಿರುತೋರಣ, ವಿದ್ಯುತ್ ದೀಪಗಳಿಂದ



ಶೃಂಗರಿಸಲಾಗಿತು. ಅನ್ನ ಸಂತರ್ಪಣೆ ನಡೆಯಿತು. ಗೌಡಿಕೆ ಲೋಕೇಶ್, ನಾಡದೇಶದ ಗೌಡರು, ಶೆಟ್ಟರು. ಗ್ರಾಮದ ಎಲ್ಲ ಕೋಮಿನ ಯಜಮಾನರು,ನಗರಸಭಾ ಮಾಜಿ ಸದಸ್ಯ ಮಹದೇವಯ್ಯ, ಮಾರಮ್ಮನ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಎಸ್.ಬಿ.ರಾಜಪ್ಪ, ಪ್ರಧಾನ ಕಾರ್ಯದರ್ಶಿ ವೃಷಬೇಂದ್ರಪ್ಪ, ಉಪಾಧ್ಯಕ್ಷ ನಂಜುಂಡಸ್ವಾಮಿ, ಖಜಾಂಚಿ ಜಿ.ರಮೇಶ್, ಸಹ ಕಾರ್ಯದರ್ಶಿ ಮಹದೇವ, ಮಂಜು, ಹಾಗೂ ಪದಾಧಿಕಾರಿಗಳು, ಸದಸ್ಯರು, ಕುಲಸ್ಥರು ಸೋಮವಾರಪೇಟೆ ಸಮಸ್ತ ಗ್ರಾಮಸ್ಥರು ಭಾಗವಹಿಸಿದ್ದರು.

## 25ಕ್ಕೆ ಕಣ್ಣಿನ ತಪಾಸಣಾ ಶಿಬಿರ

ಮೈಸೂರು: ಇಲ್ಲಿನ ರೋಟರಿ ಜಯಪ್ರಕಾಶ್ ನಗರ ಹಾಗೂ ಸಿ.ಯು. ಪವನ್, ಎ.ಕೆ.ಮಂಜುನಾಥ್ ಪ್ರಾಯೋಜಕತ್ವದಲ್ಲಿ ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆಯಿಂದ ಜೆಪಿ ನಗರ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಜ.25ರಂದು ಬೆಳಿಗ್ಗೆ 8ರಿಂದ ಮಧ್ಯಾಹ್ನ 12.30ರವರೆಗೆ ಕಣ್ಣಿನ ಉಚಿತ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ಶಿಬಿರ ಆಯೋಜಿಸಲಾಗಿದೆ ಎಂದು ರೋಟರಿ ಅಧ್ಯಕ್ಷ ಪಿ.ರವಿಶಂಕರ್ ತಿಳಿಸಿದರು.

ಶಿಬಿರದಲ್ಲಿ ಕಣ್ಣಿನ ಪೊರೆ, ಗ್ಲಾಕೋಮ, ದೃಷ್ಟಿ ದೋಷ, ರಾತ್ರಿ ಕುರುಡುತನ , ನೀರು ಸೋರುವಿಕೆ, ಬಿರುಕು ಮುಂತಾದ ಸಮಸ್ಯೆಗೆ ಚಿಕಿತ್ಸೆ ನೀಡಲಾಗುವುದು. ಹೆಚ್ಚಿನ ತಪಾಸಣೆ, ಶಸ್ತ್ರಚಿಕಿತ್ಸೆಗೆ ಆಸ್ಪತ್ರೆಗೂ ಕರೆದೊಯ್ಯಲಾಗುವುದು. ಆಧಾರ್, ಮೊಬೈಲ್ ಸಂಖ್ಯೆ ಹಾಗೂ ಆರೋಗ್ಯ ಸಮಸ್ಯೆ ಇರುವವರು ಶಸ್ತ್ರಚಿಕಿತ್ಸೆಗೆ ತೊಂದರೆ ಇರದಿರುವ ಕುರಿತು ವೈದ್ಯರಿಂದ ಪ್ರಮಾಣಪತ್ರ ತರುವುದು ಒಳಿತು ಎಂದು ವಿವರಿಸಿದರು. ತಪಾಸಣೆ ಬಗ್ಗೆ ಮಾಹಿತಿ ಅಗತ್ಯವುಳ್ಳವರು ಮೊ.94484 13274 ಸಂಪರ್ಕಿಸಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರೋಟರಿ ಕಾರ್ಯದರ್ಶಿ ಡಿ.ಎಂ.ನಾಗರಾಜ, ಖಜಾಂಚಿ ಸಿ. ವೆಂಕಟೇಶ್, ಕ್ಲಬ್ ಸರ್ವಿಸ್ ನಿರ್ದೇಶಕ ಪ್ರಕಾಶ್, ಸಹಕಾರ ಸಂಘದ ಕಾರ್ಯದರ್ಶಿ ಪ್ರಮೋದ್ ಚಂದ್ರ ಇದ್ದರು.



### ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಚಾಲನೆ

# ಒತ್ತಡ ನಿವಾರಣೆಗೆ ಕ್ರೀಡಾಕೂಟ ಸಹಕಾರಿ: ಎಆರ್‌ಕೆ

ಚಾಮರಾಜನಗರ, ಸರ್ಕಾರಿ ನೌಕರರು ದಿನನಿತ್ಯ ಒತ್ತಡದಿಂದ ಕರ್ತವ್ಯ ನಿರ್ವಹಿಸುವುದರಿಂದ ಕ್ರೀಡೆಯಲ್ಲಿ ಪಾಲ್ಗೊಂಡು ದೈಹಿಕ ಹಾಗೂ ಮಾನಸಿಕ ಸದೃಢರಾಗಬೇಕು ಎಂದು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ ವತಿಯಿಂದ ಎರಡು ದಿನಗಳ ಕಾಲ ನಡೆಯುವ ಚಾಮರಾಜನಗರ ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದರು. ಚಾಮರಾಜನಗರ ಸಾಂಸ್ಕೃತಿಕ ಕಲೆಗಳ ತವರೂರು. ಕಲೆ ಸಾಹಿತ್ಯ, ಸಂಸ್ಕೃತಿಯ ಜೊತೆಗೆ ಕ್ರೀಡಾಕೂಟ ಆಯೋಜನೆ ಸಂತಸ ತಂದಿದೆ. ಸರ್ಕಾರಿ ನೌಕರರು ದಿನಂಪ್ರತಿ ಒತ್ತಡದ ಜೊತೆಗೆ ಕೆಲಸ ಮಾಡುವ ಅನಿವಾರ್ಯತೆ ಎದುರಾಗಿದೆ.



ನೌಕರರಿಗೂ ವೈಯಕ್ತಿಕ ಬದುಕು ಇದೆ. ಇದನ್ನು ಮನಗಂಡಿರುವ ರಾಜ್ಯಸರ್ಕಾರ ನೌಕರರು ಕ್ರೀಡಾ ಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿದೆ ಎಂದರು.

'ಸರ್ಕಾರಿ ನೌಕರರಿಗೆ ಇದು ಕ್ರೀಡಾ ಉತ್ಸವ. ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ನೌಕರರು ದೇಹವನ್ನು ಸದೃಢವಾಗಿಟ್ಟುಕೊಳ್ಳಬೇಕು. ನೌಕರರು ಪ್ರತಿದಿನ ಕ್ರೀಡೆಯಲ್ಲಿ ತೊಡಗುವುದರಿಂದ ದೇಹ ಮತ್ತು ಮನಸ್ಸು ಸಮಸ್ಥಿತಿಗೆ ಬರಲಿದೆ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಸಿ.ಎನ್. ರೇಣುಕಾದೇವಿ ಪ್ರಾಸ್ತಾವಿಕವಾಗಿ ಮಾತನಾಡಿ, ಸದಾ ಒತ್ತಡದಲ್ಲಿರುವ ಸರ್ಕಾರಿ ನೌಕರರು ಒತ್ತಡ ಮುಕ್ತರಾಗಲು ಈ ಕ್ರೀಡಾಕೂಟವನ್ನು ಶಿಸ್ತು ಬದ್ಧವಾಗಿ ಆಯೋಜಿಸಲಾಗಿದೆ.ಸರ್ಕಾರಿ ನೌಕರರು ಕ್ರೀಡಾ ಮನೋಭಾವನೆ ಬೆಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಜಿ.ಪಂ.ಸಿಇಒ ಮೋನಾ ರೋತ್ ಪಥಸಂಚಲನ ವಂದನೆ ಸ್ವೀಕರಿಸಿದರು. ಕಾಡಾಧ್ಯಕ್ಷ ಪಿ.ಮರಿಸ್ವಾಮಿ ಧ್ವಜಾರೋಹಣ ನೆರವೇರಿಸಿದರು.ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಕ್ರೀಡಾಜ್ಯೋತಿ ಸ್ವೀಕರಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಎಡಿಸಿ ಜವರೇಗೌಡ, ಎಸ್ಪಿ ಶಶಿಧರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಸುರೇಶ್, ಸಂಘ ಜಿಲ್ಲಾ ಕಾರ್ಯದರ್ಶಿ ಡಿ.ಎನ್. ಭರತ್ ಭೂಷಣ, ಖಜಾಂಚಿ ಶಿವಕುಮಾರಯ್ಯ, ಕಾರ್ಯಾಧ್ಯಕ್ಷ ಮಹದೇವಸ್ವಾಮಿ, ರಾಜ್ಯ ಪರಿಷತ್ತು ಸದಸ್ಯ ನಟರಾಜು, ಗೌರವ ಅಧ್ಯಕ್ಷ ಎಸ್. ಮಹದೇವಯ್ಯ, ರಾಜ್ಯ ಜಂಟಿ ಕಾರ್ಯದರ್ಶಿ ಬಾಲಸುಬ್ರಹ್ಮಣ್ಯಂ, ಸಂಘಟನಾ ಕಾರ್ಯದರ್ಶಿ ಭವಾನಿದೇವಿ, ತಾಲೂಕು ಪ್ರಾಥಮಿಕ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ನೌಕರರ ಸಂಘದ ಜಿಲ್ಲಾ ಹಾಗೂ ತಾಲ್ಲೂಕು ಶಾಖೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಹಾಜರಿದ್ದರು.

## ಸಂಕ್ಷಿಪ್ತ ಸುದ್ದಿ

### ಗಣರಾಜ್ಯೋತ್ಸವ ದಿನಾಚರಣೆ

**ಮಡಿಕೇರಿ:** ಜಿಲ್ಲಾಡಳಿತ ವತಿಯಿಂದ ಜನವರಿ, 26 ರಂದು ಬೆಳಗ್ಗೆ 09 ಗಂಟೆಗೆ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ 77 ನೇ ಗಣರಾಜ್ಯೋತ್ಸವ ದಿನಾಚರಣೆ ನಡೆಯಲಿದೆ.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು ಅವರು ಧ್ವಜಾರೋಹಣ ನೆರವೇರಿಸಲಿದ್ದಾರೆ. ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಮಂತರ್ ಗೌಡ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯಸಭಾ ಸದಸ್ಯರಾದ ಅಜಯ್ ಮಾಕನ್, ವಿಧಾನ ಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾದ ಸಿ.ಎಸ್.ಅರುಣ್ ಮಾಚಯ್ಯ, ನಗರಸಭೆ ಅಧ್ಯಕ್ಷರಾದ ಪಿ.ಕಲಾವತಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷರಾದ ಟಿ.ಎಂ.ಧರ್ಮಜ ಉತ್ತಪ್ಪ, ಕೊಡಗು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಆರ್.ಎನ್., ಇತರರು ಪಾಲ್ಗೊಳ್ಳಲಿದ್ದಾರೆ.

### ಕಾನೂನು ಅರಿವು ಮತ್ತು ನೆರವು ಶಿಬಿರ

**ಮಡಿಕೇರಿ:** ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಹಿರಿಯ ನಾಗರಿಕರಿಗಾಗಿ ಕೇಂದ್ರ ಪ್ರಾಯೋಜಿತ ಅಟಲ್ ವಯೋ ಅಭ್ಯುದಯ ಯೋಜನೆಯಡಿ ಕೇಂದ್ರ ಸರ್ಕಾರದ ಸ್ಟೇಟ್ ಆಕ್ಷನ್ ಪ್ಲಾನ್ ಫಾರ್ ಸೀನಿಯರ್ ಸಿಟಿಜನ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಸಲುವಾಗಿ ಕೊಡಗು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಪೊಲೀಸ್ ಇಲಾಖೆ ಇವರ ಸಹಯೋಗದಲ್ಲಿ ಹಿರಿಯ ನಾಗರಿಕರ ಕಾಯ್ದೆ 2007, ಹಿರಿಯ ನಾಗರಿಕರ ಆಸ್ತಿ ಸಂರಕ್ಷಣೆ, ಹಿರಿಯ ನಾಗರಿಕರಿಗೆ ಇರುವ ಸೌಲಭ್ಯಗಳ ಕುರಿತಾಗಿ ಸಾರ್ವಜನಿಕರಿಗೆ ಕಾನೂನು ಅರಿವು ಮತ್ತು ನೆರವು ಶಿಬಿರ ಕಾರ್ಯಕ್ರಮವು ನಗರದ ಶಿಶು ಕಲ್ಯಾಣ ಸಂಸ್ಥೆಯಲ್ಲಿ ಶುಕ್ರವಾರ ನಡೆಯಿತು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶುಭ ಅವರು ಉದ್ಘಾಟಿಸಿ ಮಾತನಾಡಿ ಹಿರಿಯ ನಾಗರಿಕರು ಸಮಾಜದ ಆಸ್ತಿ. ಹಿರಿಯರಿಗೆ ಸರ್ಕಾರ ಹಾಗೂ ಸಂಘ ಸಂಸ್ಥೆಗಳಿಂದ ಇರುವಂತಹ ಅವರ ಹಕ್ಕುಗಳನ್ನು ಪಡೆಯುವಲ್ಲಿ ಹಾಗೂ ತಮ್ಮ ಆಸ್ತಿಯಲ್ಲಿ ತಮಗೆ ಅಗತ್ಯವಿರುವಷ್ಟನ್ನು ಇಟ್ಟುಕೊಂಡು ಮಕ್ಕಳಿಗೆ ನೀಡುವಂತಾಗಬೇಕು ಎಂದು ಸಲಹೆ ಮಾಡಿದರು.

ಪ್ರತಿಯೊಬ್ಬರೂ ಹಂಚಿಕೊಂಡು ಬದುಕುವುದರಿಂದ ಸಂತೋಷದಿಂದ ಇರಬಹುದು. ಅಲ್ಲದೆ ಹಿರಿಯ ನಾಗರಿಕರು ತಮ್ಮ ಮಾಹಿತಿಯನ್ನು ಹತ್ತಿರದ ಪೊಲೀಸ್ ಠಾಣೆಗಳಿಗೆ ನೀಡುವಂತೆ ಹಾಗೂ ಪೊಲೀಸ್ ಇಲಾಖೆಯ 112 ನ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ಅಲ್ಲದೆ ಜನವರಿ 28 ರಂದು ನಡೆಯುವ ಲೋಕ ಅದಾಲತ್‌ನಲ್ಲಿ ಈಗಾಗಲೇ ಉಪ ವಿಭಾಗಾಧಿಕಾರಿ ಅವರ ಕಚೇರಿಯಲ್ಲಿ ಇರುವ ಅರ್ಜಿಯನ್ನು ವಿಲೇವಾರಿಗೊಳಿಸಲು ಹಿರಿಯ ನಾಗರಿಕರು ತಮ್ಮ ದೂರನ್ನು ಇತ್ಯರ್ಥಪಡಿಸಿಕೊಳ್ಳಲು ಮುಂದಾಗಬೇಕು ಎಂದರು. ಹಿರಿಯ ನಾಗರಿಕರ ಪಾಲನೆ ಪೋಷಣೆ ಸಂರಕ್ಷಣೆ ಕಾಯ್ದೆ 2007 ರ ಕುರಿತು ವಕೀಲರಾದ ಮೀನಾ ಕುಮಾರಿ ಉಪನ್ಯಾಸ ನೀಡಿದರು. ಗ್ರಾಮಾಂತರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಚಂದ್ರಶೇಖರ್ ಅವರು ಹಿರಿಯ ನಾಗರಿಕರಿಗೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

# ರಸ್ತೆ ಸುರಕ್ಷತಾ ಕ್ರಮಗಳ ಕುರಿತು ಜಾಗೃತಿ ಮೂಡಿಸಿ

## ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕುಮಾರ ಸೂಚನೆ



**ಮಂಡ್ಯ:** ಜಿಲ್ಲಾ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿ/ರಾಷ್ಟ್ರೀಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಸಂಭವಿಸುವ ರಸ್ತೆ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಸಮನ್ವಯದಿಂದ ಕರ್ತವ್ಯ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ರಸ್ತೆ ಸುರಕ್ಷಾ ಸಮಿತಿ ರವರು ಸೂಚಿಸಿದರು.

ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ ಜರುಗಿದ್ದು, ರಸ್ತೆ ಸುರಕ್ಷತಾ ಕ್ರಮಗಳ ಕುರಿತು ಜಾಗೃತಿ ಮೂಡಿಸಬೇಕು ಮತ್ತು ಪದೇ ಪದೇ ರಸ್ತೆ ಅಪಘಾತಗಳು ಸಂಭವಿಸುವ ಸ್ಥಳಗಳನ್ನು ಪತ್ತೆಹಚ್ಚಿ, ಅಪಘಾತಗಳನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಹೆದ್ದಾರಿಗಳಲ್ಲಿ ಅಪಘಾತಗಳು ಸಂಭವಿಸುವ ಕಪ್ಪು ಸ್ಥಳಗಳನ್ನು (Black Spot) ಗುರುತಿಸಿ, ಸುಮಾರು 8.15 ಕೋಟಿ ವೆಚ್ಚದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ ರಾಜ್ಯ ರಸ್ತೆ ಸುರಕ್ಷತಾ ಸಮಿತಿಗೆ ಸಲ್ಲಿಸಲಾಗಿದೆ.

ವಿಶ್ವೇಶ್ವರಯ್ಯ (V.C) ನಾಲೆ ಜಿಲ್ಲೆಯಲ್ಲಿ ಸುಮಾರು 530 ಕಿ.ಮೀ. ಇದ್ದು, ವಿಶ್ವೇಶ್ವರಯ್ಯ ನಾಲಾ ರಸ್ತೆ ಬದಿಗಳಲ್ಲಿ ರಸ್ತೆ ಅಪಘಾತಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ತಾಂತ್ರಿಕ ಸಮಿತಿಯನ್ನು ರಚಿಸಿದ್ದು, ರಸ್ತೆ ತಿರುವುಗಳಲ್ಲಿ ಕ್ರ್ಯಾಶ್ ಬ್ಯಾರಿಯರ್ ಅಳವಡಿಸಲು ರೂ 20 ಕೋಟಿ ಮೊತ್ತದಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿಗಳಿಗೆ ಹೊಂದಿಕೊಂಡಂತಿರುವ ರಸ್ತೆಗಳಲ್ಲಿ ಸುರಕ್ಷತಾ ದೃಷ್ಟಿಯಿಂದ ರಂಬಲ್ ಸ್ಟ್ರಿಪ್ ಅಳವಡಿಸಿ, ಬಣ್ಣ ಬಳೆದು ಕ್ಯಾಟ್ ಐಸ್ ಗಳನ್ನು ಹಾಗೂ ಸೈನ್ ಬೋರ್ಡ್ ಗಳನ್ನು ಅಳವಡಿಸಲು ಸೂಚಿಸಲಾಗಿದೆ.

## ಚುನಾವಣೆಯ ಘನತೆ– ಗೌರವವನ್ನು ಎತ್ತಿ ಹಿಡಿಯಬೇಕು

### ಮತದಾರರ ದಿನಾಚರಣೆಯಲ್ಲಿ ಆಚರಣೆ ಡಿಸಿ ಡಾ.ಕುಮಾರ ಆಶಯ



**ಮಂಡ್ಯ :** ಭಾರತದಲ್ಲಿ ಚುನಾವಣೆಯನ್ನು ಅತ್ಯಂತ ನಿಷ್ಪಕ್ಷಪಾತವಾಗಿ ಪ್ರದರ್ಶಕವಾಗಿ ಮಾಡುವ ನಿಟ್ಟಿನಲ್ಲಿ ಚುನಾವಣೆ ಆಯೋಗವನ್ನು ಸ್ಥಾಪಿಸಲಾಯಿತು. ಚುನಾವಣೆಯ ಘನತೆ ಗೌರವವನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಮತದಾರರ ದಿನಾಚರಣೆಯ ಆಚರಣೆ ಮಾಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ಪ್ರತಿಜ್ಞಾವಿಧಿ ಬೋಧನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಪ್ರತಿ ವರ್ಷವೂ ಸಹ ಮತದಾನದ ದಿನಾಚರಣೆಯನ್ನು ಆಚರಣೆ ಮಾಡಿಕೊಂಡು ಬರಲಾಗುತ್ತಿದೆ. ಇದರ ಉದ್ದೇಶ ಪ್ರಬುದ್ಧ ಮತದಾರರು ಪ್ರಜ್ಞಾವಂತರನ್ನಾಗಿಸುವುದಾಗಿದ ಎಂದು ಹೇಳಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳಾಗಿರುವುದರಿಂದ ಪ್ರತಿಯೊಬ್ಬರೂ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು. ಚುನಾವಣೆಯನ್ನು ಶಾಂತಿಯುತವಾಗಿ ಘನತೆ ಮತ್ತು ಗೌರವವನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಚುನಾವಣೆಯನ್ನು ನಡೆಸುವ ಉದ್ದೇಶದಿಂದ ಮತದಾರರ ದಿನಾಚರಣೆ ಆಚರಿಸಲಾಗುವುದು. ಪ್ರತಿಯೊಬ್ಬರೂ ಸಹ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಬೇಕು. 18 ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಮತದಾನ ಪಟ್ಟಿಯಲ್ಲಿ ನೊಂದಾಯಿಸಿ ಕೊಳ್ಳಬೇಕು ಎಂದು ಹೇಳಿದರು.

ಸದರಿ ವರ್ಷ 25 ರಂದು ಮತದಾನ ದಿನಾಚರಣೆಯ ಭಾನುವಾರ ಬಂದಿರುವುದರಿಂದ ಚುನಾವಣಾ ಆಯೋಗ ನಿರ್ದೇಶನದಂತೆ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಇಂದು ಮತದಾನ ಪ್ರತಿಜ್ಞಾವಿಧಿ ಸ್ವೀಕಾರ ಮಾಡಲಾಗುತ್ತದೆ ಈ ನಿಟ್ಟಿನಲ್ಲಿ ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪ್ರತಿಜ್ಞಾವಿಧಿಯನ್ನು ತೆಗೆದುಕೊಳ್ಳಲಾಯಿತು ಎಂದು ತಿಳಿಸಿದರು.

ನಂತರ ಜಿಲ್ಲಾಧಿಕಾರಿ ಡಾ ಕುಮಾರ ಅವರು ಜಿಲ್ಲಾಧಿಕಾರಿ ಕಚೇರಿಯ ಸಿಬ್ಬಂದಿಗಳಿಗೆ ಪ್ರತಿಜ್ಞಾವಿಧಿಯನ್ನು ಭೋದಿಸಿದರು.

ಸದರಿ ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಸಿ ಶಿವಾನಂದ ಮೂರ್ತಿ, ಉಪ ವಿಭಾಗಾಧಿಕಾರಿ ಶಿವಮೂರ್ತಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

## ಹಾಲಿ ಆಡಳಿತ ಮಂಡಳಿಯನ್ನು ಹೊರಗಿಟ್ಟು ತನಿಖೆ ನಡೆಸಲಿ: ಸುನಂದಾ ಜಯರಾಂ




**ಮಂಡ್ಯ:** ಮೈಶುಗರ್ ಕಾರ್ಖಾನೆಯ ಅಕ್ರಮಗಳ ತನಿಖೆಗೆ ಸಮಿತಿ ರಚಿಸಿರುವ ಶಾಸಕರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಮುಂದಾಗಿದ್ದಾರೆ. ತನಿಖಾ ಸಮಿತಿಯಲ್ಲಿ ಹಾಲಿ ಆಡಳಿತ ಮಂಡಳಿಯನ್ನು ಹೊರಗಿಟ್ಟು ತನಿಖೆ ನಡೆಸಲಿ ಎಂದು ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಸುನಂದಾ ಜಯರಾಂ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಸಾಲಿನ ಕಬ್ಬು ನುರಿಯುವ ವೇಳೆ ಇಲಾಖೆಗೆ 10 ಕೋಟಿ ಹಣ ಬಿಡುಗಡೆ ಮಾಡುವ ವೇಳೆ ಮುಂದಿನ ಅವಧಿಗೆ ಕಾರ್ಖಾನೆಯನ್ನು ಖಾಸಗಿ ವಲಯಕ್ಕೆ ಗುತ್ತಿಗೆ ನೀಡುವಂತೆ ಷರತ್ತಿನೊಂದಿಗೆ ಹಣ ನೀಡಲಾಗಿದೆ. ಈ ಹಿನ್ನಲೆ ಸಮಿತಿ ರಚನೆಯಾಗಿರುವ ಗುಮಾನಿ ಎದ್ದಿದೆ ಎಂದು ಆರೋಪಿಸಿದರು.

ಕಳೆದ 25 ವರ್ಷಗಳಿಂದ ಮೈಶುಗರ್ ಕಾರ್ಖಾನೆ ಸರಿಯಾಗಿ ನಡೆಯದಕ್ಕೆ ಜಿಲ್ಲೆಯ ಜನಪ್ರತಿನಿಧಿಗಳು ಕಾರಣರಾಗಿದ್ದಾರೆ. ಕಾರ್ಖಾನೆಯ ಸಾರ್ವಜನಿಕ ಲೆಕ್ಕ ಪರಿಶೋಧನೆ ಸಮಿತಿ ಸಭೆ ಮಾಡದೇ ಹಣ ಲೂಟಿಯೂ ಆಗಿದೆ. 600 ಕೋಟಿ ರೂ ಹಣ ಲೂಟಿಯಾಗಿದ್ದು, ಈ ಬಗ್ಗೆ ಬೇಟಿ ನೀಡದ ಶಾಸಕರು ಹಾಗೂ ಸಚಿವರು ತನಿಖಾ ಸಮಿತಿ ರಚಿಸಿರುವುದು ಹಲವು ಅನುಮಾನಗಳಿಗೆ ಎಡೆಮಾಡಿದೆ ಎಂದು ಹೇಳಿದರು.

ಕಾರ್ಖಾನೆಯನ್ನು ಖಾಸಗೀಕರಣ ಮಾಡಲು, ಕಾರ್ಖಾನೆಯ ಆಸ್ತಿಯನ್ನು ಕಬಳಿಸಲು ನಿರಂತರ ಪ್ರಯತ್ನ ಮಾಡಲಾಗುತ್ತಿದೆ. ಈ ನಡುವೆ ಜಿಲ್ಲೆಯ ನಾನಾ ಸಂಘಟನೆಗಳ ಹೋರಾಟದಿಂದ ಕಾರ್ಖಾನೆ ಇನ್ನು ಸರಕಾರಿ ಸ್ವಾಮ್ಯದಲ್ಲೇ ಉಳಿದಿದೆ. ಆದರೂ ರಾಜಕೀಯ ಪಕ್ಷಗಳು ಕಾರ್ಖಾನೆಯನ್ನು ಸರಕಾರಿ ಸ್ವಾಮ್ಯದಿಂದ ಬಿಡುಗಡೆ ಮಾಡಲು ಪ್ರಯತ್ನ ಮಾಡುವ ಸಂದರ್ಭದಲ್ಲಿ ತನಿಖಾ ಸಮಿತಿ ರಚಿಸಲಾಗುತ್ತಿದ್ದೆ. ಈ ಸಮಿತಿಯಲ್ಲಿ ಹಾಲಿ ಆಡಳಿತ ಮಂಡಳಿಯನ್ನು ಹೊರಗಿಟ್ಟು ತನಿಖೆ ಮಾಡಬೇಕು. ಇಲ್ಲವಾದಲ್ಲಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಗೋಷ್ಠಿಯಲ್ಲಿ ಸಮಿತಿಯ ಜಿಲ್ಲಾಧ್ಯಕ್ಷ ಜಿ.ಬಿ.ಶಿವಕುಮಾರ್, ಹಿರಿಯ ಉಪಾಧ್ಯಕ್ಷ ಕೆ.ಬೋರಯ್ಯ, ಎಂ.ಬಿ.ನಾಗಣ್ಣಗೌಡ, ಎಸ್.ನಾರಾಯಣ್, ಮಂಜುನಾಥ್, ಕೃಷ್ಣ ಬಸವರಾಜು ಇದ್ದರು.

### ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ

**ಮಡಿಕೇರಿ:** ಕೊಡಗು ಜಿಲ್ಲಾ ಪಂಚಾಯಿತಿ ವತಿಯಿಂದ ಎನ್‌ಆರ್‌ಎಲ್‌ಎಂ, ಸಂಜೀವಿನಿ ಯೋಜನೆಯಡಿ ಗ್ರಾಮೀಣ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಬಲವರ್ಧನೆಗಾಗಿ ಸಂಜೀವಿನಿ ಸ್ವ ಸಹಾಯ ಸಂಘಗಳ ಮಹಿಳಾ ಉದ್ಯಮಿಗಳು ತಯಾರಿಸುವ ಉತ್ಪನ್ನಗಳನ್ನು ಮಾರಾಟ ಮಾಡುವ ಸಲುವಾಗಿ ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವು ಜನವರಿ, 27 ಮತ್ತು 28 ರಂದು ನಗರದ ಗಾಂಧಿ ಮೈದಾನದ ಆವರಣದಲ್ಲಿ ನಡೆಯಲಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸುವಂತೆ ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ತಿಳಿಸಿದ್ದಾರೆ.

## ಜ.24 ರಂದು ರಾಜಾಸೀಟು ಉದ್ಯಾನವನದಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ



**ಮಡಿಕೇರಿ :** ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತೋಟಗಾರಿಕೆ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಜನವರಿ, 24 ರಿಂದ 26 ರವರೆಗೆ ನಗರದ ರಾಜಾಸೀಟು ಉದ್ಯಾನವನ ಹಾಗೂ ಗಾಂಧಿ ಮೈದಾನದಲ್ಲಿ 'ಫಲಪುಷ್ಪ ಪ್ರದರ್ಶನ' ನಡೆಯಲಿದೆ.

ಫಲಪುಷ್ಪ ಪ್ರದರ್ಶನದ ಉದ್ಘಾಟನೆಯು ಜನವರಿ, 24 ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು, ತೋಟಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ॥ ಮಂತರ್ ಗೌಡ, ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯಸಭಾ ಸದಸ್ಯರಾದ ಅಜಯ್ ಮಾಕನ್, ವಿಧಾನ ಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ನಗರಸಭೆ ಅಧ್ಯಕ್ಷರಾದ ಪಿ.ಕಲಾವತಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷರಾದ ಟಿ.ಎಂ.ಧರ್ಮಜ ಉತ್ತಪ್ಪ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಸರ್ಕಾರದ ಕಾರ್ಯದರ್ಶಿ ಡಾ.ಆರ್.ಗಿರೀಶ್, ಕೊಡಗು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್, ತೋಟಗಾರಿಕೆ ಇಲಾಖೆ ನಿರ್ದೇಶಕರಾದ ಡಾ.ಇಬ್ರಾಹಿಂ ಮೈಗೂರ್,

ಕೊಡಗು ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷರಾದ ಬಿದ್ದಾಟಂಡ ರಮೇಶ್ ಚಂಗಪ್ಪ, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಎಸ್.ಪಿ.ಪೊನ್ನಪ್ಪ, ಬೆಂಗಳೂರು ಲಾಲ್‌ಬಾಗ್ ಕ್ಷೇತ್ರ ಮತ್ತು ನರ್ಸರಿ ತೋಟಗಾರಿಕೆ ಅಪರ ನಿರ್ದೇಶಕರಾದ ಡಾ.ಕೆ.ಎಂ.ಪರಶಿವಮೂರ್ತಿ, ತೋಟಗಾರಿಕೆ ಅಪರ ನಿರ್ದೇಶಕರು(ಹಣ್ಣುಗಳು) ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಅಪರ ನಿರ್ದೇಶಕರಾದ ಡಾ.ಪ್ರಕಾಶ್ ಎಂ.ಸೊಬರದ, ಬೆಂಗಳೂರು ಲಾಲ್‌ಬಾಗ್ ಕಾರ್ಯನಿರ್ವಾಹಕ ನಿರ್ದೇಶಕರಾದ (ಕರಾತೋಮಿ) ಡಾ.ಕೆ.ಬಿ.ದುಂಡಿ, ಲಾಲ್‌ಬಾಗ್ ತೋಟಗಾರಿಕೆ ಅಪರ ನಿರ್ದೇಶಕರಾದ(ತಾಳೆ ಬೆಳೆ) ಡಾ.ಎಸ್.ನಂದ, ತೋಟಗಾರಿಕೆ ಅಪರ ನಿರ್ದೇಶಕರಾದ (ಹನಿ ನೀರಾವರಿ) ಕದಿರೇಗೌಡ, ಲಾಲ್‌ಬಾಗ್ ಪಾರ್ಕ್ಸ್ ಮತ್ತು ಗಾರ್ಡನ್ ತೋಟಗಾರಿಕೆ ಅಪರ ನಿರ್ದೇಶಕರಾದ ಡಾ.ಎಂ.ಜಗದೀಶ್, ಲಾಲ್‌ಬಾಗ್ ತೋಟಗಾರಿಕೆ ಅಪರ ನಿರ್ದೇಶಕರಾದ (ಯೋಜನೆ) ಎಚ್.ಎಂ.ಕೃಷ್ಣಮೂರ್ತಿ, ಮೈಸೂರು ವಿಭಾಗದ ತೋಟಗಾರಿಕೆ ಜಂಟಿ ನಿರ್ದೇಶಕರಾದ ಡಾ.ಎಚ್.ಎಂ.ನಾಗರಾಜ್, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಆರ್.ಎನ್., ತೋಟಗಾರಿಕೆ ಉಪ ನಿರ್ದೇಶಕರಾದ ಶಶಿಧರ್ ಎಚ್., ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಪಣೀಂದ್ರ ಎನ್.ಎಸ್. ಸಹಾಯಕ ನಿರ್ದೇಶಕರಾದ ಮುತ್ತಪ್ಪ ಇತರರು ಪಾಲ್ಗೊಳ್ಳಲಿದ್ದಾರೆ.

# ಭೂಕಬಳಿಕೆದಾರರನ್ನು ಸಚಿವರೇ ರಕ್ಷಿಸುತ್ತಿದ್ದಾರೆ: ಮಾಜಿ ಶಾಸಕ ಕೆ.ಸುರೇಶ್‌ಗೌಡ ಆರೋಪ



**ಮಂಡ್ಯ:** ನಾಗಮಂಗಲ ತಾಲೂಕಿನ ಸರಕಾರಿ ಹಾಗೂ ಸಾರ್ವಜನಿಕರ ಜಮೀನು ಕಬಳಿಕೆದಾರರನ್ನು ಜಿಲ್ಲೆಯ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿರೇ ರಕ್ಷಿಸುತ್ತಿದ್ದಾರೆ ಎಂದು ಮಾಜಿ ಶಾಸಕ ಕೆ.ಸುರೇಶ್‌ಗೌಡ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಮೀನು ಕಬಳಿಕೆ, ಭ್ರಷ್ಟಾಚಾರ ಸಂಬಂಧ ಆಡಳಿತ ಪಕ್ಷದವರೇ ಲೋಕಾಯುಕ್ತರಿಗೆ ದೂರು ನೀಡಿದ್ದಾರೆ. ಫಲವಾಗಿ ಹಲವು ಅಧಿಕಾರಿಗಳ ಬಂಧನವೂ ಆಗಿದೆ ಎಂದರು.

ಆದರೆ ಪ್ರಕರಣದಲ್ಲಿ ತಪ್ಪು ಮಾಡಿದ ಅಧಿಕಾರಿಗಳು ಬಂಧನಕ್ಕೊಳಗಾಗಿದ್ದು, ಪ್ರಮುಖರು ಆರಾಮಾಗಿ ತಿರುಗಾಡುತ್ತಿದ್ದಾರೆ. ಈ ರೀತಿಯ ನಕಲಿ ದಾಖಲೆ ಸೃಷ್ಟಿಸಿ ಭೂ ಕಬಳಿಕೆ ಮಾಡಿರುವುದು ಮೊದಲೇನಲ್ಲ. 90ರ ದಶಕದಿಂದಲೂ ಇದು ನಡೆಯುತ್ತಲಿದೆ. ಜಿಲ್ಲೆಯ ಇತರೇ ತಾಲೂಕುಗಳಿಗೆ ಹೋಲಿಸಿದರೆ ನಾಗಮಂಗಲದಲ್ಲಿ 4500 ಹೆಕ್ಟೇರ್ ಭೂಮಿ ಕಬಳಿಸಲಾಗಿದೆ. ಸರಕಾರ ಈ ಸಂಬಂಧ ಸಂಪೂರ್ಣ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಪ್ರಕರಣ ಸಂಬಂಧ ನ್ಯಾಯ ದೊರಕಿಸುವ ಇಚ್ಛೆ ಇದ್ದರೆ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು. ಏಕೆಂದರೆ ಪೊಲೀಸರಿ ಕಂದಾಯ ದಾಖಲೆಗಳ ಅರಿವಿರುವುದಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಡಿವೈಎಸ್‌ಪಿ ಓರ್ವರಿಗೆ ತನಿಖೆ ನಡೆಸಲು ಸೂಚಿಸಿದ್ದಾರೆ. ಸಚಿವರ ಬೇನಾಮಿಗಳು, ಹಿಂಬಾಲಕರು, ಸಂಬಂಧಿಗಳ ರಕ್ಷಣೆಗೆ ಪೊಲೀಸರಿಂದ ತನಿಖೆ ಮಾಡಿಸಲು ಮುಂದಾಗಿದ್ದಾರೆ ಎಂದು ದೂರಿದರು.

2023ರಿಂದ ಇತ್ತೀಚೆಗೆ ಒಬ್ಬೊಬ್ಬ ವ್ಯಕ್ತಿ 15ರಿಂದ 20 ಎಕರೆ ಜಮೀನಿನಲ್ಲಿ ಜಮೀನಿನಲ್ಲಿ ತೋಟಗಾರಿಕೆ ಕೈಗೊಳ್ಳುತ್ತಾರೆ. ದಾಖಲಾತಿ ಮಾಡಿಸಿಕೊಳ್ಳುತ್ತಿದ್ದಾರೆ. ಎಷ್ಟು ಮೂಲ ದಾಖಲಾತಿಗಳನ್ನು ತಿದ್ದಲಾಗಿದೆ ಎಂಬುದನ್ನು ತನಿಖೆ ಮಾಡಬೇಕಾಗಿದೆ. ಸರಕಾರ ಈ ಬಗ್ಗೆ ಸತ್ಯಾಂಶ ಹೊರ ತರಬೇಕಾದ ಕೆಲಸ ಮಾಡಬೇಕಿದೆ ಎಂದು ಆಗ್ರಹಿಸಿದರು.

ಭೂ ಕಬಳಿಕೆಗೆ ಸಚಿವ ಚಲುವರಾಯಸ್ವಾಮಿ ಅವರೇ ನೇರ ಹೊಣೆಗಾರರು. ಅವರ ಆದೇಶ ಇಲ್ಲದೇ ನಾಗಮಂಗಲ ತಾಲೂಕಿನಲ್ಲಿ ಒಂದು ಕಟ್ಟಿಯೂ ಅಲ್ಲಾಡುತ್ತಿಲ್ಲ. ಅವರಿಗೆ ಗೊತ್ತಿಲ್ಲದೇ ಯಾವ ಕೆಲಸವೂ ಆಗುವುದಿಲ್ಲ. ಕೇವಲ ತಪ್ಪಿಸುವಂತಹ ಕೆಲಸ ಮಾಡಿ ಬೇರೆಯವರ ಮೇಲೆ ಆಪಾದನೆ ಹೊರಿಸುತ್ತಿದ್ದಾರೆ ಎಂದು ಆರೋಪಿಸಿದರು.

ನಾವು ಅರ್ಜಿ, ಅನುಭವ ಮತ್ತು ಅರ್ಹತೆ ಆಧಾರದಲ್ಲಿ ಭೂಮಿ ಹಂಚಿದ್ದೇವೆ. ಅಕ್ರಮ ಯಾರ ಅವಧಿಯಲ್ಲಿ ಆಗಿದ್ದರೂ ತನಿಖೆ ಮಾಡಲಿ ಎದುರಿಸಲು ನಾವು ಸಿದ್ದರಿದ್ದೇವೆ. ಎರಡೂವರೆ ವರ್ಷದಿಂದ ನ್ಯಾಯಬದ್ಧವಾಗಿದ್ದ ದಾಖಲೆ ಬದಲಿಸಲಾಗಿದೆ. ಅವುಗಳನ್ನು ಅಕ್ರಮವಾಗಿ ಹಣಕ್ಕಾಗಿ ಅನ್ಯರಿಗೆ ಖಾತೆ ಮಾಡಿಕೊಡಲಾಗುತ್ತಿದೆ ಎಂದು ದೂರಿದರು.

ಭೂ ಅಕ್ರಮ ಕಬಳಿಕೆ ವಿಚಾರದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತಿದೆ. ಇದರ ಸಂಪೂರ್ಣ ತನಿಖೆಯಾಗಬೇಕು. ರಾಜ್ಯ ಸರಕಾರಕ್ಕೆ ತನಿಖೆಮಾಡಲು ಸಾಧ್ಯವಾಗದೇ ಇದ್ದರೆ ಸಿಬಿಐಗೆ ವಹಿಸಲಿ ಇಲ್ಲವಾದಲ್ಲಿ ನ್ಯಾಯಾಧೀಶರಲ್ಲಿ ಯಾರಿಗೆ ಕಂದಾಯ ದಾಖಲೆಗಳ ಬಗ್ಗೆ ಅರಿವಿದೆಯೋ ಅವರಿಂದ ತನಿಖೆ ಮಾಡಿಸಲಿ ಎಂದು ಒತ್ತಾಯಿಸಿದರು.

ಮೇಕೆದಾಟು ಯೋಜನೆ ಸಂಬಂಧ ನಾಗಮಂಗಲದಲ್ಲಿ ಪರಿಹಾರವಾಗಿ ಜಮೀನು ನೀಡುವುದಾಗಿ ಹೇಳುತ್ತಿದ್ದಾರೆ. ಮೇಕೆದಾಟಿಗೂ ನಾಗಮಂಗಲಕ್ಕೂ ಏನು ಸಂಬಂಧ. ತಾಲೂಕಿನಲ್ಲೇ ಅರ್ಜಿ ಹಾಕಿದವರೆ ಸ್ಥಳ ನೀಡಲು ಜಾಗವಿಲ್ಲ. ಇರುವಲ್ಲಿ ಹಲವರಿಗೆ ಮಂಜೂರಾಗಿದೆ. ಕೆಲವರು ಅನುಭವದಲ್ಲಿದ್ದಾರೆ. ಜಿಲ್ಲಾಧಿಕಾರಿಗಳು ಜಾಗವಿದೆ ಎಂದು ಹೇಳಿದ್ದಾರೆ ಇವರು ಐಎಎಸ್ ಮಾಡಿದ್ದಾರೋ ಅದೇನೋ ತಿಳಿಯದು ಎಂದು ಬೇಸರ ವ್ಯಕ್ತಪಡಿಸಿದರು.

ಸಚಿವರು ಜೆಡಿಎಸ್ ಅನ್ನು ಬೇರು ಮಟ್ಟದಿಂದ ಕಿತ್ತೊ ಒಗೆಯುವ ಹೇಳಿಕೆ ನೀಡಿದ್ದಾರೆ. ಬೆಳೆದು ಬಂದ ಪಕ್ಷದ ಬಗ್ಗೆ ಮಾತನಾಡುವುದು ಸರಿಯಲ್ಲ. ಪಕ್ಷದ ವ್ಯಕ್ತಿಗಳು, ಸರಕಾರವನ್ನು ಆರೋಪ ಮಾಡಲಿ ಅವರಿಗೆ ಪಕ್ಷದ ಪರವಾಗಿ ಮತ ನೀಡಿದ್ದು ಇಷ್ಟವಿಲ್ಲದಿದ್ದರೆ ಅವರು ಆಯ್ಕೆಯಾದಾಗ ರಾಜೀನಾಮೆ ನೀಡಬೇಕು. 2028ಕ್ಕೆ ಯಾವ ಪಕ್ಷ ಉಳಿಯುತ್ತದೆ ಎಂಬುದನ್ನು ಜನ ತೋರಿಸುತ್ತಾರೆ ಎಂದು ಸವಾಲೆಸೆದರು.

ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ, ನರೇಂದ್ರ ಮೋದಿ ಬಗ್ಗೆ ಮಾತಾಡಿದರೆ ದೊಡ್ಡ ನಾಯಕರಾಗುವ ಭಾವನೆಯಲ್ಲಿ ಸಚಿವರಿದ್ದಾರೆ. ಅವರ ಸ್ಥಾನ ಏನೆಂಬುದನ್ನು 2028ರ ಚುನಾವಣೆ ತಿಳಿಸಲಿದೆ ಎಂದರು.

ಗೋಷ್ಠಿಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾ.ಅಧ್ಯಕ್ಷ ಚನ್ನಪ್ಪ, ಎಸ್ಸಿ ಎಸ್ಟಿ ತಾ.ಅಧ್ಯಕ್ಷ ಸಂತೋಷ್, ಅಪ್ಪಾಜಿ, ಎಸ್.ಕೆ.ನಾಗೇಶ್, ರಾಜೇಗೌಡ, ಶ್ರೀನಿವಾಸ್ ಇದ್ದರು.

## ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಿ



**ಮಂಡ್ಯ:** ಫೆಬ್ರವರಿಯಲ್ಲಿ ಬರುವ ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಿ ಎಂದು ಅಪರ ಜಿಲ್ಲಾಧಿಕಾರಿ ಬಿ.ಸಿ ಶಿವಾನಂದಮೂರ್ತಿ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶುಕ್ರವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಜಯಂತಿಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಮುದಾಯದ ಮುಖಂಡರುಗಳು ಸಮನ್ವಯ ಸಾಧಿಸಿ ಜಯಂತಿಗಳ ಆಚರಣೆಯ ದಿನದಂದು ಜಿಲ್ಲಾಡಳಿದ ಗೌರವ ದಕ್ಕೆಬಾರದ ಹಾಗೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಫೆಬ್ರವರಿ 1 ರಂದು ಮಡಿವಾಳ ಮಾಚಿದೇವ ಜಯಂತಿಯನ್ನು ಮಂಡ್ಯ ನಗರದ ಕಲಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಸದರಿ ದಿನದಂದು ಸಂಪನ್ಮೂಲ ವ್ಯಕ್ತಿಗಳಿಂದ ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗುವುದು. ಸಮುದಾಯದಲ್ಲಿ ಸಾಧನೆ ಮಾಡಿದ ಐದು ಸಾಧಕರನ್ನು ಗುರುತಿಸಿ ಸನ್ಮಾನಿಸಲಾಗುವುದು ಎಂದರು ತಿಳಿಸಿದರು.

ಫೆಬ್ರವರಿ 10 ರಂದು ಕಾಯಕ ಶರಣ ಜಯಂತಿಯನ್ನು ಆಚರಿಸಲಾಗುವುದು. ಸದರಿ ದಿನದಂದು ಸಂಪನ್ಮೂಲ ವ್ಯಕ್ತಿಗಳಿಂದ ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗುವುದು. ಸಮುದಾಯದಲ್ಲಿ ಸಾಧನೆ ಮಾಡಿದ ಐದು ಸಾಧಕರನ್ನು ಗುರುತಿಸಿ ಸನ್ಮಾನಿಸಲಾಗುವುದು. ಫೆಬ್ರವರಿ 15 ರಂದು ಸಂತ ಸೇವಾಲಾಲ್ ಜಯಂತಿಯನ್ನು ಆಚರಿಸಲಾಗುವುದು. ಸಮುದಾಯ ಮುಖಂಡರುಗಳೊಂದಿಗೆ ಚರ್ಚಿಸಿ ಸೂಕ್ತ ಜಾಗದಲ್ಲಿ ಜಯಂತಿಯನ್ನು ಆಚರಿಸಲಾಗುತ್ತದೆ ಎಂದು ಹೇಳಿದರು.

ಫೆಬ್ರವರಿ 19 ರಂದು ಛತ್ರಪತಿ ಶಿವಾಜಿ ಜಯಂತಿ ಮತ್ತು ಫೆಬ್ರವರಿ 20 ರಂದು ಸಂತ ಕವಿ ಸರ್ವಜ್ಞ ಜಯಂತಿಯನ್ನು ನಗರದ ಕಲಾಭವನದಲ್ಲಿ ಆಚರಿಸಲಾಗುವುದು. ವಾಡಿಕೆಯಂತೆ ಸಂಪನ್ಮೂಲ ವ್ಯಕ್ತಿಗಳಿಂದ ವಿಶೇಷ ಉಪನ್ಯಾಸ ಮತ್ತು ಸಮುದಾಯದಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಮಾಡಲಾಗುವುದು ಎಂದರು.

ಮಹಾನೀರ ಜಯಂತಿಗಳನ್ನು ಮಾದರಿಯಾಗುವ ನಿಟ್ಟಿನಲ್ಲಿ ಆಚರಿಸೋಣ. ಮಹನೀಯರ ಮೌಲ್ಯ ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಿಳಿಸಲು ಜಯಂತಿಗಳನ್ನು ಆಚರಿಸಲಾಗುತ್ತದೆ. ಸಮುದಾಯದ ಮುಖಂಡರುಗಳು ಸಹಕರಿಸಿ ಎಂದು ಹೇಳಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ವಿ ನಂದೀಶ್, ಡಿ.ದೇವರಾಜು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಎಲ್ ಸಂದೇಶ್ ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರುಗಳು ಉಪಸ್ಥಿತರಿದ್ದರು.

## ಜ.25ಕ್ಕೆ ಚೇತನೋತ್ಸವ ನೃತ್ಯ ಪ್ರದರ್ಶನ

ಮೈಸೂರು: ಗುರುದೇವ ಅಕಾಡೆಮಿ ಆಫ್ ಫೈನ್ ನಿಂದ ಇಲ್ಲಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಜ.24ರಂದು ಮಧ್ಯಾಹ್ನ 3.30ರಿಂದ ರಾತ್ರಿ 7.30ರವರೆಗೆ ಚೇತನೋತ್ಸವ– 2026 ಶಾಸ್ತ್ರೀಯ ನೃತ್ಯ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಕಲಾತ್ಮಕ ನಿರ್ದೇಶಕಿ ಪಿ.ಎಂ.ಚೇತನಾ ರಾಧಾಕೃಷ್ಣ ತಿಳಿಸಿದರು.


ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸವರು, ಕಾರ್ಯಕ್ರಮದಲ್ಲಿ ಗುರುದೇವ ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ ನಡೆಸಲಾಗುವುದು. ಉದ್ಯಮಿ ಎಂ ಜಗನ್ನಾಥ ಶೆಣೈ ಉದ್ಘಾಟಿಸುವರು. ಯೋಗನರಸಿಂಹ ಸ್ವಾಮಿ ದೇವಸ್ಥಾನ ಆಡಳಿತಾಧಿಕಾರಿ ಎನ್ ಶ್ರೀನಿವಾಸನ್ ಆಶೀರ್ವಚನ ನೀಡುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ತಿ.ನರಸೀಪುರ ತಾಲ್ಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಸ್ವಾಮಿ, ವಕೀಲ ವಿಶ್ವನಾಥ ದೇವಸ್ಯ ಪಾಲ್ಗೊಳ್ಳುವರು. ಸಮಾಜ ಸೇವಕ ಅಚ್ಯುತ ರಾಮಪ್ರಸಾದ ಕಾಮತ್ ಅವರಿಗೆ ಗುರುದೇವ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುತ್ತದೆ. 10 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ ಎಂದು ತಿಳಿಸಿದರು.

ನೃತ್ಯ ಪ್ರದರ್ಶನದಲ್ಲಿ ಸಂಜೆ.3.30 ರಿಂದ 4.30 ರವರೆಗೆ ಅತಿಥಿ ಕಲಾವಿದರಿಂದ, ಸಂಜೆ 4.30ರಿಂದ ಅಕಾಡೆಮಿಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ ಎಂದರು.



✍ಸೌಮ್ಯಸನತ್

# ಜಗತ್ತನ್ನೇ ಬೆಳಗುವ ಶಕ್ತಿಗೆ ಕೃತಜ್ಞತೆ ಸಲ್ಲಿಸೋಣ





ಹಿಂದೂ ಧರ್ಮದಲ್ಲಿ ಕೋಟಿ ಕೋಟಿ ದೇವತೆಗಳು ಇದ್ದರೂ ನಮ್ಮ ಕಣ್ಣಿಗೆ ಕಾಣುವ ದೇವರೆಂದರೇ ಅದು ತಾಯಿಯನ್ನು ಬಿಟ್ಟರೇ ಸೂರ್ಯ ದೇವನೇ ಆಗಿದ್ದಾನೆ. ಸಕಲ ಜೀವಿಗಳ ಜೀವನಕ್ಕೆ ಸೂರ್ಯ ಅವಶ್ಯ. ಈತನನ್ನು ಪ್ರತಿದಿನವು ನಾವು ನೋಡಲೇಬೇಕು ಮತ್ತು ಪೂಜಿಸಲೇ ಬೇಕು. ಪ್ರತಿದಿನವು ಈತನಿಂದಲೇ ಆರಂಭ, ಈತನಿಂದಲೇ ಅಂತ್ಯ. ಸೂರ್ಯನು ಕತ್ತಲನ್ನು ನಿವಾರಿಸಿ ಬೆಳಕನ್ನು ಹೊರಸೂಸುವ ದೇವ. ಇದರರ್ಥ ಜಗತ್ತಿನಲ್ಲಿ ಅಜ್ಞಾನವನ್ನು ತೊಡೆದು ಹಾಕಿ ಸುಜ್ಞಾನವು ಬೆಳಗುವಂತೆ ಮಾಡುವ ಈತನ ಕಿರಣಗಳಿಗೆ ಜೀವರಾಶಿಯನ್ನು ಸಂರಕ್ಷಿಸುವ, ಸಂಹಾರ ಮಾಡುವ ಎರಡೂ ಗುಣವೂ ಇದೆ. ಪ್ರತಿದಿನವು ಬೆಳಗಿನಿಂದ ಸಂಜೆಯವರೆಗೆ ಒಳಿತನ್ನು ಮಾಡುವ ಸೂರ್ಯದೇವನನ್ನು ಪೂಜಿಸಿದರೆ ಪ್ರತಿನಿತ್ಯದ ಕಷ್ಟವು ದೂರಾಗುತ್ತದೆ. ಇದೇ ಕಾರಣಕ್ಕೆ ಸೂರ್ಯನ ಪೂಜೆಗೆ ವಿಶೇಷ ಮಾನ್ಯತೆ ಇದೆ. ಮಾಘ ಮಾಸದ ಶುಕ್ಲ ಪಕ್ಷದ ಸಪ್ತಮಿ ದಿನ ರಥ ಸಪ್ತಮಿ ಸೂರ್ಯದೇವನ ಜನ್ಮದಿನ. ಭಗವಾನ್ ಸೂರ್ಯ ನಮ್ಮ ಆತ್ಮವನ್ನು ಪ್ರತಿನಿಧಿಸುತ್ತಾನೆ. ಈ ದಿನ ಜಗತ್ತಿಗೆ ಬೆಳಕನ್ನು ನೀಡುವ ಪ್ರತ್ಯಕ್ಷ ದೈವ ಸೂರ್ಯನನ್ನು ಪೂಜಿಸುವುದರಿಂದ ನಮ್ಮ ಜೀವನದಲ್ಲೂ ಸಕಾರಾತ್ಮಕ, ಸಂತೋಷದ, ಯಶಸ್ಸು ಮತ್ತು ಸಮೃದ್ಧಿಯ ಬೆಳಕು ಮೂಡುವುದು.

ಚಳಿಗಾಲದಲ್ಲಿ ಒಣಗಿದ ತರಗೆಲೆಯಂತೆ ಆದ ಶರೀರ ರಥ ಸಪ್ತಮಿಯ ಬಳಿಕ ಸೂರ್ಯನ ಶಾಖದಿಂದ ಹೊಸ ಚೈತನ್ಯ ಪಡೆಯುತ್ತದೆ. ಈ ಕಾರಣದಿಂದ ಈ ದಿನ ಸೂರ್ಯನಿಗೆ ಮೈಯೊಡ್ಡಿ ವಿಶೇಷ ಪೂಜೆ ಸಲ್ಲಿಸಲಾಗುವುದು. ಈ ದಿನ ಸೂರ್ಯನ ಆರಾಧನೆ ನಡೆಸಿದರೆ ಆರೋಗ್ಯ ಮತ್ತು ಖ್ಯಾತಿ ಸಿಗುತ್ತದೆ. ಸೂರ್ಯನ ಬೆಳಕು ಅನೇಕ ರೋಗಗಳನ್ನು ಗುಣಮುಖ ಮಾಡುವ ಶಕ್ತಿ ಹೊಂದಿದ್ದು, ಎಲ್ಲಾ ರೀತಿಯ ದೈಹಿಕ ಮತ್ತು ಮಾನಸಿಕ ರೋಗಗಳು ಮತ್ತು ನೋವುಗಳು ಗುಣವಾಗುತ್ತವೆ ಎಂಬ ನಂಬಿಕೆ ಇದೆ.



ಆರೋಗ್ಯ ಭಾಗ್ಯ

ನಮಗೆಲ್ಲರಿಗೂ ಯೋಗ ಎಂದೊಡನೆ ತಕ್ಷಣ ನೆನಪಿಗೆ ಬರುವುದು ಸೂರ್ಯ ನಮಸ್ಕಾರ. ಸೂರ್ಯ ನಮಸ್ಕಾರವು ಯೋಗಾಭ್ಯಾಸದ ಅವಿಭಾಜ್ಯ ಅಂಗವಾಗಿದೆ.ರಥ ಸಪ್ತಮಿ ದಿನದಂದು ಸೂರ್ಯ ನಮಸ್ಕಾರ ಮಾಡುವುದು ಅತ್ಯಂತ ಮಂಗಳಕರ, ಏಕೆಂದರೆ ಇದು ಸೂರ್ಯನಿಗೆ ಸಮರ್ಪಿತವಾದ ದಿನವಾಗಿದ್ದು, ಸೂರ್ಯ ನಮಸ್ಕಾರದ 12 ಭಂಗಿಗಳಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ, ಶಕ್ತಿ, ಏಕಾಗ್ರತೆ ಹೆಚ್ಚಿಸಿ, ದೇಹದಲ್ಲಿ ಧನಾತ್ಮಕ ಶಕ್ತಿಯನ್ನು ತುಂಬಿಸುತ್ತದೆ, ಇದರಿಂದ ಸಕಲ ರೋಗಗಳ ನಿವಾರಣೆಯಾಗಿ ಸೂರ್ಯ ದೇವನ ಅನುಗ್ರಹ ಪ್ರಾಪ್ತಿಯಾಗುತ್ತದೆ. ಈ ದಿನದಂದು ಸಾಮೂಹಿಕವಾಗಿ ಸೂರ್ಯ ನಮಸ್ಕಾರ ಮಾಡುವುದು ಸಂಪ್ರದಾಯವಾಗಿದೆ, ಇದರಿಂದ ದೇಹದ ಕೋಶಗಳು ಬಲಗೊಂಡು ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ.


ಸೂರ್ಯ ನಮಸ್ಕಾರ ಸಂಸ್ಕೃತ ಪದವಾಗಿದ್ದು ಸೂರ್ಯ ಎಂದರೆ ಜಗತ್ತನ್ನೇ ಬೆಳಗುವ ಶಕ್ತಿ, ನಮಸ್ಕಾರ ಎಂದರೆ ಕೃತಜ್ಞತೆ, ಜಗತ್ತನ್ನೇ ಬೆಳಗುವ ಶಕ್ತಿಗೆ ಕೃತಜ್ಞತೆ ಸಲ್ಲಿಸುವುದೇ ಸೂರ್ಯ ನಮಸ್ಕಾರ. ಭೂಮಿಯ ಮೇಲೆ ಇರುವ ಎಲ್ಲಾ ಜೀವಿಗಳಿಗೂ ಜೀವನಕ್ಕೆ ಮೂಲ ಕಾರಣವಾಗಿರುವುದು ಸೂರ್ಯನ ಬೆಳಕು ಆದ್ದರಿಂದ ಈ ಸೂರ್ಯನಿಗೆ ವಂದಿಸುವ ಕ್ರಮವೇ ಸೂರ್ಯನಮಸ್ಕಾರ.

ಸೂರ್ಯನನ್ನು ಆರಾಧಿಸುವ ಕ್ರಮವು ಸೂರ್ಯ ನಮಸ್ಕಾರ ಅಭ್ಯಾಸವಾಗಿದೆ. ಸೂರ್ಯ ನಮಸ್ಕಾರ ಆಸನದ ಕ್ರಮಗಳ ಬಗ್ಗೆ ನೇರವಾಗಿ ಯಾವುದೇ ಗ್ರಂಥದಲ್ಲಿ ಉಲ್ಲೇಖವಾಗದೇ ಇದ್ದರೂ ಸಹ, ಇದು ಗುರು–ಶಿಷ್ಯ ಪರಂಪರೆಯ ಮೂಲಕ ಬೆಳೆದುಬಂದಿರುವ ಅತ್ಯಮೂಲ್ಯವಾದ ಒಂದು ಕ್ರಿಯಾತ್ಮಕ ಯೋಗ ಪದ್ಧತಿಯಾಗಿದೆ.

ಆಧ್ಯಾತ್ಮ ಸಾಧನೆಯ ಸುಲಭ ಮಾರ್ಗಗಳಲ್ಲಿ ಸೂರ್ಯ ನಮಸ್ಕಾರವು ಆಸನ, ಪ್ರಾಣಾಯಾಮ, ಮಂತ್ರ ಮತ್ತು ಧ್ಯಾನದ ಸಮೀಕರಣವನ್ನು ಒಳಗೊಂಡು ಸಂಪೂರ್ಣವಾದ ಯೋಗವೆನಿಸುತ್ತದೆ. ಇದರ ನಿತ್ಯ ಅಭ್ಯಾಸದಿಂದ ದೇಹದಲ್ಲಿನ ಸೌರಶಕ್ತಿಯನ್ನು ಸಮತೋಲನ ಗೊಳಿಸುತ್ತದೆ ಮತ್ತು ಪ್ರಾಣಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ನಮ್ಮ ದೇಹದಲ್ಲಿರುವ ಎಲ್ಲ ಸಂಧುಗಳನ್ನು ಹಾಗೂ ಸ್ನಾಯುಗಳಿಗೂ ಪರಿಪೂರ್ಣ ವ್ಯಾಯಾಮ ನೀಡುತ್ತದೆ ಮತ್ತು ದೇಹದಲ್ಲಿ ರಕ್ತ ಸಂಚಾರ ಹೆಚ್ಚಿಸುತ್ತವೆ.


**ಪ್ರತಿದಿನ ಮಾಡುವ ಸೂರ್ಯ ನಮಸ್ಕಾರದಿಂದಾಗುವ ಪ್ರಯೋಜನಗಳು.**

1. ಸೂರ್ಯ ನಮಸ್ಕಾರವನ್ನು ತ್ವರಿತ ಗತಿಯಲ್ಲಿ ಮಾಡಿದರೆ ತೂಕ ಇಳಿಸಲು ಸಹಾಯ ಮಾಡುತ್ತದೆ.
2. ಸೂರ್ಯ ನಮಸ್ಕಾರ ಮಾಡುವಾಗ ಸ್ನಾಯುಗಳು ಹಿಗ್ಗುತ್ತವೆ ಮತ್ತು ಸಂಕುಚಿತಗೊಂಡು ದೇಹದ ನಮ್ಯತೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.
3. ಸೂರ್ಯ ನಮಸ್ಕಾರವು ಜಠರಗರುಳಿನ ಪ್ರದೇಶಕ್ಕೆ ರಕ್ತ ಪರಿಚಲನೆಯನ್ನು ಹೆಚ್ಚಿಸುವ ಮೂಲಕ ಜೀರ್ಣಾಂಗ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸಿ ಜೀರ್ಣಕಾರಿ ಕಾರ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ.
4. ಸೂರ್ಯ ನಮಸ್ಕಾರದ 12 ಆಸನಗಳನ್ನು ಮಾಡುವಾಗ ಆಳವಾದ ಉಸಿರಾಟವು ಮೆದುಳಿಗೆ ಆಮ್ಲಜನಕವು ಪೂರಕವಾಗಿ , ಇದು ಮನಸ್ಸಿನ ಆತಂಕ, ಒತ್ತಡ ಮತ್ತು ಖಿನ್ನತೆಯನ್ನು ಕಡಿಮೆ ಮಾಡಲು ಸಹಾಯ ಮಾಡಿ ಶಾಂತ ಸ್ಥಿತಿಯನ್ನು ತರುತ್ತದೆ.
5. ಸೂರ್ಯ ನಮಸ್ಕಾರದ ಪ್ರಯೋಜನಗಳು ಭೌತಿಕ ಪ್ರಯೋಜನಗಳನ್ನು ಮೀರಿ ವಿಸ್ತರಿಸುತ್ತವೆ, ಇದು ಮನಸ್ಸನ್ನು ವಿಶ್ರಾಂತಿ ಮಾಡಲು ಸಹಾಯ ಮಾಡುತ್ತದೆ.
6. ಸೂರ್ಯ ನಮಸ್ಕಾರವು ಹೃದಯ ಸ್ನಾಯುಗಳನ್ನು ಉತ್ತೇಜಿಸುವ ಆಸನಗಳನ್ನು ಒಳಗೊಂಡಿದ್ದು ರಕ್ತದೊತ್ತಡವನ್ನು ನಿಯಂತ್ರಿಸಲು ನೈಸರ್ಗಿಕ ಪರಿಹಾರವಾಗಿ ಕಾರ್ಯನಿರ್ವಹಿಸುತ್ತದೆ. ಅನಿಯಮಿತ ಹೃದಯ ಬಡಿತಗಳನ್ನು ಸರಿಪಡಿಸಲು ಸಹಾಯ ಮಾಡುತ್ತದೆ. ಸೂರ್ಯ ನಮಸ್ಕಾರವನ್ನು ನಿಯಮಿತವಾಗಿ ಮಾಡುವುದರಿಂದ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಣದಲ್ಲಿಡಲು ಸಹಾಯ ಮಾಡುತ್ತದೆ, ಇದು ಹೃದಯ ಸಮಸ್ಯೆಗಳನ್ನು ತಡೆಯಲು ಸಹಾಯ ಮಾಡುತ್ತದೆ.
7. ಸಕ್ರಿಯ ಉಸಿರಾಟದ ಪ್ರಕ್ರಿಯೆಯಿಂದ ಶ್ವಾಸಕೋಶಗಳಲ್ಲಿ ಸಂಪೂರ್ಣವಾಗಿ ಗಾಳಿಯಾಡಿ ಕಾರ್ಬನ್ ಡೈಆಕ್ಸೈಡ್ ಮತ್ತು ಇತರ ಹಾನಿಕಾರಕ ಅನಿಲಗಳನ್ನು ತೆಗೆದುಹಾಕುವ ಮೂಲಕ ದೇಹವನ್ನು ನಿರ್ವಿಷಗೊಳಿಸಲು ಸಹಾಯ ಮಾಡುತ್ತದೆ.
8. ಸೂರ್ಯ ನಮಸ್ಕಾರ ಎನ್ನುವುದು ವಿವಿಧ ಯೋಗ ಆಸನಗಳ ಸಂಯೋಜನೆಯಾಗಿದ್ದು ಅದು ರಕ್ತ ಮತ್ತು ಆಮ್ಲಜನಕದ ಪರಿಚಲನೆಯನ್ನು ಹೆಚ್ಚಿಸಲು ಒಟ್ಟಿಗೆ ಕೆಲಸ ಮಾಡುತ್ತದೆ. ಇದು ವಯಸ್ಸಾದ ವಯಸ್ಸಿನಲ್ಲಿಯೂ ಸಹ ಕಾಂತಿಯುತ ತ್ವಚೆ ಮತ್ತು ಆರೋಗ್ಯಕರ ಕೂದಲಿಗೆ ಕಾರಣವಾಗುತ್ತದೆ. ರಕ್ತದ ಹರಿವನ್ನು ಉತ್ತೇಜಿಸುವ ಮೂಲಕ, ಸೂರ್ಯ ನಮಸ್ಕಾರವು ಸುಕ್ಕುಗಳನ್ನು ತಡೆಯುವ ಮೂಲಕ ಚರ್ಮವನ್ನು ಪುನರ್ಯೌವನಗೊಳಿಸುತ್ತದೆ.
9. ಮಹಿಳೆಯರಿಗೆ, ಸೂರ್ಯ ನಮಸ್ಕಾರವು ಋತುಚಕ್ರವನ್ನು ನಿಯಂತ್ರಿಸಲು, ಋತುಚಕ್ರದ ನೋವನ್ನು ಕಡಿಮೆ ಮಾಡಲು ಮತ್ತು ಹಾರ್ಮೋನ್ ಅಸಮತೋಲನವನ್ನು ನಿರ್ವಹಿಸಲು ಸಹಾಯ ಮಾಡುತ್ತದೆ.
10. ಸೂರ್ಯ ನಮಸ್ಕಾರವು ವಾತ, ಪಿತ್ತ ಮತ್ತು ಕಫವನ್ನು ಆಂತರಿಕವಾಗಿ ಸಮತೋಲನ ಗೊಳಿಸಿ ಎಲ್ಲಾ ಪ್ರಕಾರದ ಒತ್ತಡಗಳನ್ನು ದೂರ ಮಾಡಿ ನಮ್ಮಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.



ಸೂರ್ಯ ನಮಸ್ಕಾರ ಮಾಡಲು ಉತ್ತಮ ಸಮಯ

ಸೂರ್ಯ ನಮಸ್ಕಾರ ಮಾಡಲು ಉತ್ತಮ ಸಮಯವೆಂದರೆ ಮುಂಜಾನೆ, ಸೂರ್ಯೋದಯದ ಸಮಯ. ಏಕೆಂದರೆ ಈ ಆಚರಣೆಯು ಸಾಂಪ್ರದಾಯಿಕವಾಗಿ ಸೂರ್ಯನಿಗೆ ಗೌರವ ಸಲ್ಲಿಸುವ ಸಮಯ. ಪ್ರತಿದಿನ ಮುಂಜಾನೆ, ವಾತಾವರಣವು ಪ್ರಾಣ ಶಕ್ತಿಯಿಂದ ತುಂಬಿರುತ್ತದೆ, ಇದನ್ನು ಜೀವ ಶಕ್ತಿ ಎಂದೂ ಕರೆಯುತ್ತಾರೆ. ಜೊತೆಗೆ, ಗಗಿ (ನೇರಳಾತೀತ) ಕಿರಣಗಳು ಚರ್ಮ ಮತ್ತು ಮೂಳೆ ಸಮಸ್ಯೆಗಳನ್ನು ತಡೆಯಲು ಸಹಾಯ ಮಾಡುತ್ತದೆ. ಅಂತೆಯೇ, ಸೂರ್ಯನ ಆರಂಭಿಕ ಕಿರಣಗಳು ದೇಹಕ್ಕೆ ವಿಟಮಿನ್ ಡಿ ಅನ್ನು ಉತ್ಪಾದಿಸುತ್ತವೆ. ಬೆಳಿಗ್ಗೆ ಸೂರ್ಯ ನಮಸ್ಕಾರವನ್ನು ಅಭ್ಯಾಸ ಮಾಡುವುದು ದೇಹ ಮತ್ತು ಮನಸ್ಸನ್ನು ಜಾಗೃತಗೊಳಿಸಲು ಸಹಾಯ ಮಾಡುತ್ತದೆ, ದಿನಕ್ಕೆ ಉಲ್ಲಾಸಕರ ಆರಂಭವನ್ನು ನೀಡುತ್ತದೆ. ಹೆಚ್ಚುವರಿಯಾಗಿ, ಖಾಲಿ ಹೊಟ್ಟೆಯಲ್ಲಿ ಈ ಅಭ್ಯಾಸವನ್ನು ನಿರ್ವಹಿಸುವುದು ಉತ್ತಮ ಜೀರ್ಣಕ್ರಿಯೆ ಮತ್ತು ಪೋಷಕಾಂಶಗಳನ್ನು ಹೀರಿಕೊಳ್ಳಲು ಅನುವು ಮಾಡಿಕೊಡುತ್ತದೆ.



ಸೂರ್ಯ ನಮಸ್ಕಾರವು ಸೂರ್ಯನಿಗೆ ನಮಸ್ಕರಿಸುವುದು ಮಾತ್ರವಲ್ಲದೆ ದೇಹ, ಮನಸ್ಸು ಮತ್ತು ಆತ್ಮದ ಯೋಗಕ್ಷೇಮಕ್ಕೂ ಒಂದು ಸಮಗ್ರ ಆಚರಣೆಯಾಗಿದೆ. ಸೂರ್ಯ ನಮಸ್ಕಾರ ಹಂತಗಳ ಅಸಂಖ್ಯಾತ ಆರೋಗ್ಯ ಪ್ರಯೋಜನಗಳು ಪ್ರಾಚೀನ ಆಚರಣೆಗಳಲ್ಲಿ ಹುದುಗಿರುವ ಬುದ್ಧಿವಂತಿಕೆಗೆ ಸಾಕ್ಷಿಯಾಗಿದೆ. ಒತ್ತಡ ಮತ್ತು ಜಡ ಜೀವನಶೈಲಿಯು ರೂಢಿಯಾಗಿರುವ ಜಗತ್ತಿನಲ್ಲಿ, ಸೂರ್ಯ ನಮಸ್ಕಾರದಂತಹ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದು ನಮ್ಮ ಆರೋಗ್ಯ ಮತ್ತು ಚೈತನ್ಯವನ್ನು ಮರುಪಡೆಯಲು ಪರಿವರ್ತನೆಯ ಹೆಜ್ಜೆಯಾಗಿದೆ. ಮತ್ತೇಕೆ ತಡ ಚಾಪೆಯನ್ನು ಹಾಸಿ , ಉದಯಿಸುತ್ತಿರುವ ನಾಳಿನ ಸೂರ್ಯನನ್ನು ಎದುರುಗೊಳ್ಳುತ್ತಾ ಈ ಪ್ರಾಚೀನ ಮತ್ತು ಆಳವಾದ ಅಭ್ಯಾಸದ ಮೂಲಕ ಪುನರುಜ್ಜೀವನದ ಪ್ರಯಾಣವನ್ನು ಪ್ರಾರಂಭಿಸೋಣ.

**ಸೂರ್ಯನಮಸ್ಕಾರವನ್ನು ನಾನಾ ವಿಧಗಳಲ್ಲಿ ಅಭ್ಯಸಿಸುವ ಕ್ರಮಗಳಿವೆ. ಅವುಗಳಲ್ಲಿ ಸಾಮಾನ್ಯವಾಗಿ ಎಲ್ಲರೂ ಅಭ್ಯಸಿಸುವ ಕ್ರಮವನ್ನು ತಿಳಿದುಕೊಳ್ಳೋಣ.**

ಸೂರ್ಯ ನಮಸ್ಕಾರವು ಹನ್ನೆರಡು ಹಂತದ ಅಭ್ಯಾಸವಾಗಿದ್ದು ಇದರಲ್ಲಿ 12 ಕ್ರಿಯೆಗಳು, 12 ಮಂತ್ರಗಳು ಮತ್ತು 8 ಆಸನಗಳು (4 ಆಸನಗಳು ಪುನರಾವರ್ತನೆಯಾಗಿವೆ ) ಒಳಗೊಂಡಿದೆ, ಕೆಲವು ಪದ್ಧತಿಗಳಲ್ಲಿ 7 ಆಸನಗಳು (5 ಆಸನಗಳು ಪುನರಾವರ್ತನೆಯಾಗಿವೆ) ಒಳಗೊಂಡಿದೆ. ಅವುಗಳೆಂದರೆ .


**ತಾಡಾಸನ,ನಮಸ್ಕಾರಾಸನ,ಹಸ್ತ ಉಟ್ಟಾನಾಸನ**
**ಹಸ್ತಪಾದಾಸನ,ಅಶ್ವ ಸಂಚಾಲನಾಸನ ,ದಂಡಾಸನ**
**ಅಷ್ಟಾಂಗ ನಮಸ್ಕಾರ ,ಭುಜಂಗಾಸನ ,ಅಧೋಮುಖ ಶ್ವಾನಾಸನ,**
**ಅಶ್ವ ಸಂಚಾಲನಾಸನ, ಹಸ್ತಪಾದಾಸನ ಮತ್ತು ನಮಸ್ಕಾರಾಸನ .**



# ಪದ ಬಂಧ

ಜ್ಯೋತಿ ರಾಜೇಶ್





## ಎಡದಿಂದ ಬಲಕ್ಕೆ

2. ಶಂಭು ಶಂಕರನ ಪತ್ನಿಯ ಹೆಸರೇ ಇದು.....(3)5. ಸಿರಿದೇವಿಯ ಪತಿಯ ಶುರುವಲ್ಲಿ ಮನ್ಮಥನೇಕೆ ತಿರುಗಿದ್ದಾನೆ. ....?(4)
7. ಈ ಅಮೃತದಂಥ ಹೆಸರಲ್ಲಿ ವಾರಪತ್ರಿಕೆಯೂ ಇದೆ....(2)
8. ಗೆಲುವು ಪಡೆದ ದಾಶರಥಿಯನ್ನು ಹೀಗೆ ಕರೆಯಿರಿ.(4)
9. ಮನದ 'ಬಯಕೆ'ಯೇ ಹೆಸರಿನ ರೂಪ ಪಡೆದದ್ದಿದು....(2)
11. ಉಮೆಯ ಒಡೆಯನಿಗಿರುವ ಹೆಸರು.....(3)
12. ಆಗಸದಲ್ಲಿರುವ ನಕ್ಷತ್ರವೇ ಇವಳು....?(2)
14. ಧನುರ್ಧಾರಿಯಾಗಿ ಗೆಲುವನ್ನು ಸಾಧಿಸಿದ ಮಧ್ಯಮ ಪಾಂಡವ......(4)
17. ಸಮೀರನಲ್ಲಿರುವ, ಗಿರಿಧರನ ಭಕ್ತೆ......(2)
18. ಸತಿಯ ಜೊತೆಗೇ ಬಂದ ಜನಕನ ಅಳಿಯ....(4)
19. ವಿನಯ, ವಿಧೇಯತೆಯಿಂದ ಕೂಡಿದವರಿಗಿಡಬಹುದಾದ ಹೆಸರು......(3)

## ಮೇಲಿನಿಂದ ಕೆಳಕ್ಕೆ

1. ಪರಿಮಳವ ಸೂಸುತ್ತ ಭರಭರನೇ ಬಂದವಳು...(3)
2. ಬುದ್ಧನ ಮುಖಭಾವದ ಹೆಸರನ್ನು ಹೊಂದಿದವಳು....(2)
3. ಮೂರಕ್ಷರದ ಗೆಲುವನ್ನು ಪಡೆದವನು/ಳು.....(3)
4. ಪತ್ನಿಯಲ್ಲದಿದ್ದರೂ ಸದಾ ಮಾಧವನ ಜೊತೆಗೇ ಇರುವವಳು (2)
6. ಇವಳು ಬಂಗಾರದಂಥ ಹುಡುಗಿ ....(3)
7. ಹೂ. ಬಳ್ಳಿ ಎರೆಡೂ ಸೇರಿ ಆದ ಹುಡುಗಿ ಇವಳು...(4)
8. ಇದು ನಿಮಗಾಗಿ ಕಾದಿರಿಸಲಾದ ಹೆಸರು....(5)
10. ಶಶಾಂಕನನ್ನು ಶಿರದಲ್ಲಿ ಧರಿಸಿದ ಶಂಕರ.....(4)
13. ಗಾಯನಕಲೆ ಬಲ್ಲವಳಿಗೆ ಇಡಬಹುದಾದ ಹೆಸರಲ್ಲಿ ಸಂತನಿದ್ದಾನೆ....(3)
15. ಜಾಮೂನಿನಷ್ಟೇ ಸವಿಯಾದ ಹೆಸರಿನವಳು.....(3)
16. ಒಳ್ಳೆಯ ಬುದ್ಧಿ ಇರುವವಳಿಗೆ ಅನ್ವರ್ಥವಾದ ಹೆಸರಿದು.....(3)
17. ಈ ಹೆಸರಿದ್ದ ಮಾತ್ರಕ್ಕೆ ಇವಳು ಕರಾವಳಿಯವಳೇ ಅನ್ನಬೇಡಿ..... (2)
18. ಹರನ, ಹಾರನ, ಆಹಾರನ, ಸುತನ, ಆರಾಧ್ಯನ, ಪತ್ನಿ ಇವಳು.....(2)

# ಸರ್ಕಾರಿ ಅಧಿಕಾರಿಗಳೆಂದರೆ ರಾಜಕಾರಣಿಗಳ ಗುಲಾಮರೇ?



✍ಹಿರಿಯೂರು ಪ್ರಕಾಶ್

ವಾಸ್ತವ ವರ್ತಮಾನ

ನಮ್ಮ ಎಲ್ಲಾ ರಾಜಕೀಯ ಪಕ್ಷಗಳ ಕೆಲವು ಶಾಸಕರು , ಮಂತ್ರಿಗಳು ಅಥವಾ ಯಾವುದೇ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳಿಗೆ ಸಾಮಾನ್ಯ ವಾಗಿ ಇರಬಹುದಾದ ದೊಡ್ಡ ಖಯಾಲಿ ಎಂದರೆ, ಕೆಲವೊಮ್ಮೆ ಸಾರ್ವಜನಿಕರೆದುರು ಆಪ್ತ ಚೇಲಾಗಳೆದುರು , ತಮ್ಮ ಪವರ್ ಪೌರುಷದ ಬಿಲ್ಡಪ್ ತೋರಿಸಲು ಸರ್ಕಾರಿ ಅಧಿಕಾರಿಗಳ ಮೇಲೆ ಅನಗತ್ಯ ದರ್ಪ ತೋರಿಸುವುದು, ಅವರನ್ನು ಎಲ್ಲರೆದುರು ಬಾಯಿಗೆ ಬಂದಂತೆ ನಿಂದಿಸುವುದು, ಅಶ್ಲೀಲ ಪದಗಳಿಂದ ಅವಮಾನ ಮಾಡುವುದು ಹಾಗೂ ಫೋನ್ ಕರೆಗಳಲ್ಲಿ ಧಂಕಿ ಹಾಕುವುದು.!!

ತಮ್ಮ ಈ ವೀರ ಪ್ರತಾಪ ಜಗಜ್ಜಾಹೀರಾಗಲೆಂದೇ ಒಂದಷ್ಟು ಜನ ಮೀಡಿಯಾ ಕ್ಯಾಮೆರಾ ಮೆನ್ ಗಳನ್ನೂ ಜೊತೆಯಲ್ಲೇ ಸದಾ ಇರುವಂತೆ ಆಯೋಜಿಸಿ ತಾನು ಹೇಗೆಲ್ಲಾ ರೋಪ್ ಹಾಕುತ್ತೇನೆಂಬ ಅದ್ಭುತ ದೃಶ್ಯವನ್ನು ಸೆರೆ ಹಿಡಿದು ಮಾರನೆಯ ದಿನ ಪತ್ರಿಕೆಗಳಲ್ಲಿ ದಪ್ಪ ದಪ್ಪ ಅಕ್ಷರಗಳಲ್ಲಿ ಪ್ರಚಾರವಾಗುವಂತೆ ನೋಡಿಕೊಳ್ಳುವ ಮಹಾನ್ ಪ್ರಚಾರಪ್ರಿಯ ರಾಜಕೀಯ ನಾಯಕರೂ ನಮ್ಮ ನಡುವೆ ಸಾಕಷ್ಟಿದ್ದು, ರಾಜಕಾರಣದಲ್ಲಿನ ಈ ಅರಸೊತ್ತಿಗೆಯ ವರ್ತನೆಗೆ ಕೆಟ್ಟಪರಂಪರೆಯೇ ಇದೆ.

ಕಳೆದ ವಾರ ಶಿಡ್ಲಘಟ್ಟ ನಗರಸಭೆಯ ಪೌರಾಯುಕ್ತೆ ಅಮೃತಾ ಗೌಡ ರವರನ್ನು ಅಲ್ಲಿನ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅತ್ಯಂತ ಅವಾಚ್ಯ ಹಾಗೂ ಕೀಳುಪದಗಳಿಂದ ನಿಂದಿಸಿರುವುದು ಎಲ್ಲೆಡೆ ವೈರಲ್ ಆಗಿ ಆತನ ವಿರುದ್ಧ ಜಾಲತಾಣಗಳಲ್ಲಿ ಪ್ರತಿಭಟನೆ ಜೋರಾದ ಕೂಡಲೇ ತಲೆಮರೆಸಿಕೊಂಡಿದ್ದಾರೆ. ಆ ಅಧಿಕಾರಿ ಒಬ್ಬ ಹೆಣ್ಣುಮಗಳು ಎಂಬುದನ್ನೂ ನೋಡದೇ ಅಸಭ್ಯವಾಗಿ ಆವಾಜ್ ಹಾಕಿ ಕಚೇರಿಗೆ ಬೆಂಕಿ ಹಾಕಿಸುತ್ತೇನೆಂದಿದ್ದ ಈತನ ದುರ್ವರ್ತನೆಯ ಮಾತುಗಳು ಒಬ್ಬ ನಾಗರಿಕನ ಬಾಯಿಂದ ಬರುವಂಥಾದ್ದಲ್ಲ.

ಇದೇ ಹಾದಿಯಲ್ಲಿ ಕೆಲ ದಿನಗಳ ಹಿಂದೆ ಮಾಗಡಿ ಶಾಸಕ ಬಾಲಕೃಷ್ಣ ಕೂಡಾ ಮಾಗಡಿ ತಹಶೀಲ್ದಾರ್ ರವರನ್ನು ಜನರೆದುರೇ ಹೀನಾಯವಾಗಿ ಬೈಯ್ದು "ನಿಮ್ಮ ಮೂತಿಗೆ ಗುದ್ದುವೆ ಎಂದು ಧಂಕಿ ಹಾಕಿದ್ದಲ್ಲದೇ, "ಜನರಿಂದ ನಿನಗೆ ಚಪ್ಪಲಿಯಲ್ಲಿ ಹೊಡೆಸುವೆ " ಎಂದು ಅಸಭ್ಯವಾಗಿ ಬೆದರಿಕೆ ಹಾಕಿದ್ದ ಘಟನೆಯೂ ಮಾಧ್ಯಮಗಳಲ್ಲಿ ವರದಿಯಾಯಿತು.

ಇನ್ನು ಶಾಸಕರು ,ಮಂತ್ರಿಗಳು ಭಾಗವಹಿಸುವ. ಯಾವುದೇ ಸಭೆ– ಸಮಾರಂಭ ಅಥವಾ ಕೆಡಿಪಿ, ದಿಷಾ, ವಿವಿಧ ಪ್ರಗತಿ ಪರಿಶೀಲನಾ ದಂತಹ ಸರ್ಕಾರಿ ಮೀಟಿಂಗುಗಳಲ್ಲಿ ಅಧಿಕಾರಿಗಳು ಉಸಿರುಬಿಗಿ ಹಿಡಿದೇ ಭಾಗವಹಿಸುವ ವಾತಾವರಣವಿದೆ. ಅಂತಹ ಸಭೆಗಳಲ್ಲಿ ಮೂಲ ವಿಷಯದಿಂದ ಹೊರತಾದ ರಾಜಕೀಯವನ್ನು ಮನದಲ್ಲಿಟ್ಟುಕೊಂಡು ಮೀಡಿಯಾಗಳೆದುರು ಅಬ್ಬರದ ದನಿಯಲ್ಲಿ ಅಸಭ್ಯ ಭಾಷೆ ಬಳಸಿ ಅಧಿಕಾರಿಗಳನ್ನು ನಿಂದಿಸುವುದೇ ಇವರ ಮೂಲ ಉದ್ದೇಶವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಸರ್ಕಾರಿ ಅಧಿಕಾರಿಗಳನ್ನು ಗುಲಾಮರಂತೆ ಕಾಣುವ ಶಾಸಕಾಂಗದ ಮನೋಭಾವಕ್ಕೆ ದೀರ್ಘ ಇತಿಹಾಸವೇ ಇದೆ. ದಶಕಗಳ ಹಿಂದೆ ಜೆ.ಎಚ್ . ಪಟೇಲರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಶಿವಮೊಗ್ಗದ ಸಭೆಯೊಂದರಲ್ಲಿ ಪೊಲೀಸ್ ಅಧಿಕಾರಿಯನ್ನು " ಏಯ್ ಕೆಲಸಕ್ಕೆ ಬಾರದ ಈಡಿಯಟ್ " ಎಂದು ಎಲ್ಲರೆದುರೇ ಗದರಿದ್ದರು. ಇನ್ನು ಈಗಿನ ಮುಖ್ಯಮಂತ್ರಿಯಂತೂ ಉನ್ನತ ಪೊಲೀಸ್ ಅಧಿಕಾರಿಯ ಮೇಲೂ ಕೈ ಎತ್ತುವ ದರ್ಪ ತೋರುತ್ತಾರೆ, ವೇದಿಕೆ ಮೇಲೆ ಕುಳಿತ ಜಿಲ್ಲಾಧಿಕಾರಿಯನ್ನೂ ಬೈಯ್ದು ಅಲ್ಲಿಂದ ಬೇರೆಡೆಗೆ ಕೂರುವಂತೆ ಮಾಡಿ ಅಪಮಾನವನ್ನೂ ಮಾಡುತ್ತಾರೆ.

ಈ ಹಿಂದೆ ಸಚಿವರಾಗಿದ್ದ ಮಾಧುಸ್ವಾಮಿಯವರಂತೂ ಒಂದು ಸಭೆಯಲ್ಲಿ ಎಂಜಿನಿಯರ್ ಒಬ್ಬರಿಗೆ " ನೀನು ಹೆಂಡತಿ ಸೀರೆ ಒಗೆಯಲಿಕ್ಕೆ ಲಾಯಕ್ಕು " ಎಂದೇ ಝಾಡಿಸಿದ್ದರು. ಶಾಸಕ ಎನ್. ರವಿಕುಮಾರ್ ಕಲ್ಬುರ್ಗಿ ಡಿ.ಸಿ.ಯವರನ್ನು ಪಾಕಿಸ್ತಾನದಿಂದ ಬಂದವರೆಂದು ಹಿಯ್ಯಾಳಿಸಿದ್ದೂ ಇನ್ನೂ ಹಸಿರಾಗಿದೆ. ಉಳಿದಂತೆ ಹಲವು ಶಾಸಕರು ತಮ್ಮ ಅಧೀನ ಅಧಿಕಾರಿಗಳನ್ನು ತೀರ ಸೊಂಟದ ಕೆಳಗಿನ ಭಾಷೆ ಬಳಸಿ ಧಂಕಿ ಹಾಕುವ ಆಡಿಯೋಗಳು ವ್ಯಾಪಕವಾಗಿ ಜಾಲತಾಣಗಳಲ್ಲಿ ಆಗಾಗ್ಗೆ ಹರಿದಾಡುತ್ತಲೇ ಇವೆ.

ಶಾಸಕರು, ಮಂತ್ರಿಗಳನ್ನು ಬಿಡಿ ! ಅವರ ಯಃಕಶ್ಚಿತ್ ಚಂಚ–ಚೇಲಾಗಳಾದವರೂ ಸಹಾ ಪೊಲೀಸ್ ಅಧಿಕಾರಿಗಳೂ ಸೇರಿದಂತೆ ಸರ್ಕಾರಿ ಅಧಿಕಾರಿಗಳ ಮೇಲೆ ದಬ್ಬಾಳಿಕೆ ನಡೆಸುವ ಮಟ್ಟಕ್ಕೆ , ಕೊಲೆ ಬೆದರಿಕೆ ಹಾಕುವ ರೇಂಜಿಗೆ ಹಾಗೂ ಆಡಳಿತದ ನಿರ್ದೇಶನ ನೀಡುವ ಮಟ್ಟಕ್ಕೆ ಎಗರಾಡುವ ಸೀನ್‌ಗಳು ನಿತ್ಯ ನಿರಂತರ.!

ಈ ಹಿನ್ನೆಲೆಯಲ್ಲಿ ನನ್ನ ಮೂಲಭೂತ ಪ್ರಶ್ನೆಯೆಂದರೆ, ಈ ರಾಜಕೀಯ ಕ್ಷೇತ್ರದವರು ಸರ್ಕಾರಿ ಅಧಿಕಾರಿಗಳನ್ನು ಹೀಗೆಲ್ಲಾ ವೈಯಕ್ತಿಕವಾಗಿ, ಹೀನಾಯವಾಗಿ ನಿಂದಿಸಬಹುದಾದ ನಿಯಮಾವಳಿಗಳು ಆಡಳಿತದಲ್ಲಿವೆಯೇ...? ಅಧಿಕಾರಿಗಳೆಂದರೆ ತಮ್ಮ ಗುಲಾಮರೆಂದು ಭಾವಿಸಿಯೇ ಮಾತನಾಡುವ ಅವರ ದರ್ಪವನ್ನು ಅಧಿಕಾರಿಗಳು ಮೌನವಾಗಿ ಸಹಿಸಲೇಬೇಕೆ..? ತಮ್ಮ ನಿರೀಕ್ಷೆಗೆ ತಕ್ಕಂತೆ ಒಬ್ಬ ಅಧಿಕಾರಿ ಕೆಲಸ ಮಾಡದಿದ್ದರೆ ಅದನ್ನು ಹೇಳುವ ರೀತಿಗೂ, ಕ್ರಮ ತೆಗೆದುಕೊಳ್ಳುವ ವಿಧಾನಕ್ಕೂ ಒಂದು ನೀತಿ– ನಿಯಮ ಸಂಯಮ, ಮಾನ ಮರ್ಯಾದೆ ಅಂತ ಕಾನೂನುಗಳಲ್ಲಿ ಇರುವುದಿಲ್ಲವೇ.?

ಕೇವಲ ಅಲ್ಪಕಾಲ ಅಧಿಕಾರದಲ್ಲಿರುವ ಒಬ್ಬ ವಿದ್ಯಾವಂತ ಅಥವಾ ಅವಿದ್ಯಾವಂತ ಶಾಸಕ, ಸಚಿವ ಅಥವಾ ಒಬ್ಬ ರಾಜಕೀಯ ಪುಢಾರಿ , ಕನಿಷ್ಠ ಮುವ್ವತ್ತು ವರ್ಷ ಸೇವೆಯಲ್ಲಿರಬಹುದಾದ ಉನ್ನತ/ ಅರ್ಹ ಶಿಕ್ಷಣ ಪಡೆದೇ ಉದ್ಯೋಗಕ್ಕೆ ಸೇರಿರುವ ಸರ್ಕಾರಿ ನೌಕರನನ್ನು ಸಾರ್ವಜನಿಕವಾಗಿ ಹೀನಾಯವಾಗಿ ನಿಂದಿಸುವ ಈ ಕೆಟ್ಟ ಪರಂಪರೆಗೆ ಕೊನೆಯೇ ಇಲ್ಲವೇ...? ಅದಕ್ಷ, ಅಸಮರ್ಥ , ತಪ್ಪಿತಸ್ಥ ಅಧಿಕಾರಿಗಳನ್ನು ಸಾರ್ವಜನಿಕವಾಗಿ ಅಪಮಾನ ಮಾಡಿಯೇ ಸರಿಪಡಿಸಬೇಕೇ...?

ಟಾಪಿಕ್ಕು ಒಂದೆಡೆ ಇರಲಿ. ಇದು ಕೇವಲ ಒನ್‌ಸೈಡೆಡ್ ವರ್ಷನ್ನು..! ಈಗ ಇನ್ನೊಂದು ಮುಖದ ಮುಖ್ಯವಿಷಯಕ್ಕೆ ನೇರವಾಗಿ ಬರುತ್ತೇನೆ.

ಇಂದಿಗೂ ನನಗೆ ಉತ್ತರ ಸಿಗದ ಪ್ರಶ್ನೆಯೆಂದರೆ, ಕೆಲವು ರಾಜಕಾರಣಿಗಳು , ಶಾಸಕರು, ಮಂತ್ರಿಗಳು ಅಥವಾ ರಾಜಕೀಯ ನಾಯಕರ ಚೇಲಾಗಳು ತಮ್ಮ ನಿರೀಕ್ಷೆಗೆ ತಕ್ಕ ಕೆಲಸವಾಗದಿದ್ದರೆ, ತಮ್ಮ ಮಾತು ನಡೆಯದಿದ್ದರೆ ನಿಯಮಾವಳಿಗಳಲ್ಲಿರುವಂತೆ ಅಧಿಕಾರಿಯ ವೃತ್ತಿಯ ವ್ಯಾಪ್ತಿಯೊಳಗೆ ಏನು ಬೇಕಾದರೂ ಕ್ರಮ ತೆಗೆದುಕೊಳ್ಳಲಿ, ಮಾತನಾಡಲಿ. ಆದರೆ ಅದಕ್ಕಾಗಿ ಸಾರ್ವಜನಿಕವಾಗಿ ಎಲ್ಲೆಮೀರಿ ಅಸಭ್ಯವಾಗಿ, ಅಶ್ಲೀಲವಾಗಿ ನಿಂದಿಸುತ್ತಿದ್ದರೂ ಕೆಲವು ಅಧಿಕಾರಿಗಳೇಕೆ ಅದನ್ನು ತಕ್ಷಣವೇ ಪ್ರತಿಭಟಿಸದೇ ತಮ್ಮ ಸ್ವಾಭಿಮಾನ, ಆತ್ಮಗೌರವ ಒತ್ತೆ ಇಟ್ಟವರಂತೆ ಮೌನವಾಗಿ ಸಹಿಸಿಕೊಳ್ಳುತ್ತಾರೆ..?

ನನಗನಿಸಿದಂತೆ ಬಹುಶಃ ಅದಕ್ಕೆ ಒಂದೆರಡು ಕಾರಣಗಳಲ್ಲದೇ ಬೇರೇನೂ ಇರಲಿಕ್ಕೆ ಛಾನ್ಸೇ ಇಲ್ಲ .

ಆ ರೀತಿ ರಾಜಕೀಯದವರಿಂದ ಕೆಟ್ಟದಾಗಿ ಬಯ್ಯಿಸಿಕೊಳ್ಳುವ ಅಧಿಕಾರಿ ಅಸಮರ್ಥನಾಗಿರಬಹುದು ಇಲ್ಲವೇ ಕೊಟ್ಟ ಕೆಲಸವನ್ನು ಶ್ರದ್ಧೆಯಿಂದ ನಿಷ್ಠೆಯಿಂದ ನಿರ್ವಹಿಸದೇ ಪ್ರಯೋಜನಕ್ಕೆ ಬಾರದವನಾಗಿರಬಹುದು.

ಅಂತಹ ಅಧಿಕಾರಿ ಜನವಿರೋಧಿಯಾಗಿರಬಹುದು, ಅವನ ಮೇಲೆ ಕರ್ತವ್ಯ ಲೋಪವೆಸಗುವ, ಜನರಿಗೆ ಸ್ಪಂದಿಸದ, ಅದಕ್ಷ ಎಂಬ ಸಾಕಷ್ಟು ದೂರುಗಳು ಬಂದಿರಬಹುದು. ಇಲ್ಲವೇ ಆತ ತಮ್ಮ ವಿರೋಧಪಕ್ಷದವರ ಕಡೆಯವನು ಎಂಬ ಗುಮಾನಿಯೂ ಇರಬಹುದು.

ಎಲ್ಲಕ್ಕಿಂತ ಮಿಗಿಲಾಗಿ ಅಂಥಾ ಅಧಿಕಾರಿ ಭ್ರಷ್ಟಾತಿಭ್ರಷ್ಟನಾಗಿರಬಹುದು. ಸಂಬಳಕ್ಕಿಂತ ಗಿಂಬಳದ ಎಂಜಲು ತಿಂದೇ ಅಭ್ಯಾಸವಿರುವ ಪರಮ ಲಂಚಕೋರನಾಗಿರಬಹುದು. ಸಿಕ್ಕಿದ್ದನ್ನೆಲ್ಲಾ ದೋಚುವ ಅಭ್ಯಾಸದವನಾಗಿದ್ದು ,ಅಂಥವನ ಅನೇಕಾನೇಕ ದೌರ್ಬಲ್ಯಗಳು ರಾಜಕೀಯದವರಿಗೆ ಗೊತ್ತಿರಬಹುದು.

ಇದಾವುದೂ ಇಲ್ಲದಿದ್ದರೂ ಸುಮ್ಮನೇ ಎದುರು ಮಾತನಾಡಿ ತಾನೇಕೆ ಅವರ ಕೆಂಗಣ್ಣಿಗೆ ಗುರಿಯಾಗಿ ದೂರದ ನೀರು ನೆರಳಿಲ್ಲದ ಊರಿಗೋ ಅಥವಾ ಕೆಲಸಕ್ಕೆ ಬಾರದ ಪೋಸ್ಟಿಂಗಿಗೋ ಎತ್ತಾಕಿಸಿಕೊಳ್ಳಬೇಕು " ಎನ್ನುವ ಜಾಣತನದಿಂದ ಊಹಿಸಿಕೊಳ್ಳುವ ಅಭ್ಯಾಸಕ್ಕೆ ಒಗ್ಗಿರಲೂ ಬಹುದು.

ಈಗ ಹೇಳಿ..? ಆತ್ಮಗೌರವ, ಸ್ವಾಭಿಮಾನ, ಪ್ರಾಮಾಣಿಕತೆ ಹಾಗೂ ನಿಷ್ಠೆ ಬದ್ಧತೆಯಿಂದ ಯಾವ ಎಂಜಲುಕಾಸಿಗೂ ಆಸೆಪಡದ ಒಬ್ಬ ಸರ್ಕಾರಿ ಅಧಿಕಾರಿ ತನ್ನ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸುತ್ತಾ ಈ ಮೇಲಿನ ಯಾವ ವ್ಯಾಪ್ತಿಗೂ ಬರುವುದಿಲ್ಲವೆಂದರೆ ಅಂಥವರು ರಾಜಕೀಯದ ಯಾವ ದೊಣೆನಾಯಕನಿಗೂ ಹೆದರುವ ಅಥವಾ ಅವರಿಂದ ಸಾರ್ವಜನಿಕವಾಗಿ ನಿಂದಿಸಿಕೊಳ್ಳುವ, ಅಪಮಾನಕ್ಕೊಳಗಾಗುವ ದರ್ದು ಇದೆಯೇ...?

ನೆನಪಿಡಿ....ಸಾರ್ವಜನಿಕ ಬದುಕಿನಲ್ಲಿ ನಾವು ಯಾರಿಂದಲಾದರೂ ತೀರ ಕೆಟ್ಟದಾಗಿ ಹಿಯ್ಯಾಳಿಸಿಕೊಂಡು ವೈಯಕ್ತಿಕವಾಗಿ ಅಪಮಾನಕ್ಕೊಳಗಾಗುತ್ತಿದ್ದರೂ ಬಾಯಿಮುಚ್ಚಿಕೊಂಡು ತೆಪ್ಪಗಿರುತ್ತೇವೆಂದರೆ , ಅಲ್ಲಿ ಖಂಡಿತಾ ನಮ್ಮ ದೌರ್ಬಲ್ಯಗಳ ಪಾಲು ದೊಡ್ಡದಿದೆ ಎಂದರ್ಥ. ಈ ವೀಕ್‌ನೆಸ್ಸನ್ನು ಹಿಡಿದೇ ಶಾಸಕಾಂಗ ಕಾರ್ಯಾಂಗದ ಮೇಲೆ ಎಲ್ಲೆ ಮೀರಿ ಸವಾರಿ ಮಾಡುತ್ತಿರುವುದು.


ಜೀವನದಲ್ಲಿ ದುಡ್ಡು ಮತ್ತು ಆತ್ಮಗೌರವಗಳಿಗೆ ನಾವು ಕೊಡುವ ಆದ್ಯತೆಗಳ ಆಧಾರದ ಮೇಲೆ ಇಂತಹಾ ಘಟನೆಗಳು ನಿರಂತರವಾಗಿ ಜರುಗುತ್ತಲೇ ಇರುತ್ತವೆ.

**ಮರೆಯುವ ಮುನ್ನ:** ಏನೇ ಆದರೂ ರಾಜಕೀಯದಲ್ಲೂ ಸಭ್ಯರು, ಸರ್ಕಾರಿ ಅಧಿಕಾರಿಗಳಲ್ಲೂ ಪ್ರಾಮಾಣಿಕರು ಇನ್ನೂ ಅಲ್ಲಲ್ಲಿ ಕ್ರಿಯಾಶೀಲರಾಗಿರುವುದರಿಂದಲೇ ನೈತಿಕತೆಯ ಕಾಲಚಕ್ರ ಎಲ್ಲ ದುಷ್ಟತನಗಳನ್ನೂ ಎದುರಿಸಿ ಮುನ್ನಡೆಯುತ್ತಿರುವುದು.

ಒಬ್ಬ ಮನುಷ್ಯ ತನ್ನ ಬದುಕಿನಲ್ಲಿ ಸಾವಿರಾರು ಕೋಟಿ ಕ್ರಮಬದ್ಧವಾಗಿ ಅಥವಾ ಅಕ್ರಮವಾಗಿ ಸಂಪಾದಿಸಬಹುದು. ಆದರೆ ಸ್ವಾಭಿಮಾನ ಆತ್ಮಗೌರವವೆಂಬುದನ್ನು ಕಳೆದುಕೊಂಡು ಸಂಪಾದಿಸಿ ಬದುಕುವುದಿದೆಯಲ್ಲಾ.....ಅದು ಅತ್ಯಂತ ನಿಕೃಷ್ಟವಾದ ಬದುಕು. ಸಾರ್ವಜನಿಕವಾಗಿ ತನ್ನದಲ್ಲದ ತಪ್ಪಿಗೆ ಉದ್ದೇಶಪೂರ್ವಕವಾಗಿ ನಿಂದನೆಗೊಳಗಾದಾಗ ಆತನೊಳಗೆ ಒಂದು ಸಣ್ಣಮಟ್ಟದ ಸ್ವಾಭಿಮಾನದ ಸ್ಪಾರ್ಕು ಕೂಡಾ ಸಿಡಿಯಲಿಲ್ಲವೆಂದರೆ ಅದು ಅಪಮಾನ ಮಾಡುವವರ ತಪ್ಪಂತೂ ಅಲ್ಲ.

ಸರ್ಕಾರ ದಕ್ಷತೆಯಿಂದ ನಡೆಸುವುದು ಎಂದರೆ ಜನರೆದುರು ತೋರಿಕೆಗಾಗಿ, ಮೀಡಿಯಾಗಳಲ್ಲಿ ಸಿಗುವ ಒಣಬಿಲ್ಡಪ್ ಗಾಗಿ , ಹುಸಿಪ್ರಚಾರಕ್ಕಾಗಿ , ರಾಜಕೀಯ ಕಾರಣಕ್ಕಾಗಿ ಅಥವಾ ಹಿತ್ತಾಳೆ ಕಿವಿಯಾಗಿ ಕಾರ್ಯಾಂಗದ ಮೇಲೆ ದಬ್ಬಾಳಿಕೆ ಮಾಡುವುದಷ್ಟೇ ಅಲ್ಲ. ಅದಕ್ಕಿಂತಲೂ ಬೇರೆಯದೇ ಆದ ಸಭ್ಯ ಸೌಜನ್ಯಯುತ ದಾರಿಗಳಿವೆ. "ಕಾರ್ಯಾಂಗವೆಂದರೆ ತನ್ನ ಗುಲಾಮರಲ್ಲ" ಎಂಬ ಸರಳ ಸತ್ಯವನ್ನು ಅರಿಯುವ ಯತ್ನವನ್ನು ಶಾಸಕಾಂಗ ಮಾಡಲಿ.

ಯಾರೇ ಆಗಲೀ ಮೊದಲು ತನ್ನನ್ನು ತಾನು ಸ್ವಚ್ಛವಾಗಿಟ್ಟುಕೊಂಡು ಆನಂತರ ಊರನ್ನು ಸ್ವಚ್ಛಮಾಡುವ ಕಡೆ ಗಮನಹರಿಸಿದಲ್ಲಿ ಒಳ್ಳೆಯ ಫಲಿತಾಂಶ ಬಂದೀತು...!



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,